ಸೋಮವಾರ, ಅಕ್ಟೋಬರ್ 27, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 296 | ಪುಟ 12

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಶ್ವಾನ ಸ್ಪರ್ಧೆ
ಮೈಸೂರಿನ ಸ್ಕೌಟ್ಸ್ ಮೈದಾನದಲ್ಲಿ ಭಾನುವಾರ ನಡೆದ 11ನೇ ರಾಷ್ಟ್ರ ಮಟ್ಟದ ಶ್ವಾನ ಸ್ಪರ್ಧೆಯಲ್ಲಿ ಯುವತಿಯೊಬ್ಬರು ತಮ್ಮ ಶ್ವಾನದೊಂದಿಗೆ ಪೋಸ್ ನೀಡಿದ್ದು ಹೀಗೆ...

ರಾಧಾ ಸ್ಪಿನ್ ಮೋಡಿ
ಭಾರತ ಮಹಿಳಾ ಕ್ರಿಕೆಟ್ ತಂಡದ ಸ್ಪಿನ್ನರ್ ರಾಧಾ ಯಾದವ್ ಅವರು ಭಾನುವಾರ ಬಾಂಗ್ಲಾ ತಂಡದ ಎದುರು ನಡೆದ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ 3 ವಿಕೆಟ್ ಗಳಿಸಿದರು

'ಸಾರಂಗಪಾಣಿ ಗಣಿಗಾರಿಕೆ ಪ್ರಸ್ತಾವ ತಿರಸ್ಕಾರ' 4

'ದಲಿತರು ಮೀಸಲಾತಿ ಹುಚ್ಚು ಬಿಡಬೇಕು' 7

ಮನೆ ಕೆಲಸದವರ 'ಕಲ್ಯಾಣ' ಮಸೂದೆ

ಬೆಳಗಾವಿ ಅಧಿವೇಶನದಲ್ಲಿ ಮಂಡನೆಗೆ ಸಿದ್ಧತೆ • ವಿಶೇಷ ಮಂಡಳಿ, ನಿಧಿ ಸ್ಥಾಪನೆ

• ಬಾಲಕೃಷ್ಣಪಿ.ಎಚ್.

ಬೆಂಗಳೂರು: ಮನೆ ಕೆಲಸದವರಿಗೆ ಕನಿಷ್ಠ ವೇತನ, ವಾರಕ್ಕೆ 48 ಗಂಟೆ ದುಡಿಮೆ, ಒ.ಟಿ , ವಾರಕ್ಕೊಂದು ರಜೆ, ವಿಶ್ರಾಂತಿ, ವಾರ್ಷಿಕ ರಜೆ ಇತ್ಯಾದಿ ಸೌಲಭ್ಯಗಳನ್ನು ಒಳಗೊಂಡ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಉದ್ದೇಶದ 'ಕರ್ನಾಟಕ ಗೃಹ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಮಸೂದೆ– 2025' ಅನ್ನು ಬೆಳಗಾವಿ ಅಧಿವೇಶನದಲ್ಲಿ ಮಂಡಿಸಲು ಸರ್ಕಾರ ಸಿದ್ಧತೆ ನಡೆಸಿದೆ.

ಉದ್ದೇಶಿತ ಮಸೂದೆಯು ರಾಜ್ಯದಲ್ಲಿ ಅಧಿಸೂಚಿತವಾಗಿರುವ ಎಲ್ಲ ನಗರ ಪಾಲಿಕೆಗಳಿಗೆ ಅನ್ವಯ ಆಗಲಿದ್ದು, ಮಸೂದೆಯ ಕರಡನ್ನು ಸಿದ್ಧಪಡಿಸಲಾಗಿದೆ.

ಮನೆ ಕೆಲಸದವರ ಕಲ್ಯಾಣಕ್ಕಾಗಿ ವಿಶೇಷ ಮಂಡಳಿ ಮತ್ತು ನಿಧಿ ಸ್ಥಾಪಿಸುವ ಬಗ್ಗೆಯೂ ಮಸೂದೆಯಲ್ಲಿ ಪ್ರಸ್ತಾವವಿದೆ. ಕಲ್ಯಾಣ ನಿಧಿಗೆ ಮನೆ ಕೆಲಸದವರು, ಉದ್ಯೋಗದಾತರು, ಮನೆ ಕೆಲಸದವರನ್ನು ಪೂರೈಸುವ ಏಜೆನ್ಸಿಗಳು ನೀಡುವ ಅಥವಾ ಪಡೆಯುವ ಸಂಭಾವನೆಯ ಶೇ 5ರಷ್ಟು ಸೆಸ್ ಪಾವತಿಸಬೇಕಾಗುತ್ತದೆ ಎಂಬ ಅಂಶ ಈ ಮಸೂದೆಯಲ್ಲಿದೆ.

ಅಲ್ಲದೆ, ಮನೆ ಕೆಲಸದವರ ಸುರಕ್ಷತೆ ನಿಯಮಗಳ ಅಡಿ ಸಂಗ್ರಹಿಸಲಾಗುವ ಎಲ್ಲ ದಂಡಗಳು, ಕೇಂದ್ರ ಅಥವಾ ರಾಜ್ಯ ಸರ್ಕಾರ ನೀಡಿದ ಅನುದಾನಗಳು, ಮಂಡಳಿ ಮಾಡಿದ ಬ್ಯಾಂಕ್ ಹೂಡಿಕೆಗಳಿಂದ ಗಳಿಸಿದ ಬಡ್ಡಿ ಆದಾಯಗಳು, ಮನೆ ಕೆಲಸದವರ, ಉದ್ಯೋಗದಾತರ ನೋಂದಣಿಯ ಶುಲ್ಕವೂ ಈ ಕಲ್ಯಾಣ ನಿಧಿಗೆ ಜಮೆ ಆಗಲಿದೆ.

ಮನೆ ಕೆಲಸದವರ ಹಕ್ಕುಗಳನ್ನು ರಕ್ಷಿಸಲು ಮತ್ತು ಅವರಿಗೆ ಸಾಮಾಜಿಕ ಭದ್ರತೆ ಒದಗಿಸಲು ರೂಪಿಸಿರುವ ಈ ಕರಡು ಮಸೂದೆಯು ಲಿಖಿತ ಒಪ್ಪಂದ, ಕಡ್ಡಾಯ ನೋಂದಣಿ, ಕನಿಷ್ಠ ವೇತನ, ನಿಗದಿತ ಕೆಲಸದ ಸಮಯ, ವಾರದ ರಜೆ, ಹೆರಿಗೆ ರಜೆ ಸೇರಿದಂತೆ ಅನೇಕ ಸೌಲಭ್ಯಗಳನ್ನು ಕರಡು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ನೋಂದಣಿ: ಮಸೂದೆಯ ಪ್ರಕಾರ, ಉದ್ಯೋಗದಾತರು, ಸೇವಾ ಪೂರೈಕೆದಾರರು ಹಾಗೂ ರಾಜ್ಯದ ಒಳಗೆ ಮನೆ ಕೆಲಸ ಮಾಡುವ ಎಲ್ಲರೂ ನೋಂದಣಿ ಮಾಡಿಕೊಳ್ಳಬೇಕು.

ಡಿಜಿಟಲ್ ಪೋರ್ಟಲ್ ಮೂಲಕವೇ ನೋಂದಣಿ ಮಾಡಲು ಅವಕಾಶ ಕಲ್ಪಿಸಲಾಗುವುದು. ನೋಂದಣಿ ಮಾಡಿಕೊಳ್ಳದೆ ಮನೆ ಕೆಲಸದವರನ್ನು ನೇಮಕ ಮಾಡಿಕೊಳ್ಳುವಂತಿಲ್ಲ. ನೋಂದಣಿ ಮಾಡಿಕೊಂಡರೂ ಕಾಲ ಕಾಲಕ್ಕೆ ನವೀಕರಿಸದಿದ್ದರೆ ಉದ್ಯೋಗದಾತರಿಗೆ ಆರಂಭಿಕ ಹಂತದಲ್ಲಿ ದಂಡ, ಆ ನಂತರ ಸೆರೆವಾಸ ವಿಧಿಸಲು ಮಸೂದೆಯಲ್ಲಿ ಪ್ರಸ್ತಾವಿಸಲಾಗಿದೆ. ಗೃಹ ಕಾರ್ಮಿಕ ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸಿದರೆ ದಂಡ ಮತ್ತು ಶಿಕ್ಷೆಗಳಿರಲಿವೆ.

ದೇಶದಲ್ಲಿಯೇ ಮೊದಲು

ದೇಶದಲ್ಲಿಯೇ ಮೊದಲ ಬಾರಿಗೆ ಮನೆ ಕೆಲಸದವರಿಗೆ ಸಾಮಾಜಿಕ ಭದ್ರತೆ ಒದಗಿಸಲು ರಾಜ್ಯ ಸರ್ಕಾರವು ಮುಂದಾಗಿದೆ. ಅದಕ್ಕಾಗಿ ಕರಡು ಮಸೂದೆ ತಯಾರಿಸಿ, ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ ಎಂದು ಕಾರ್ಮಿಕ ಇಲಾಖೆಯ ಹೆಚ್ಚುವರಿ ಆಯುಕ್ತ ಮಂಜುನಾಥ್ ಜಿ. ಮಾಹಿತಿ ನೀಡಿದ್ದಾರೆ.

ಮನೆ ಕೆಲಸದವರ ಕುಂದು ಕೊರತೆಗಳನ್ನು ಪರಿಹರಿಸುವುದಕ್ಕಾಗಿ ರಾಜ್ಯಮಟ್ಟದಲ್ಲಿ ಸಲಹಾ ಮಂಡಳಿ, ಜಿಲ್ಲಾ ಮಟ್ಟದ ಕುಂದುಕೊರತೆ ಪರಿಹಾರ ಸಮಿತಿ ರಚನೆ ಆಗಲಿದೆ ಎಂದು ತಿಳಿಸಿದ್ದಾರೆ.

'ವಾಗ್ದಾನ ಉಳಿಸಿಕೊಳ್ಳಲಿ'

'ಕರ್ನಾಟಕ ಗೃಹ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಮಸೂದೆ'ಯ ಬಗ್ಗೆ ಮನೆ ಕೆಲಸದವರ ಸಂಘಟನೆಗಳ ಒಕ್ಕೂಟದೊಂದಿಗೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಚರ್ಚೆ ನಡೆಸಿದ್ದರು. ಮನೆ ಕೆಲಸದವರಿಗೆ ಸಾಮಾಜಿಕ ಭದ್ರತೆ ಒದಗಿಸಲು ಅಗತ್ಯವಾದ ವೆಚ್ಚವನ್ನು ಕಾರ್ಮಿಕರು ಮತ್ತು ಮಾಲೀಕರಿಂದ ಭರಿಸುವ ಪ್ರಸ್ತಾವ ಕೈಬಿಡುವುದಾಗಿ ಅವರು ಭರವಸೆ ನೀಡಿದ್ದರು. ಸಚಿವರು ಮಸೂದೆಯನ್ನು ಅಂಗೀಕರಿಸುವಾಗ ಈ ವಾಗ್ದಾನವನ್ನು ಉಳಿಸಿಕೊಳ್ಳಬೇಕು ಎಂದು ಒಕ್ಕೂಟದ ಸಂಚಾಲಕಿ ಜಬೀನಾ ಖಾನಂ ಆಗ್ರಹಿಸಿದ್ದಾರೆ.

ಜಬೀನಾ ಖಾನಂ

'ಹುಸಿಯಾಗದಿರಲಿ ಭರವಸೆ'

ಎಂ. ಕರಿಬಸಪ್ಪ

'ಮನೆ ಕೆಲಸದವರಿಗೆ ಹೊರೆಯಾಗಬಾರದು ಎಂಬ ಸರ್ಕಾರದ ನಿಲುವು ಸರಿಯಾಗಿದೆ. ಈ ಬಗ್ಗೆ ಮನೆ ಕೆಲಸದವರೊಂದಿಗೆ ಚರ್ಚೆ ಮಾಡುವಾಗ ನೀಡಿರುವ ಮಾಹಿತಿ, ಕರಡಿನಲ್ಲಿರುವ ವಿವರಗಳು ಮನೆ ಕೆಲಸದವರ ಅಭಿವೃದ್ಧಿಗೆ ಪೂರಕವಾಗಿವೆ. ಮಸೂದೆ ಅಂಗೀಕಾರವಾಗುವ ಹೊತ್ತಿನಲ್ಲಿ ಅವುಗಳನ್ನು ಬದಲಾಯಿಸಬಾರದು. ಕರಡಿನಲ್ಲಿ ಇರುವ ಮತ್ತು ನೀಡಿರುವ ಭರವಸೆಗಳು ಹುಸಿಯಾಗದಂತೆ ನೋಡಿಕೊಳ್ಳಬೇಕು' ಎಂದು ಒಕ್ಕೂಟದ ಸದಸ್ಯ ಎಂ. ಕರಿಬಸಪ್ಪ ತಿಳಿಸಿದರು.

'ಕಲ್ಯಾಣ'ಕ್ಕಾಗಿ ಏನೇನು?

- ಮನೆ ಕೆಲಸದವರ ಚಿಕಿತ್ಸಾ ವೆಚ್ಚ
- ಮಕ್ಕಳ ವಿದ್ಯಾಭ್ಯಾಸದ ವೆಚ್ಚ
- ಅಪಘಾತ ಸಂಭವಿಸಿದರೆ ಪರಿಹಾರ
- ಇಬ್ಬರು ಮಕ್ಕಳಿಗೆ ಸೀಮಿತಗೊಳಿಸಿ ವೇತನ ಸಹಿತ ಮಾತೃತ್ವ ರಜೆ
- ಮರಣ ಹೊಂದಿದರೆ ಅಂತ್ಯಕ್ರಿಯೆಗೆ ಸಹಾಯಧನ
- ನಿವೃತ್ತಿ ಹೊಂದಿದರೆ ಪಿಂಚಣಿಗೆ ಅವಕಾಶ
- ಲೈಂಗಿಕ ಶೋಷಣೆ, ಕಳ್ಳಸಾಗಣೆಗೆ ತಡೆ
- ಜಾತಿ, ಲಿಂಗ, ವರ್ಗ, ಜನಾಂಗ, ಧರ್ಮ, ಪ್ರದೇಶದ ಆಧಾರದಲ್ಲಿ ತಾರತಮ್ಯಕ್ಕೆ ತಡೆ
- ಪ್ರತಿ ನೋಂದಾಯಿತ ಘಟಕಕ್ಕೆ ವಿಶಿಷ್ಟ ಗುರುತಿನ ಸಂಖ್ಯೆ

ಮೀನುಗಾರರ ರಕ್ಷಣೆ

ಅರಬ್ಬಿ ಸಮುದ್ರದಲ್ಲಿ 11 ದಿನಗಳಿಂದ ಕೆಟ್ಟುನಿಂತಿದ್ದ ಗೋವಾದ ಮೀನುಗಾರಿಕೆ ದೋಣಿಯಲ್ಲಿದ್ದ 31 ಮೀನುಗಾರರನ್ನು ಭಾರತೀಯ ಕರಾವಳಿ ರಕ್ಷಣಾ ಪಡೆಯ ಕಸ್ತೂರಬಾ ಗಾಂಧಿ ಹಡಗಿನ ನೆರವಿನಿಂದ ರಕ್ಷಿಸಲಾಯಿತು. ಅಪಾಯಕ್ಕೆ ಸಿಲುಕಿದ್ದ ದೋಣಿಯನ್ನು ಇನ್ನೊಂದು ಮೀನುಗಾರಿಕಾ ದೋಣಿಯ ಸಹಾಯದಿಂದ ಹೊನ್ನಾವರ ಮೀನುಗಾರಿಕಾ ಬಂದರಿಗೆ ಎಳೆದೊಯ್ಯಲಾಗಿದೆ (ಭಾರತೀಯ ಕರಾವಳಿ ರಕ್ಷಣಾ ಪಡೆ ಬಿಡುಗಡೆ ಮಾಡಿದ ಚಿತ್ರ) 4

ರಸ್ತೆ ಸಾರಿಗೆ ಮತ್ತು ಸುರಕ್ಷತಾ ಆಯುಕ್ತರಿಗೆ ಸಚಿವರ ಸೂಚನೆ

ಬೆಂಕಿ ಅವಘಡ ತಡೆಗೆ ಕ್ರಮ ವಹಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಮತ್ತು ನಿಗಮಗಳ ಬಸ್‌ಗಳಲ್ಲಿ ಬೆಂಕಿ ಅವಘಡ ಉಂಟಾಗದಂತೆ ಕ್ರಮ ಕೈಗೊಳ್ಳಲು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ರಸ್ತೆ ಸಾರಿಗೆ ಮತ್ತು ಸುರಕ್ಷತಾ ಆಯುಕ್ತರಿಗೆ, ನಿಗಮಗಳ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚನೆ ನೀಡಿದ್ದಾರೆ.

ರಾಮಲಿಂಗಾ ರೆಡ್ಡಿ

ಬಸ್‌ಗಳಲ್ಲಿ ಯಾವುದೇ ವಾಣಿಜ್ಯ ಸರಕು, ಲಗೇಜ್ ಸಾಗಿಸುವ ಸಂದರ್ಭದಲ್ಲಿ ಬೆಂಕಿ ತಗುಲಿ ಸರಳವಾಗಿ ಉರಿಯುವ ವಸ್ತುಗಳು ಅಥವಾ ಇತರೆ ಸ್ಫೋಟಕ ವಸ್ತುಗಳನ್ನು ಸಾಗಿಸದಂತೆ ನಿಗಾ ವಹಿಸಬೇಕು. ಎಲ್ಲ ಎಸಿ ಬಸ್‌ಗಳಲ್ಲಿ ತುರ್ತು ಸಂದರ್ಭಗಳಲ್ಲಿ ಕಿಟಕಿಗಳನ್ನು ಒಡೆಯುವುದಕ್ಕೆ ನೆರವಾಗುವ ಸುತ್ತಿಗೆಗಳನ್ನು ಕಡ್ಡಾಯವಾಗಿ ಇರಿಸಬೇಕು. ಲಗೇಜ್ ಸಾಗಿಸುವ ಜಾಗದಲ್ಲಿ ಯಾವುದೇ ವ್ಯಕ್ತಿ ಮಲಗಲು ಅವಕಾಶ ನೀಡಬಾರದು. ಬಸ್ಸುಗಳ ನವೀಕರಣದ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಸಚಿವರು ಸೂಚಿಸಿದ್ದಾರೆ.

'ಇತ್ತೀಚೆಗೆ ಕರ್ನೂಲ್ ಬಸ್ ದುರಂತ ತೀವ್ರ ದುಃಖಕರವಾದ ಸಂಗತಿ. ಈ ಹಿಂದೆ ನಾನು ಸಾರಿಗೆ ಸಚಿವನಾಗಿದ್ದಾಗ ಹಾವೇರಿ ಬಳಿ ಇದೇ ರೀತಿ ಖಾಸಗಿ ಬಸ್‌ನಲ್ಲಿ ಬೆಂಕಿ ಆಕಸ್ಮಿಕ ಉಂಟಾಗಿ ಹಲವರು ಪ್ರಾಣ ಕಳೆದುಕೊಂಡಿದ್ದರು. ಆಗ ಸಾರಿಗೆ ಸಂಸ್ಥೆಗಳ ಬಸ್‌ಗಳು, ಕಾಂಟ್ರ್ಯಾಕ್ಟ್ ಕ್ಯಾರೇಜ್ ಬಸ್‌ಗಳು, ಖಾಸಗಿ ಟೂರಿಸ್ಟ್ ಬಸ್‌ಗಳು, ಟೆಂಪೊ ಟ್ರಾವೆಲರ್ಸ್, ಶಾಲಾ ವಾಹನಗಳಿಗೆಲ್ಲ ತುರ್ತು ನಿರ್ಗಮನ ದ್ವಾರಗಳನ್ನು ಕಡ್ಡಾಯ ಅಳವಡಿಸುವಂತೆ ಆದೇಶಿಸಿದ್ದೆ. ಸಮರ್ಪಕವಾಗಿ ದ್ವಾರ ಕೆಲಸ ಮಾಡುತ್ತಿರುವ ಬಗ್ಗೆ ಪರಿಶೀಲಿಸಲು ಅಭಿಯಾನ ಮಾಡಲಾಗಿತ್ತು. ಇದರಿಂದ ಹಲವು ಬಸ್ಸುಗಳಲ್ಲಿನ ದೋಷಗಳು ಗಮನಕ್ಕೆ ಬಂದು ತುರ್ತು ನಿರ್ಗಮನ ದ್ವಾರಗಳ ಅಳವಡಿಕೆ ಕಡ್ಡಾಯವಾಯಿತು' ಎಂದು ನೆನಪು ಮಾಡಿದ್ದಾರೆ.

'ಮದ್ಯದ ಮತ್ತಿನಲ್ಲಿದ್ದ ಬೈಕ್ ಸವಾರ'

ಹೈದರಾಬಾದ್: ಹೈದರಾಬಾದ್‌ನಿಂದ ಬೆಂಗಳೂರಿಗೆ ಹೊರಟಿದ್ದ ಖಾಸಗಿ ಸಂಸ್ಥೆಯ ಸ್ಲೀಪರ್ ಎ.ಸಿ. ಬಸ್‌ಗೆ ಬೆಂಕಿ ಹತ್ತಿಕೊಂಡು 19 ಮಂದಿ ಪ್ರಯಾಣಿಕರ ಸಾವಿಗೆ ಕಾರಣವಾಗಿದ್ದ ಬೈಕ್ ಸವಾರ ಮದ್ಯ ಕುಡಿದು ವಾಹನ ಚಲಾಯಿಸಿದ್ದೇ ಅಪಘಾತಕ್ಕೆ ಕಾರಣ ಎಂಬುದು ದೃಢಪಟ್ಟಿದೆ.

'ಬೈಕ್ ಸವಾರ ಬಿ. ಶಿವಶಂಕರ್ (22) ಮದ್ಯ ಕುಡಿದು ಬೈಕ್ ಚಲಾಯಿಸಿದ್ದ. ಹೀಗಾಗಿಯೇ, ಹೆದ್ದಾರಿಯ ವಿಭಜಕಕ್ಕೆ ಡಿಕ್ಕಿ ಹೊಡೆದು ಬಸ್ ಅಪಘಾತಕ್ಕೂ ಮೊದಲೇ ಮೃತಪಟ್ಟಿದ್ದ. ಇದಾದ ಬಳಿಕವೇ ಅದೇ ರಸ್ತೆಯಲ್ಲಿ ಬಂದ ಬಸ್ ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ಇದರಿಂದ, ಬಸ್‌ಗೂ ಬೆಂಕಿ ತಗುಲಿತ್ತು. ಅಪಘಾತಕ್ಕೂ ಮುನ್ನ ಬೈಕ್‌ನ ಹಿಂಬದಿ ಸವಾರ ಯೆರ್ರಿಸ್ವಾಮಿ ಕೂಡ ಮದ್ಯ ಕುಡಿದಿರುವುದನ್ನು ಒಪ್ಪಿಕೊಂಡಿದ್ದಾರೆ' ಎಂದು ಕರ್ನೂಲ್ ಪೊಲೀಸರು ತಿಳಿಸಿದ್ದಾರೆ. 7

ಎಸ್ಐಆರ್: ಇಂದು ವೇಳಾಪಟ್ಟಿ ಘೋಷಣೆ?

ನವದೆಹಲಿ: ದೇಶದಾದ್ಯಂತ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್) ಕೈಗೊಳ್ಳಲು ಕೇಂದ್ರ ಚುನಾವಣಾ ಆಯೋಗ ಸಜ್ಜಾಗಿದ್ದು, ಸೋಮವಾರ ವೇಳಾಪಟ್ಟಿ ಘೋಷಿಸುವ ಸಾಧ್ಯತೆ ಇದೆ.

ಹಲವು ಹಂತಗಳಲ್ಲಿ ಪರಿಷ್ಕರಣೆಗೆ ಚಿಂತನೆ ನಡೆದಿದೆ. 7

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಬಡಾವಣೆ ಅಭಿವೃದ್ಧಿಗೆ ನಿಯಮ ರೂಪಿಸಿದ ಗ್ರಾಮೀಣಾಭಿವೃದ್ಧಿ ಇಲಾಖೆ

ಗ್ರಾ.ಪಂ.ಗೆ ಅನುಮೋದನೆ ಅಧಿಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸ್ಥಳೀಯ ಯೋಜನಾ ಪ್ರದೇಶ ಹೊರತುಪಡಿಸಿದ ಜಾಗಗಳಲ್ಲಿ ಬಡಾವಣೆ ಅಭಿವೃದ್ಧಿಗೆ ನಿಯಮ ಗಳನ್ನು ರೂಪಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಸುತ್ತೋಲೆ ಹೊರಡಿಸಿದೆ.

ಗ್ರಾಮ ಪಂಚಾಯಿತಿಯ ಸ್ಥಳೀಯ ಯೋಜನಾ ಪ್ರದೇಶದ ಹೊರಗೆ ಇರುವ ಹಾಗೂ ಭೂಪರಿವರ್ತನೆಗೆ ಒಳಗಾದ ಜಮೀನುಗಳಿಗೆ ಮಾತ್ರ ಈ ನಿಯಮ ಅನ್ವಯವಾಗುತ್ತದೆ. ಪೂರ್ವಾನುಮೋದನೆ ಪಡೆದ ಈ ಬಡಾವಣೆಗಳಲ್ಲಿನ ನಿವೇಶನಗಳಿಗೆ ಗ್ರಾಮ ಪಂಚಾಯಿತಿಯೇ ಖಾತೆ ಮಾಡಿಕೊಡಲಿದೆ. ಭೂಪರಿವರ್ತನೆ ಇಲ್ಲದೆ ಅಭಿವೃದ್ಧಿಪಡಿಸಲಾದ ಬಡಾವಣೆಗಳಿಗೆ ಇದು ಅನ್ವಯವಾಗುವುದಿಲ್ಲ.

ಬಡಾವಣೆ ಅಭಿವೃದ್ಧಿಪಡಿಸುವುದಕ್ಕೂ ಮುನ್ನ ಸಂಬಂಧಿತ, ಪರಿವರ್ತಿತ ಜಮೀನಿನ ಮಾಲೀಕ ಬಡಾವಣೆಯ ವಿನ್ಯಾಸವನ್ನು ರಚಿಸಬೇಕು. ಬಡಾವಣೆಯಲ್ಲಿ ಇರಲಿರುವ ಸಾರ್ವಜನಿಕ ರಸ್ತೆಗಳು, ಉದ್ಯಾನ, ಚರಂಡಿ, ಒಳಚರಂಡಿ, ನೀರಿನ ಕೊಳವೆ ಮಾರ್ಗ, ತ್ಯಾಜ್ಯ ನೀರು ಸಂಸ್ಕರಣ ಘಟಕ, ವಿದ್ಯುತ್ ಜಾಲಗಳಿಗೆ ಸಂಬಂಧಿತ ಇಲಾಖೆ ಅಥವಾ ಪ್ರಾಧಿಕಾರಗಳಿಂದ ನಿರಾಕ್ಷೇಪಣಾ ಪತ್ರ ಪಡೆಯಬೇಕು ಎಂದು ಸುತ್ತೋಲೆಯಲ್ಲಿ ಸೂಚಿಸಿದೆ.

ಈ ಎಲ್ಲ ದಾಖಲೆಗಳನ್ನು ಒಳಗೊಂಡ ಅರ್ಜಿಯನ್ನು ಗ್ರಾಮ ಪಂಚಾಯಿತಿಗೆ ಸಲ್ಲಿಸಿ, ಬಡಾವಣೆ ಅಭಿವೃದ್ಧಿ ಪಡಿಸಲು ಅನುಮತಿ ಪಡೆಯಬೇಕು. ಹೀಗೆ ಅಭಿವೃದ್ಧಿ ಪಡಿಸಲಾದ ಬಡಾವಣೆಯಲ್ಲಿನ ಸಾರ್ವಜನಿಕ ರಸ್ತೆಗಳು, ಉದ್ಯಾನ, ಚರಂಡಿ– ಒಳಚರಂಡಿ ವ್ಯವಸ್ಥೆ, ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳು, ಸಾರ್ವಜನಿಕ ಬಳಕೆಯ ಪ್ರದೇಶಗಳನ್ನು ಹಕ್ಕು ಪರಿತ್ಯಾಜನಾ ಪತ್ರದ ಮೂಲಕ ಗ್ರಾಮ ಪಂಚಾಯಿತಿಗೆ ಬಿಟ್ಟು ಕೊಡಬೇಕು. ಹೀಗೆ ಬಿಟ್ಟು ಕೊಟ್ಟ ನಂತರ ಅವುಗಳ ನಿರ್ವಹಣೆಯ ಹೊಣೆಗಾರಿಕೆಯು ಸಂಬಂಧಿತ ಗ್ರಾಮ ಪಂಚಾಯಿತಿಯದ್ದಾಗಿರಲಿದೆ ಎಂದಿದೆ.

ಇನ್ನು ಬಡಾವಣೆಯ ಮೂಲೆ ನಿವೇಶನಗಳು, ನಾಗರಿಕ ಬಳಕೆ (ಸಿ.ಎ) ನಿವೇಶನಗಳು ಮತ್ತು ಮಧ್ಯಂತರ ನಿವೇಶನಗಳನ್ನು ಅಡಮಾನ ಒಪ್ಪಂದದ ಅಡಿಯಲ್ಲಿ ಗ್ರಾಮ ಪಂಚಾಯಿತಿಗೆ ಒಪ್ಪಿಸಬೇಕು. ನಿಗದಿತ ಅವಧಿಯಲ್ಲಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಿದರೆ, ಅಡಮಾನ ಒಪ್ಪಂದವನ್ನು ರದ್ದುಪಡಿಸಬೇಕು ಮತ್ತು ನಿವೇಶನಗಳನ್ನು ಬಡಾವಣೆ ಅಭಿವೃದ್ಧಿದಾರರಿಗೆ ಹಿಂತಿರುಗಿಸಬೇಕು ಎಂದು ಸೂಚಿಸಿದೆ.

ಅಭಿವೃದ್ಧಿ ಪಡಿಸಲಾದ ಬಡಾವಣೆಯಲ್ಲಿರುವ ಮೂಲಭೂತ ಸೌಕರ್ಯಗಳು ಯಾವುದೇ ದೋಷದಿಂದ ಕೂಡಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ, ಅಭಿವೃದ್ಧಿದಾರರು ಗ್ರಾಮ ಪಂಚಾಯಿತಿಗೆ ಖಾತರಿ ಒದಗಿಸಬೇಕು. ಮೂಲ ಸೌಕರ್ಯ ಅಭಿವೃದ್ಧಿಗೆ ತಗುಲಿರುವ ಒಟ್ಟು ವೆಚ್ಚದ ಶೇ 10ರಷ್ಟನ್ನು ಬ್ಯಾಂಕ್ ಭದ್ರತೆ ರೂಪದಲ್ಲಿ, ಒಂದು ವರ್ಷಕ್ಕೆ ಗ್ರಾಮ ಪಂಚಾಯಿತಿ ಎಂಜಿನಿಯರಿಂಗ್ ಇಲಾಖೆಯಲ್ಲಿ ಇರಿಸಬೇಕು. ಒಂದು ವರ್ಷದ ನಂತರ ಅದನ್ನು ವಾಪಸ್ ಪಡೆಯಬಹುದಾಗಿದೆ ಎಂದು ತಿಳಿಸಿದೆ.

ಸುತ್ತೋಲೆಯ ಪ್ರಮುಖ ಅಂಶಗಳು

- ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಸಂಬಂಧಿತ ಇಲಾಖೆ/ಪ್ರಾಧಿಕಾರಗಳಿಂದ ವಿನ್ಯಾಸ ಅನುಮೋದನೆ ಪಡೆದ ನಂತರವಷ್ಟೇ ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸಲು ಅವಕಾಶ
- ಗ್ರಾಮೀಣಾಭಿವೃದ್ಧಿ ಇಲಾಖೆ, ಜಲ ಸಂಪನ್ಮೂಲ ಇಲಾಖೆ, ಎಸ್ಕಾಂಗಳಿಂದ ನಿರಾಕ್ಷೇಪಣಾ ಪತ್ರ ಪಡೆಯುವುದು ಕಡ್ಡಾಯ
- ಮೂಲಭೂತ ಸೌಕರ್ಯಗಳ ಅಭಿವೃದ್ಧಿ ವೇಳೆ ಸಂಬಂಧಿತ ಇಲಾಖೆ/ಪ್ರಾಧಿಕಾರ/ವಿಭಾಗಗಳಿಗೆ ಒಟ್ಟು ವೆಚ್ಚದ ಶೇ5 ರಿಂದ ಶೇ10 ರವರೆಗೆ ಮೇಲ್ವಿಚಾರಣಾ ಶುಲ್ಕ ಪಾವತಿಸಬೇಕು
- ಬಡಾವಣೆಗಳಲ್ಲಿನ ರಸ್ತೆ, ಉದ್ಯಾನ, ಸಾರ್ವಜನಿಕ ಬಳಕೆ ಪ್ರದೇಶ, ನಾಗರಿಕ ಬಳಕೆ ನಿವೇಶನಗಳನ್ನು ಗ್ರಾಮ ಪಂಚಾಯಿತಿಗೆ ಬಿಟ್ಟುಕೊಡುವುದು ಕಡ್ಡಾಯ

8 ಸಾವಿರ ಶಾಲೆಗಳಲ್ಲಿ ವಿದ್ಯಾರ್ಥಿಗಳೇ ಇಲ್ಲ

ನವದೆಹಲಿ: ದಾಖಲಾತಿಯೇ ಇಲ್ಲದ ಶಾಲೆಗಳು, ದಾಖಲಾತಿ ಇದ್ದರೂ ಒಬ್ಬರೇ ಶಿಕ್ಷಕರು ಇರುವ ಸಮಸ್ಯೆ, ಒಬ್ಬರೇ ಶಿಕ್ಷಕರ ಮೇಲೆ ಹಲವಾರು ವಿದ್ಯಾರ್ಥಿಗಳ ಹೊರೆ... ಈ ಸಮಸ್ಯೆಗಳ ನಿವಾರಣೆಯಲ್ಲಿ ಕರ್ನಾಟಕ 2024–25ರ ಸಾಲಿನಲ್ಲಿ ಉತ್ತಮ ಸಾಧನೆಯನ್ನೇ ಮಾಡಿದೆ. ರಾಷ್ಟ್ರಮಟ್ಟದಲ್ಲಿಯೂ, ರಾಜ್ಯದಲ್ಲಿಯೂ ಶಾಲಾ ದಾಖಲಾತಿ ಸಂಖ್ಯೆ ಈ ಬಾರಿ ತುಸು ಕಡಿಮೆ. ಆದರೆ, 2023–24ರ ಸಾಲಿಗೆ ಹೋಲಿಸಿದರೆ ಹಲವು ಸುಧಾರಣೆಗಳಾಗಿವೆ

ದಾಖಲಾತಿಯೂ ಇಲ್ಲ, ಶಿಕ್ಷಕರಿಗೆ ಕೆಲಸವೂ ಇಲ್ಲ



7,993
2024–25ರಲ್ಲಿ ದಾಖಲಾತಿಯೇ ಆಗದ ಶಾಲೆಗಳ ಒಟ್ಟು ಸಂಖ್ಯೆ

20,817
2024–25ರಲ್ಲಿ ದಾಖಲಾತಿಯೇ ಆಗದ ಶಾಲೆಗಳಲ್ಲಿ ಇರುವ ಒಟ್ಟು ಶಿಕ್ಷಕರ ಸಂಖ್ಯೆ

* 2023–24ನೇ ಸಾಲಿನಲ್ಲಿ ದಾಖಲಾತಿಯೇ ಆಗದ ಒಟ್ಟು 12,954 ಶಾಲೆಗಳಿದ್ದವು. ಅಂತೆಯೇ ಈ ಶಾಲೆಗಳಲ್ಲಿ 31,981 ಶಿಕ್ಷಕರಿದ್ದರು

ಏಕ ಶಿಕ್ಷಕ ಶಾಲೆ: ಸಂಖ್ಯೆ ಇಳಿಕೆ

1 ಲಕ್ಷ
2024–25ರಲ್ಲಿ ಒಬ್ಬರೇ ಶಿಕ್ಷಕರು ಇರುವ ಒಟ್ಟು ಶಾಲೆಗಳ ಸಂಖ್ಯೆ

33.76 ಲಕ್ಷ
2024–25ರಲ್ಲಿ ಒಬ್ಬರೇ ಶಿಕ್ಷಕರು ಇರುವ ಶಾಲೆಗಳಲ್ಲಿ ದಾಖಲಾದ ಮಕ್ಕಳ ಸಂಖ್ಯೆ

* 2023–24ರಲ್ಲಿ ಒಬ್ಬರೇ ಶಿಕ್ಷಕರು ಇರುವ ಶಾಲೆಗಳಲ್ಲಿ 39.9 ಲಕ್ಷ ಮಕ್ಕಳು ದಾಖಲಾಗಿದ್ದರು. ಜೊತೆಗೆ, ಒಬ್ಬರೇ ಶಿಕ್ಷಕರು ಇರುವ ಶಾಲೆಗಳ ಸಂಖ್ಯೆ ಈಗ 6,846ಕ್ಕೆ ಇಳಿಕೆಯಾಗಿದೆ



ಆಧಾರ: ಕೇಂದ್ರ ಶಿಕ್ಷಣ ಇಲಾಖೆಯ 'ಯುನಿಫೈಡ್ ಡಿಸ್ಟ್ರಿಕ್ಟ್ ಇನ್ಫರ್ಮೇಷನ್ ಸಿಸ್ಟಮ್ ಫಾರ್ ಎಜುಕೇಷನ್ ಪ್ಲಸ್ ವರದಿ–2024–25'

ರಾಜ್ಯದಲ್ಲಿ ಗಣನೀಯ ಸುಧಾರಣೆ

2023–24ರ ಹೋಲಿಕೆಯಲ್ಲಿ 2024–25ರಲ್ಲಿ ಕರ್ನಾಟಕವು ಉತ್ತಮ ಸಾಧನೆ ಮಾಡಿದೆ. ದಾಖಲಾತಿ ಆಗದ ಶಾಲೆಗಳ ಸಂಖ್ಯೆಯಲ್ಲಿ ಗಣನೀಯ ಇಳಿಕೆಯಾಗಿದೆ. ಜೊತೆಗೆ, ಒಬ್ಬರೇ ಶಿಕ್ಷಕರು ಇರುವ ಶಾಲೆಗಳ ಸಂಖ್ಯೆ ಇಳಿಕೆ ಆಗಿದೆ. ರಾಜ್ಯದ ಒಬ್ಬ ಶಿಕ್ಷಕರಿಗೆ ಸರಾಸರಿ ವಿದ್ಯಾರ್ಥಿಗಳ ಸಂಖ್ಯೆ ಈಗ 26 ಇದೆ.



1,098 ಶಾಲೆಗಳಲ್ಲಿ ಬಾಲಕಿಯರಿಗಿಲ್ಲ ಶೌಚಾಲಯ

ರಾಜ್ಯದಲ್ಲಿ ಸಹ ಶಿಕ್ಷಣ ಶಾಲೆಗಳ ಸಂಖ್ಯೆ 74,387 ಇವೆ. ಈ ಶಾಲೆಗಳ ಪೈಕಿ 73,729 ಶಾಲೆಗಳಲ್ಲಿ ಮಾತ್ರ ಬಾಲಕಿಯರಿಗೆ ಶೌಚಾಲಯ ವ್ಯವಸ್ಥೆ ಇದೆ. ಇಷ್ಟು ಶಾಲೆಗಳ ಪೈಕಿ ಕೇವಲ 73,289 ಶಾಲೆಗಳಲ್ಲಿ ಶೌಚಾಲಯಗಳು ಬಳಕೆಗೆ ಯೋಗ್ಯವಾಗಿವೆ.

ಸೂರ್ಯೋದಯ: 6:12 ಸೂರ್ಯಾಸ್ತ : 5:55 ಚಂದ್ರೋದಯ: ಬೆ. 10:54 ಚಂದ್ರಾಸ್ತ: ರಾ. 10:20 | ಭಾನುವಾರದ ಉಷ್ಣಾಂಶ : ಗರಿಷ್ಠ 29° ಕನಿಷ್ಠ 21°

ಸೋಮವಾರದ ಉಷ್ಣಾಂಶ 29° ಗರಿಷ್ಠ 21° ಕನಿಷ್ಠ | ಮಂಗಳವಾರ 30° : 20° | ಬುಧವಾರ 30 : 20° | ಗುರುವಾರ 30° : 20°

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ

ಸುರಂಗ ರಸ್ತೆ: ಅಂತರ್ಜಲ, ಕೊಳವೆಬಾವಿಗೆ ಕುತ್ತು

ವಸತಿ, ವಾಣಿಜ್ಯ ಕಟ್ಟಡಗಳ ಕೆಳಗೆ ಸಾಗುವ ಪಥಗಳಿಂದ ಜಲಮೂಲಗಳಿಗೆ ಧಕ್ಕೆ

● ಆರ್. ಮಂಜುನಾಥ್

ಬೆಂಗಳೂರು: ಸುರಂಗ ರಸ್ತೆ ಹಾದುಹೋಗುವ ಮಾರ್ಗದಲ್ಲಿ ಅಂತರ್ಜಲ, ಜಲಮೂಲ ಹಾಗೂ ಕೊಳವೆಬಾವಿಗಳಿಗೆ ಸಮಸ್ಯೆಯಾಗಲಿದ್ದು, ಇದಕ್ಕೆ ಯಾವುದೇ ರೀತಿಯ ಪರಿಹಾರ ಕ್ರಮಗಳನ್ನು ವಿಸ್ತೃತ ಯೋಜನಾ ವರದಿ (ಡಿಪಿಆರ್) ಸೂಚಿಸಿಲ್ಲ.

'ಅಂತರ್ಜಲ, ಜಲಮೂಲಗಳನ್ನು ಯಾವುದೇ ವರದಿಯಲ್ಲೂ ಪರಿಗಣಿಸಿಲ್ಲ. ಇದು ಸುರಂಗ ರಸ್ತೆಗೆ ಅತಿ ಅಪಾಯಕಾರಿಯಾದದ್ದು' ಎಂದು ರಾಜ್ಯ ಸರ್ಕಾರ ರಚಿಸಿರುವ 'ತಜ್ಞರ ಸಮಿತಿ'ಯೇ ಅಭಿಪ್ರಾಯಪಟ್ಟಿದೆ.

'ಬೆಂಗಳೂರಿನಲ್ಲಿ ಅಂತರ್ಜಲ ಮಟ್ಟದಲ್ಲಿ ಇಳಿಕೆ ಯಾಗುತ್ತಲೇ ಇದೆ. ಸುರಂಗ ರಸ್ತೆ ಸಾಗುವ ಸ್ಥಳಗಳಲ್ಲಿ ಜಲಮೂಲಗಳನ್ನು ಗುರುತಿಸಲು 'ಎಲೆಕ್ಟ್ರಿಕಲ್ ರೆಸಿಸ್ಟಿವಿಟಿ ಟೊಮೊಗ್ರಫಿ'ಯನ್ನು (ಇಆರ್‌ಟಿ) ಏಕೆ ಬಳಸಿಲ್ಲ' ಎಂಬ ತಜ್ಞರ ಸಮಿತಿಯ ಪ್ರಶ್ನೆಗೆ, ಡಿಪಿಆರ್ ಕನ್ಸಲ್ಟೆಂಟ್ಸ್ ಮಾಹಿತಿಯನ್ನು ಒದಗಿಸಿಲ್ಲ.

'ಡಿಪಿಆರ್ ತಪಾಸಣೆ ಸಂದರ್ಭದಲ್ಲಿ ದ್ವಿತೀಯ ಮೂಲಗಳಿಂದ ಅಂತರ್ಜಲ ಸ್ಥಿತಿಯನ್ನು ಅರಿಯಲಾಗಿದೆ. ಯಾವುದಾದರೂ ದುರ್ಬಲ ವಲಯದಲ್ಲಿ ಅಪಾಯಗಳ ಮೌಲ್ಯಮಾಪನ ಮಾಡಲು ಮೆಟ್ರೊ ಸುರಂಗ ಮಾರ್ಗಗಳನ್ನು ಪರಿಗಣಿಸಲಾಗಿದೆ. ಮುಂದೆ ಅಂತಹ ಅಪಾಯವನ್ನು ತಗ್ಗಿಸಲು ಸುರಂಗ ಕೊರೆಯುವ ಯಂತ್ರದ (ಟಿಬಿಎಂ) ಆಯ್ಕೆ ಮತ್ತು ವಿನ್ಯಾಸವು ಅತ್ಯಂತ ಪ್ರಮುಖ ಅಂಶವಾಗಿದೆ. ಸುರಂಗ ಮಾರ್ಗ ನಿರ್ಮಾಣ ಮಾಡುವವರು ಇದರ ಬಗ್ಗೆ ನಿಯಮಿತವಾಗಿ ತನಿಖೆ ಮಾಡಲಿದ್ದಾರೆ' ಎಂದು ಸುರಂಗ ರಸ್ತೆಯ ಡಿಪಿಆರ್ ಕನ್ಸಲ್ಟೆಂಟ್ಸ್ ನೀಡಿರುವ ವಿವರಣೆಯನ್ನು ತಜ್ಞರ ಸಮಿತಿ ಒಪ್ಪಿಲ್ಲ.

ಮೆಟ್ರೊ ಮಾರ್ಗವು ನಗರದಲ್ಲಿರುವ ರಸ್ತೆಗಳ ಕೆಳಭಾಗದಲ್ಲೇ ಸಾಗಿದೆ. ಆದರೆ, ಹೆಬ್ಬಾಳ ಜಂಕ್ಷನ್‌ನಿಂದ ಸಿಲ್ಕ್‌ಬೋರ್ಡ್‌ಗೆ ಸಂಪರ್ಕ ಕಲ್ಪಿಸುವ ಸುರಂಗ ರಸ್ತೆಯು ವಸತಿ, ವಾಣಿಜ್ಯ ಕಟ್ಟಡಗಳು, ಸಾಂಸ್ಥಿಕ ವಲಯಗಳು, ಸರ್ಕಾರದ ಪ್ರಮುಖ ಕಟ್ಟಡಗಳ ಕೆಳಭಾಗದಲ್ಲಿ ಸಾಗಲಿದೆ. ಇದರಿಂದ, ಮನೆ ಅಥವಾ ವಾಣಿಜ್ಯ ಕಟ್ಟಡಗಳಲ್ಲಿರುವ ಕೊಳವೆಬಾವಿಗಳಿಗೆ ಧಕ್ಕೆಯಾಗುವ ಸಾಧ್ಯತೆ ಇದೆ. ನಗರದ ಕೇಂದ್ರ ಭಾಗವೂ ಸೇರಿದಂತೆ ಬಹುತೇಕ ಭಾಗಗಳಲ್ಲಿ ಕೊಳವೆಬಾವಿಗಾಗಿ ನೂರಾರು ಅಡಿ ಆಳ ಕೊರೆಯಲಾಗಿದೆ. ಸುರಂಗ ರಸ್ತೆ 50 ಅಡಿಯಿಂದ 100 ಅಡಿ ಆಳದಲ್ಲಿ ಬರುವುದರಿಂದ ಕೊಳವೆಬಾವಿಗಳಿಗೆ ಸಮಸ್ಯೆ ಆಗುತ್ತದೆ.

'ಜಲಮೂಲ, ಅಂತರ್ಜಲ, ಕೊಳವೆಬಾವಿಗಳಿಗೆ ಆಗುವ ಧಕ್ಕೆಯನ್ನು ಯಾವ ರೀತಿಯಲ್ಲಿ ಸರಿಪಡಿಸಲಾಗುತ್ತದೆ, ಅವುಗಳ ರಕ್ಷಣೆಗೆ ಕೈಗೊಳ್ಳಲಾಗುವ ಕ್ರಮಗಳೇನು ಎನ್ನುವ ಬಗ್ಗೆಯೂ ಡಿಪಿಆರ್‌ನಲ್ಲಿ ಯಾವುದೇ ಮಾಹಿತಿ ಇಲ್ಲ. ಪರಿಸರ ಸೂಕ್ಷ್ಮ ಪ್ರದೇಶಗಳ ಜೊತೆಗೆ ಜಲಮೂಲಗಳಿಗೂ ತಡೆ ಯಾಗುವುದಕ್ಕೆ ಪರಿಹಾರ ಕಂಡುಕೊಳ್ಳಲು ತಜ್ಞರಿಂದ ಸೂಕ್ತ ಅಧ್ಯಯನ ಅಗತ್ಯ' ಎಂದು ಭೂವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ.



ಸುರಂಗ ರಸ್ತೆಯ ಪ್ರತಿ 500 ಮೀಟರ್ ಅಂತರದಲ್ಲಿ ನಿರ್ಮಾಣವಾಗಲಿರುವ 'ಟನಲ್ ಕ್ರಾಸ್ ಪ್ಯಾಸೇಜ್'

ಅಂತರ್ಜಲದ ಕಣ್ಣಿಗೆ ಪಟ್ಟಿ: ದೇವರಾಜ ರೆಡ್ಡಿ

'ಬೃಹತ್ ಸುತ್ತಳತೆಯಲ್ಲಿ ಸುರಂಗ ಕೊರೆಯುವುದರಿಂದ ಅಂತರ್ಜಲಕ್ಕೆ ನೇರವಾಗಿ ಧಕ್ಕೆಯಾಗಲಿದೆ. ಭೂಗರ್ಭದಲ್ಲಿ ಅಂತರ್ಜಲ ತನ್ನದೇ ಸ್ವಾಭಾವಿಕ ಹರಿವನ್ನು ಹೊಂದಿರುತ್ತದೆ. ಸುರಂಗ ಕೊರೆದಾಗ ಅದಕ್ಕೆ ತಡೆಯಾಗುತ್ತದೆ. ಸುರಂಗದೊಳಗೆ ನೀರು ಜಿನುಗದಂತೆ ಹಲವು ರೀತಿಯಲ್ಲಿ ತಡೆ ಒಡ್ಡಲಾಗುತ್ತದೆ. ಇದರಿಂದ ಅಂತರ್ಜಲದ ಹರಿವಿನ 'ಕಣ್ಣಿಗೆ ಪಟ್ಟಿ' ಕಟ್ಟಿದಂತಾಗುತ್ತದೆ. ಅಂತರ್ಜಲದ ಮಟ್ಟಕ್ಕೂ ತೊಂದರೆಯಾಗುತ್ತದೆ' ಎಂದು ಅಂತರ್ಜಲ ತಜ್ಞ ದೇವರಾಜ ರೆಡ್ಡಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಸುರಂಗ ಕೊರೆಯುವ ಸ್ಥಳದಲ್ಲಿ ತಡೆ ಒಡ್ಡುವುದರಿಂದ, ಆ ಪ್ರದೇಶದಲ್ಲಿ ಮಾತ್ರವಲ್ಲದೆ ಸುತ್ತ ಮುತ್ತಲಿನ ಸುಮಾರು ಕಿಲೋಮೀಟರ್ ಪ್ರದೇಶದ ಅಂತರ್ಜಲ ಹರಿವಿಗೆ ಧಕ್ಕೆಯಾಗುತ್ತದೆ. ಇನ್ನು ವಸತಿ, ವಾಣಿಜ್ಯ ಪ್ರದೇಶದಲ್ಲಿರುವ ಕೊಳವೆಬಾವಿಗಳು ಬಹುತೇಕ ಬತ್ತಿಹೋಗಲಿವೆ' ಎಂದರು.

ನಾಲ್ಕು ಬೋರ್‌ಹೋಲ್‌ಗಳಲ್ಲಷ್ಟೇ ಅಧ್ಯಯನ: ತಜ್ಞರ ಸಮಿತಿ

'ಸುರಂಗ ರಸ್ತೆಯ ಡಿಪಿಆರ್‌ನಲ್ಲಿ ಉಲ್ಲೇಖಿಸಲಾಗಿರುವ ಭೂತಾಂತ್ರಿಕ ವ್ಯಾಖ್ಯಾನ ವರದಿಯನ್ನು (ಜಿಐಆರ್) ಕೇವಲ ನಾಲ್ಕು ಬೋರ್‌ಹೋಲ್‌ಗಳ ತಪಾಸಣೆಯಿಂದ ತಯಾರಿಸಲಾಗಿದೆ. ಎಲ್ಲ ರೀತಿಯಲ್ಲಿಯೂ ಭೂವೈಜ್ಞಾನಿಕ ತಪಾಸಣೆಗಳನ್ನು 'ಜಿಯೊಲಾಜಿಕಲ್ ಎಲ್–ಸೆಕ್ಷನ್' ನಡೆಸಬೇಕು. ಅಂದರೆ, ಭೂಗರ್ಭದಲ್ಲಿ ಕಲ್ಲು–ಬಂಡೆಗಳ ಪದರ ಹಾಗೂ ಅವುಗಳ ರಚನೆ ಬಗ್ಗೆ ಆಳವಾದ ಅಧ್ಯಯನ ನಡೆಸಬೇಕು. ಇದಲ್ಲದೆ, ಅಂತರ್ಜಲ ಮತ್ತು ಜಲಮೂಲಗಳ ಬಗ್ಗೆ 'ಎಲೆಕ್ಟ್ರಿಕಲ್ ರೆಸಿಸ್ಟಿವಿಟಿ ಟೊಮೊಗ್ರಫಿ' (ಇಆರ್‌ಟಿ) ಪರೀಕ್ಷೆಯನ್ನು ಕಡ್ಡಾಯವಾಗಿ ಮಾಡಬೇಕು' ಎಂದು ತಜ್ಞರ ಸಮಿತಿ ಸೂಚಿಸಿದೆ.

ಇಆರ್‌ಟಿ ಪರೀಕ್ಷೆ

'ನಿಖರವಾದ ಶಿಲಾಶಾಸ್ತ್ರ ಸ್ಥಿತಿಯನ್ನು ಅರಿಯಲು ಕೊರೆದ ಬೋರ್‌ಹೋಲ್ ಸಂಖ್ಯೆ ಅಥವಾ ಪ್ರದೇಶಗಳ ಮಾಹಿತಿಯನ್ನೂ ನೀಡಿಲ್ಲ. ಪರಿಷ್ಕೃತ ಜಿಐಆರ್ ಮತ್ತು ಸ್ಪಷ್ಟನೆ ನೀಡಿದ ಮಾಹಿತಿಯಲ್ಲೂ ಎಲ್ಲ ಬೋರ್‌ಹೋಲ್‌ಗಳ ವಿವರಗಳನ್ನು ಡಿಪಿಆರ್ ಕನ್ಸಲ್ಟೆಂಟ್ಸ್ ನೀಡಿಲ್ಲ' ಎಂದು ತಜ್ಞರ ಸಮಿತಿ ತಿಳಿಸಿದೆ.

ಬೆಂಗಳೂರಿನಲ್ಲಿ ಕ್ಷಿಪ್ರ ಪ್ರವಾಹ ಹಾಗೂ ನೀರು ನಿಲ್ಲುವ ಸಂಕಷ್ಟವಿದೆ. ಸುರಂಗ ರಸ್ತೆಯಲ್ಲಿ ಈ ಸಮಸ್ಯೆಗಳನ್ನು ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳೇನು? ವಿನ್ಯಾಸದಲ್ಲಿ ಇದನ್ನು ಏಕೆ ಅಳವಡಿಸಿಲ್ಲ?

ತೆರೆದ ಬಾವಿ ಹಾಗೂ ಕೊಳವೆಬಾವಿಗಳನ್ನು ಮುಚ್ಚುವ ಬಗ್ಗೆ ಮಾಹಿತಿ ಇಲ್ಲ. ರ್‍ಯಾಂಪ್ ಹಾಗೂ ಸುರಂಗ ರಸ್ತೆಯಲ್ಲಿ ಅಗ್ನಿಶಾಮಕ ವ್ಯವಸ್ಥೆಗೆ ಸಂಬಂಧಿಸಿದ ವಿಷಯದ ಬಗ್ಗೆ ಸ್ಪಷ್ಟ ವಿವರಣೆ ಇಲ್ಲ

ತಜ್ಞರ ಸಮಿತಿ

'ಆಯಿಲ್, ಗ್ಯಾಸ್ ಪತ್ತೆಗೆ ಉಪಕರಣವಿಲ್ಲ'

'ಸುರಂಗ ರಸ್ತೆ ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಚೆಲ್ಲುವ ನೀರು, ಅಂತರ್ಜಲ ಸೋರುವಿಕೆ, ಮಳೆ ನೀರು ಬರುವ ಸಾಧ್ಯತೆ ಇದ್ದು, ಅದನ್ನು ಮೂಲದಲ್ಲೇ ನಿಯಂತ್ರಿಸಬೇಕು. ಹೈಡ್ರೊಕಾರ್ಬನ್ ಗ್ಯಾಸ್ ಪತ್ತೆಹಚ್ಚುವುದು ಸೇರಿದಂತೆ ತೈಲ ಪ್ರತಿಬಂಧಕದ ಬಗ್ಗೆ ಡಿಪಿಆರ್‌ನಲ್ಲಿ ಮಾಹಿತಿ ಇಲ್ಲ' ಎಂದು ತಜ್ಞರು ಹೇಳಿದ್ದಾರೆ.

ಆಯಿಲ್ ಇಂಟರ್‌ಸೆಪ್ಟರ್

'ಸುರಂಗ ಮಾರ್ಗದಲ್ಲಿ ಇಂಧನ ಸಾಗಿಸುವ ವಾಹನಗಳಿಗೆ ಪ್ರವೇಶ ಇರುವುದಿಲ್ಲ. ಹೀಗಾಗಿ, ತೈಲ ಪ್ರತಿಬಂಧಕ (ಆಯಿಲ್ ಇಂಟರ್‌ಸೆಪ್ಟರ್) ವ್ಯವಸ್ಥೆ ಅಗತ್ಯವಿಲ್ಲ' ಎಂದು ಡಿಪಿಆರ್ ಕನ್ಸಲ್ಟೆಂಟ್ಸ್ ಪ್ರತಿಕ್ರಿಯಿಸಿದ್ದಾರೆ. 'ಪೆಟ್ರೋಲ್ ಮತ್ತು ಡೀಸೆಲ್ ಕಾರುಗಳಿಂದ ತೈಲ ಸೋರುವ ಸಾಧ್ಯತೆ ಇದೆ. ಹೀಗಾಗಿ, ಸುರಂಗದಿಂದ ನೀರನ್ನು ಪಾಲಿಕೆ ಚರಂಡಿಗಳಿಗೆ ಹೊರಹಾಕುವ ಮುನ್ನ ತೈಲ ಮತ್ತು ಹೂಳನ್ನು ಸಂಸ್ಕರಿಸಬೇಕು' ಎಂದು ತಜ್ಞರು ಸಲಹೆ ನೀಡಿದ್ದಾರೆ.

ಕ್ರೀಡೆಗೆ ಆದ್ಯತೆ ನೀಡಿದ ಮೋದಿ: ಶೋಭಾ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಪ್ರಧಾನಿ ನರೇಂದ್ರ ಮೋದಿ ಅವರು ಕ್ರೀಡೆಗೆ ಮಹತ್ವ ಕೊಡುತ್ತಿದ್ದಾರೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಕೆ.ಆರ್.ಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಮೈದಾನದಲ್ಲಿ ಹಮ್ಮಿಕೊಂಡಿದ್ದ ಸಂಸದ್ ಕ್ರೀಡಾ ಮಹೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು. ಶಾಸಕ ಬೈರತಿ ಬಸವರಾಜ ಮಾತನಾಡಿ, 'ಉತ್ತಮ ಆರೋಗ್ಯಕ್ಕೆ ಕ್ರೀಡೆ ಬಹಳ ಮುಖ್ಯ' ಎಂದರು.

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು-560 064
ಫ್ಯಾಕ್ಸ್: 080-28460367, ಫೋನ್: 080-28072739
ವೆಬ್‌ಸೈಟ್: www.rwf.indianrailways.gov.in

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಸ್/11/2025-26 ದಿನಾಂಕ: 24.10.2025

ಭಾರತದ ರಾಷ್ಟ್ರಪತಿಗಳ ಪರವಾಗಿ, ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು ಅನುಭವಿ OEMಗಳು/ತಯಾರಕರಿಂದ ಮ್ಯಾನುಯಲ್ ಗ್ಲೋಬಲ್ ಟೆಂಡರ್ ಅನ್ನು ಆಹ್ವಾನಿಸಿದ್ದಾರೆ. ಜಾಗತಿಕ ಟೆಂಡರ್ ದಾಖಲೆ ಮತ್ತು ಅಗತ್ಯತೆಯ ವೇಳಾಪಟ್ಟಿಯನ್ನು ಇ-ಮೇಲ್: smm.rwfblr@gmail.com ಮೂಲಕ ಪಡೆಯಲು ನೀವು ಈ ಕಚೇರಿಯನ್ನು ಸಂಪರ್ಕಿಸಬಹುದು. ಎಲ್ಲಾ ರೀತಿಯಲ್ಲೂ ಪೂರ್ಣಗೊಂಡ ನಿಮ್ಮ ಉಲ್ಲೇಖವು ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು, ರೈಲು ಗಾಲಿ ಕಾರ್ಖಾನೆ, ಭಾರತೀಯ ರೈಲ್ವೆ, ಯಲಹಂಕ, ಬೆಂಗಳೂರು-560064 (ಭಾರತ) ಅವರ ಕಚೇರಿಗೆ ನಿಗದಿತ ದಿನಾಂಕದಂದು ಅಥವಾ ಮೊದಲು ತಲುಪಬೇಕು.

ಗ್ಲೋಬಲ್ ಮ್ಯಾನುಯಲ್ ಟೆಂಡರ್ ಸಂಖ್ಯೆ: ಪಿ3255101
ಸಂಕ್ಷಿಪ್ತ ವಸ್ತುವಿನ ವಿವರಣೆ: ಹೈಡ್ರಾಲಿಕ್ ಸಿಲಿಂಡರ್
ಪ್ರಮಾಣ: 1 ಸೆಟ್

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 26.11.2025, ಮಧ್ಯಾಹ್ನ 2.00 ಗಂಟೆಗೆ

ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

ಸಾರ್ವಜನಿಕ ಪ್ರಕಟಣೆ

ರಾಜ್ಯ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರ ಕರ್ನಾಟಕ ಸರ್ಕಾರ ಇವರು ತಮ್ಮ ಪತ್ರ ಸಂಖ್ಯೆ SEIAA 215 CON 2025 ದಿನಾಂಕ : 21.10.2025 ರಂದು ಮೆ॥ ಎನ್ಸೂರ್ ರಿಲೈಯಬಲ್ ಪವರ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ರಾಂಪುರ ಗ್ರಾಮ, ಕಸಬಾ ಹೋಬಳಿ, ಮಾಲೂರ್ ತಾಲೂಕು, ಕೋಲಾರ್ ಜಿಲ್ಲೆಯಲ್ಲಿ ತಿಂಗಳಿಗೆ 35,00,000 ಸಾಮರ್ಥ್ಯದ ಲಿಥಿಯಂ ಅಯಾನ್ ಸಿಲಿಂಡ್ರಿಕಲ್ ಸೆಲ್ಸ್ (LFP) ಮತ್ತು ತಿಂಗಳಿಗೆ 50,00,000 ಸಾಮರ್ಥ್ಯದ ಲಿಥಿಯಂ ಅಯಾನ್ ಸಿಲಿಂಡ್ರಿಕಲ್ ಸೆಲ್ಸ್ (NMC) ಉತ್ಪಾದನೆಗಾಗಿ ಪರಿಸರ ವಿಮೋಚನ ಪತ್ರವನ್ನು ನೀಡಿರುತ್ತಾರೆ, ಸದರಿ ನಿರಪೇಕ್ಷಣಾ ಪತ್ರವು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಪರಿಸರ ಮತ್ತು ಅರಣ್ಯ ಸಚಿವಾಲಯ ಭಾರತ ಸರ್ಕಾರ ಇವರ https://parivesh.nic.in. ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜು ಆವರಣ,
ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560001.
Ph.No.080-22961016/22131385 E-Mail ID: registrar@bcu.ac.in

ಸಂ.ಬೆಂ.ನ.ವಿ/ಸಿಬ್ಬಂದಿ/ಅ.ಉ.ನೇ/ಗ.ವಿ/2025–26/198 ದಿನಾಂಕ : 23.10.2025

ಪತ್ರಿಕಾ ಪ್ರಕಟಣೆ

ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ವಿಶ್ವವಿದ್ಯಾನಿಲಯದ ಮಹಿಳಾ ಕಾಲೇಜು, ಮಲ್ಲೇಶ್ವರಂ ಹಾಗೂ ಸ್ನಾತಕೋತ್ತರ ಕೇಂದ್ರ, ಬಾಗಲೂರಿನಲ್ಲಿ ಈ ಕೆಳಕಂಡ ವಿವಿಧ ಸ್ನಾತಕ /ಸ್ನಾತಕೋತ್ತರ ವಿಷಯಗಳಿಗೆ 2025–26ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಸ್ನಾತಕ /ಸ್ನಾತಕೋತ್ತರ ವಿಷಯಗಳ ಬೋಧನಾ ಕಾರ್ಯದ ನಿರ್ವಹಣೆಗಾಗಿ ಹೆಚ್ಚುವರಿ ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆಯಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ತಂತ್ರಜ್ಞಾನ ವಿಭಾಗ – ಗಣಕವಿಜ್ಞಾನ (ಸ್ನಾತಕ/ಸ್ನಾತಕೋತ್ತರ) ಮತ್ತು ಎಂ.ಸಿ.ಎ

ಅರ್ಜಿಗಳನ್ನು **bcugfportal.in** ಲಿಂಕ್‌ನ ಮೂಲಕ ಸಲ್ಲಿಸತಕ್ಕದ್ದು. ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ: 27.10.2025ರಂದು ಬೆಳಿಗ್ಗೆ 10.00 ಗಂಟೆಯಿಂದ 31.10.2025ರ ಸಂಜೆ 5.00 ಗಂಟೆಯೊಳಗೆ ಸಲ್ಲಿಸತಕ್ಕದ್ದು. ನಿರ್ವಹಣಾ ಶುಲ್ಕ ರೂ. 200/– (SC/ST /CAT-1 Rs.100/-) ಗಳನ್ನು ಆನ್‌ಲೈನ್ ಮೂಲಕ ಈ ಕೆಳಕಂಡ ಬ್ಯಾಂಕ್ ಖಾತೆಗೆ ಪಾವತಿಸತಕ್ಕದ್ದು. ಹೆಚ್ಚಿನ ಮಾಹಿತಿಗಳಿಗಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.bcu.ac.in ನೋಡಬಹುದು.

Bank Name: Bank of Baroda, Account No: 05190100016143, IFSC Code: BARBOBANGAL (5th letter is Zero)

ಭರ್ತಿ ಮಾಡಿದ ಅರ್ಜಿಯ ಭೌತಿಕ ಪ್ರತಿಯನ್ನು ದಿನಾಂಕ: 31.10.2025 ಸಂಜೆ 5.00 ಗಂಟೆಯೊಳಗೆ ಕುಲಸಚಿವರ ಕಛೇರಿ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜ್ ಆವರಣ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು–560001 ರಲ್ಲಿ ಸಲ್ಲಿಸಬಹುದಾಗಿದೆ.

ಪ.ಜಾ/ಪ.ಪಂ/ಹಿ.ವ ಮೀಸಲಾತಿಗೆ ಕರ್ನಾಟಕ ರಾಜ್ಯದ ಅಭ್ಯರ್ಥಿಗಳು ಮಾತ್ರ ಅರ್ಹರಾಗಿರುತ್ತಾರೆ. ಅಭ್ಯರ್ಥಿಯು ಕರ್ನಾಟಕ ರಾಜ್ಯದ ಸಕ್ಷಮ ಪ್ರಾಧಿಕಾರದಿಂದ ಜಾತಿ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು.

DIPR/CP/3395/Zen/2025-26 ಸಹಿ/– ಕುಲಸಚಿವರು

ನಿಧನ ವಾರ್ತೆ

ಸದಾಶಿವ ಎಚ್.ಎನ್.

ಬೆಂಗಳೂರು: ನಾಟಕಕಾರರಾದ ದಿವಂಗತ ಬಿ. ಪುಟ್ಟಸ್ವಾಮಯ್ಯ ಅವರ ಅಳಿಯ ಸದಾಶಿವ ಎಚ್.ಎನ್. (83) ಅವರು ವಯೋಸಹಜ ಅನಾರೋಗ್ಯ ಸಮಸ್ಯೆಯಿಂದ ನಿಧನರಾಗಿದ್ದಾರೆ.

ಮೃತರಿಗೆ ಪುತ್ರ ಪ್ರಫುಲ್ಲಚಂದ್ರ, ಪುತ್ರಿ ಮೋಲಿನಾ ಹಾಗೂ ಸೊಸೆ ಚೇತನಾ ಇದ್ದಾರೆ. ಮೃತರ ದೇಹವನ್ನು ಅವರ ಇಚ್ಛೆಯಂತೆ ವೈದ್ಯಕೀಯ ವಿದ್ಯಾರ್ಥಿಗಳ ಪ್ರಯೋಗಗಳಿಗೆ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ನೀಡಲಾಯಿತು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಐಐಎಂಬಿ: ಪರಿಸರಸ್ನೇಹಿ ಪ್ರಯಾಣಕ್ಕೆ ಇ.ವಿ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂಬಿ) ಕ್ಯಾಂಪಸ್‌ನಲ್ಲಿ ಪರಿಸರ ಸ್ನೇಹಿ ಪ್ರಯಾಣಕ್ಕಾಗಿ ವಿದ್ಯುತ್ ಚಾಲಿತ (ಇ.ವಿ) ಬಸ್‌ಗೆ ಚಾಲನೆ ನೀಡಿದೆ. ನ್ಯಾಷನಲ್ ಇ-ಗವರ್ನೆನ್ಸ್ ಸರ್ವೀಸಸ್ ಲಿಮಿಟೆಡ್ (ಎನ್‌ಇಎಸ್‌ಎಲ್) ಸಹಯೋಗದಲ್ಲಿ ವಿದ್ಯುತ್ ಚಾಲಿತ ಬಸ್ ಕಾರ್ಯಾಚರಣೆ ಪ್ರಾರಂಭಿಸಿದೆ.

'ವಿದ್ಯುತ್ ಚಾಲಿತ ಬಸ್‌ಗಳು ಪರಿಸರಸ್ನೇಹಿ ಮಾತ್ರವಲ್ಲದೆ, ಇಂಧನ ದಹಿಸುವ ವಾಹನಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿಯೂ ಕಾರ್ಯಾಚರಣೆ ಮಾಡಲಿವೆ. ಕ್ಯಾಂಪಸ್‌ನ ಪರಿಸರಸ್ನೇಹಿ ವ್ಯವಸ್ಥೆಯನ್ನು ಬಲಪಡಿಸಲು ಇವು ಸಹಕಾರಿ' ಎಂದು ಎನ್‌ಇಎಸ್‌ಎಲ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ದೇಬಜ್ಯೋತಿ ರೇ ಚೌಧರಿ ತಿಳಿಸಿದರು.

ಎನ್‌ಇಎಸ್‌ಎಲ್‌ನ ಕಾರ್ಯನಿರ್ವಾಹಕ ನಿರ್ದೇಶಕಿ ನಿವೇದಿತಾ ಇ.ಪಿ., ಕೆನರಾ ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ಭವೇಂದ್ರ ಕುಮಾರ್, ಐಐಎಂಬಿಯ ಉಸ್ತುವಾರಿ ನಿರ್ದೇಶಕ ಪ್ರೊ.ಯು. ದಿನೇಶ್ ಕುಮಾರ್, ಉತ್ಪಾದನೆ ಮತ್ತು ಕಾರ್ಯಾಚರಣೆ ನಿರ್ವಹಣೆ ವಿಭಾಗದ ಅಧ್ಯಕ್ಷ ಪ್ರೊ. ಹರಿತಾ ಸಾರಂಗ, ಆಡಳಿತ ವಿಭಾಗದ ಡೀನ್ ಪ್ರೊ.ಎಂ. ಜಯದೇವ್ ಮತ್ತು ಐಐಎಂಬಿ ಅಭಿವೃದ್ಧಿ ಪ್ರತಿಷ್ಠಾನದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರೋಹಿತ್ ಜೈಸಿಂಗ್ ಉಪಸ್ಥಿತರಿದ್ದರು.

'ಬೆಂಗಳೂರು ನಡಿಗೆ' ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

'ಸುರಂಗ ರಸ್ತೆ ಯಾರಿಂದಲೂ ತಡೆಯಲಾಗದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುರಂಗ ರಸ್ತೆ ಯೋಜನೆಯಿಂದ ನನ್ನನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಆ ದೇವರು ತಡೆಯಬೇಕು ಅಷ್ಟೇ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕಬ್ಬನ್ ಪಾರ್ಕ್‌ನಲ್ಲಿ ಭಾನುವಾರ ನಡೆದ 'ಬೆಂಗಳೂರು ನಡಿಗೆ' ಕಾರ್ಯಕ್ರಮದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಸುರಂಗ ರಸ್ತೆಗೆ ಜನರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ನಾಗರಿಕರೊಬ್ಬರು ನನ್ನನ್ನು ಅಡ್ಡ ಹಾಕಿ ಯಾವುದೇ ಕಾರಣಕ್ಕೂ ಸುರಂಗ ಯೋಜನೆ ನಿಲ್ಲಬಾರದು ಎಂದು ಒತ್ತಾಯಿಸಿದ್ದಾರೆ. ಸಂಸದ ತೇಜಸ್ವಿ ಸೂರ್ಯ ಹೊರತಾಗಿ ಯಾರೂ ವಿರೋಧ ಮಾಡುತ್ತಿಲ್ಲ. ಟೀಕೆ ಮಾಡುವುದನ್ನು ನಾನು ವಿರೋಧ ಮಾಡುತ್ತಿಲ್ಲ. ಪರ್ಯಾಯ ಮಾರ್ಗಗಳ ಬಗ್ಗೆಯೂ ತಿಳಿಸಬೇಕು. ಅವರ ಸಲಹೆಗಳು ಚೆನ್ನಾಗಿದ್ದರೆ ಅದನ್ನೂ ಪರಿಗಣಿಸಲಾಗುವುದು' ಎಂದು ಹೇಳಿದರು.

'ಸಾರ್ವಜನಿಕರ ಪರವಾಗಿ ಭೇಟಿ ಮಾಡುವುದಾಗಿ ತೇಜಸ್ವಿ ಸೂರ್ಯ ಹೇಳಿದ್ದಾರೆ. ಮಂಗಳವಾರ ಭೇಟಿಗೆ ಸಮಯ ನೀಡಿದ್ದೇನೆ. ಅವರ ಸಲಹೆಗಳು ಸೂಕ್ತವಾಗಿದ್ದರೆ ಅವನ್ನೂ ಸ್ವೀಕರಿಸಲಾಗುವುದು' ಎಂದರು.

ಮೆಟ್ರೊ ಕೆಂಪು ಮಾರ್ಗ: 'ನಮ್ಮ ಮೆಟ್ರೊ ಕೆಂಪು ಮಾರ್ಗಕ್ಕೆ ಸಂಬಂಧಿಸಿದಂತೆ ಮತ್ತೊಮ್ಮೆ ಬಿಎಂಆರ್‌ಸಿಎಲ್ ವಿಸ್ತೃತ ಯೋಜನಾ ವರದಿ ತಯಾರಿಸಿದೆ. ಜನರ ಅನುಕೂಲಕ್ಕಾಗಿ ಮೆಟ್ರೊ ಮಾರ್ಗ ವಿಸ್ತರಣೆ ಮಾಡಲೇಬೇಕು. ಜೊತೆಗೆ ಡಬಲ್ ಡೆಕರ್ ಮಾಡಬೇಕು. ಕೇಂದ್ರ ಸಚಿವರು ಅ. 30ರಂದು ಬೆಂಗಳೂರಿಗೆ ಬರಲಿದ್ದಾರೆ. ಅವರಿಗೂ ಈ ಬಗ್ಗೆ ಮನವಿ ಸಲ್ಲಿಸಲಾಗುವುದು' ಎಂದರು.

ಕುಗ್ಗಿದ ಪಾರ್ಕ್: '330 ಎಕರೆ ವಿಸ್ತೀರ್ಣದ ಕಬ್ಬನ್ ಪಾರ್ಕ್ ಈಗ 196 ಎಕರೆಗೆ ಕುಗ್ಗಿದೆ. ಪಾರ್ಕಿನ ಒಳಗೆ ಇರುವ ಎಲ್ಲಾ ಗುತ್ತಿಗೆ ಕಟ್ಟಡಗಳನ್ನು ತೆರವುಗೊಳಿಸಬೇಕು, ವಾಣಿಜ್ಯೀಕರಣ ಮಾಡಬೇಡಿ' ಎಂದು ಕಬ್ಬನ್ ಪಾರ್ಕ್ ನಡಿಗೆದಾರರ ಸಂಘದ ನಾಗರಿಕರೊಬ್ಬರು ಮನವಿ ಸಲ್ಲಿಸಿದರು.

'ಉದ್ಯಮಿಗಳೂ ನಮ್ಮವರೇ': 'ಉದ್ಯಮಿಗಳು ನಮ್ಮ ಸಹೋದರ, ಸಹೋದರಿಯರು. ಬೆಂಗಳೂರು ನಿಮ್ಮ ನಗರ, ಇದರ ಘನತೆಗೆ ಗಾಸಿ ಮಾಡಬೇಡಿ ಎಂದು ಹೇಳಿದ್ದೇನೆ. ನಮ್ಮನ್ನು ಟೀಕೆ ಮಾಡಿದವರನ್ನು ದೂರ ಮಾಡಲು ಆಗುವುದಿಲ್ಲ. ಅವರ ಸಲಹೆ ಸೂಚನೆಗಳನ್ನು ನಾವು ಕೇಳಬೇಕು' ಎಂದು ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿದರು.

'ನೀವು ಟೀಕೆ ಮಾಡಿದರೆ ಈ ನಗರದ ಬಗ್ಗೆ ಅಂತರರಾಷ್ಟ್ರೀಯ ಸುದ್ದಿಯಾಗುತ್ತದೆ ಎಂದು ಅವರಿಗೆ ಹೇಳಿದ್ದೇನೆ. ಮೋಹನ್‌ದಾಸ್ ಪೈ, ಕಿರಣ್ ಮಜುಂದಾರ್ ಷಾ ಮತ್ತಿತರರ ಜೊತೆ ಮಾತುಕತೆ ನಡೆಸಲಾಯಿತು. ಎಲ್ಲರೂ ಬೆಂಗಳೂರಿನ ಅಭಿವೃದ್ಧಿ ಬಗ್ಗೆ ಅತ್ಯುತ್ತಮ ಸಲಹೆಗಳನ್ನು ನೀಡಿದ್ದಾರೆ. ಅವರನ್ನು ಮುಖ್ಯ ಸಲಹಾ ಸಮಿತಿಗೂ ಸೇರಿಸಲಾಗಿದೆ' ಎಂದು ಹೇಳಿದರು.



ಕಬ್ಬನ್ ಪಾರ್ಕ್‌ನಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಾರ್ವಜನಿಕರೊಂದಿಗೆ ಸಂವಾದದಲ್ಲಿ ಅಂಗವಿಕಲರೊಬ್ಬರು ಡಿ.ಕೆ. ಶಿವಕುಮಾರ್ ಅವರಿಗೆ ಅಹವಾಲು ಸಲ್ಲಿಸಿದರು

ಹೈಕೋರ್ಟ್ ಸ್ಥಳಾಂತರಕ್ಕೆ ಸ್ಥಳ ಪರಿಶೀಲನೆ

'ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ಕಾರ್ಯಕ್ರಮಕ್ಕೆ ಹೋದ ಸಂದರ್ಭದಲ್ಲಿ ಹೈಕೋರ್ಟ್ ಸ್ಥಳಾಂತರಕ್ಕೆ 15-20 ಎಕರೆ ಜಾಗ ನೀಡಿ ಎಂದು ವಕೀಲರು, ಮುಖ್ಯ ನ್ಯಾಯಮೂರ್ತಿಯವರು ಮನವಿ ಮಾಡಿದ್ದರು. ಸರ್ಕಾರದ ಮುಂದೆಯೂ ಈ ಬಗ್ಗೆ ಚರ್ಚೆ ನಡೆಸಲಾಗುವುದು. ನ್ಯಾಯಾಲಯದವರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹತ್ತಿರದಲ್ಲಿ ಎಲ್ಲಿ ಸ್ಥಳಾವಕಾಶ ಇದೆ ಎಂದು ಪರಿಶೀಲನೆ ಮಾಡಲಾಗುವುದು' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

'ಹಳೆಯ ಐತಿಹಾಸಿಕ ಕಟ್ಟಡವಾದ ಕಾರಣಕ್ಕೆ ಅದನ್ನು ಏನೂ ಮಾಡಲು ಸಾಧ್ಯವಿಲ್ಲ. ಆದರೆ ಸ್ಥಳಾವಕಾಶ ಚಿಕ್ಕದಿದೆ. ನಗರದ ಹೊರಗೆ ಹೈಕೋರ್ಟ್ ಸ್ಥಾಪಿಸಲು ಸಾಧ್ಯವಿಲ್ಲ' ಎಂದು ಹೇಳಿದರು. 'ಒಂದಷ್ಟು ಜನ ವಕೀಲರು ಭೇಟಿ ಮಾಡಿ ರೇಸ್ ಕೋರ್ಸ್ ಜಾಗ ಬಳಸಿಕೊಳ್ಳುವ ಬಗ್ಗೆ ತಿಳಿಸಿದರು. ಒಂದಷ್ಟು ಕಾನೂನಾತ್ಮಕ ತೊಡಕುಗಳು ಇರುವ ಕಾರಣಕ್ಕೆ ಈ ಬಗ್ಗೆ ಆನಂತರ ಆಲೋಚನೆ ಮಾಡೋಣ ಎಂದು ತಿಳಿಸಿದ್ದೇನೆ' ಎಂದು ಹೇಳಿದರು.

ಕಬ್ಬನ್ ಪಾರ್ಕ್ ಅಭಿವೃದ್ಧಿಗೆ ₹5 ಕೋಟಿ

'ಕಬ್ಬನ್ ಪಾರ್ಕ್ ಅಭಿವೃದ್ಧಿಗೆ ಬಿಡಿಎಯಿಂದ ₹5 ಕೋಟಿ ಅನುದಾನ ನೀಡಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಕಬ್ಬನ್ ಉದ್ಯಾನದ ಉನ್ನತೀಕರಣಕ್ಕೆ ಹಣ ಬಿಡುಗಡೆ ಮಾಡುವಂತೆ ನಾಗರಿಕರು ಮನವಿ ಮಾಡಿದ್ದಾರೆ. ಅವರ ಮನವಿಯಂತೆ ಮಿಕ್ಕ ಅನುದಾನವನ್ನು ತೋಟಗಾರಿಕೆ ಇಲಾಖೆಯಿಂದ ನೀಡುವಂತೆ ವ್ಯವಸ್ಥೆ ಮಾಡಲಾಗುವುದು. ಈ ಉದ್ಯಾನದ ಆವರಣದಲ್ಲಿ ಯಾವುದೇ ರೀತಿಯ ನಿರ್ಮಾಣ ಕೆಲಸಗಳಿಗೆ ಸರ್ಕಾರ ಆಸ್ಪದ ನೀಡುವುದಿಲ್ಲ. ಇವುಗಳ ರಕ್ಷಣೆಗೆ ಏನು ಕೆಲಸ ಮಾಡಬೇಕೋ ಅದನ್ನು ಮಾಡುತ್ತೇವೆ' ಎಂದು ಹೇಳಿದರು.

'ಕುಮಾರಸ್ವಾಮಿ ಖಾಲಿ ಟ್ರಂಕ್'

'ಬೆಂಗಳೂರಿನ 'ಬಿ' ಖಾತಾ ಆಸ್ತಿಗಳನ್ನು 'ಎ' ಖಾತಾಗೆ ಪರಿವರ್ತನೆ ಮಾಡುತ್ತಿರುವ ಬಗ್ಗೆ ಇಲ್ಲಸಲ್ಲದ ಟೀಕೆ ಮಾಡುತ್ತಿರುವ ಕುಮಾರಸ್ವಾಮಿ ಖಾಲಿ ಟ್ರಂಕ್' ಎಂದು ಡಿ.ಕೆ. ಶಿವಕುಮಾರ್ ಕುಟುಕಿದರು.

'ಖಾತಾ ಹೆಸರಲ್ಲಿ ಕಾಂಗ್ರೆಸ್ ಸರ್ಕಾರ ಲೂಟಿ ಮಾಡುತ್ತಿದೆ ಎಂದು ಕುಮಾರಸ್ವಾಮಿ ಹೇಳುತ್ತಿದ್ದಾರೆ. ಲೂಟಿ ಮಾಡಿದ ಹಣ ಜೇಬಿನಲ್ಲಿದ್ದರೆ ಎತ್ತಿಕೊಂಡು ಹೋಗಲಿ' ಎಂದು ತಿರುಗೇಟು ನೀಡಿದರು.

'ಎ' ಖಾತಾ, 'ಬಿ' ಖಾತಾ ಬಗ್ಗೆ ಕೇವಲ ಟೀಕೆ ಮಾತ್ರ. ಅದರಲ್ಲಿ ಯಾವುದೇ ಸಲಹೆ ಸೂಚನೆಗಳಿಲ್ಲ. 'ಬಿ' ಖಾತಾಗಳನ್ನು ಬಿಜೆಪಿ ಅವಧಿಯಲ್ಲಿ ಮಾಡಲಾಯಿತು. ಇದನ್ನು ಮಾಡಲು ಹೇಳಿದವರು ಯಾರು' ಎಂದು ಪ್ರಶ್ನಿಸಿದರು.

ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ಅಕ್ರಮವಾಗಿ ಯಾರೇ ಅಳವಡಿಸಿದರೂ ತೆರವುಗೊಳಿಸಲಾಗುವುದು. ಪ್ರಕರಣ ದಾಖಲಿಸಲಾಗುವುದು

ಡಿ.ಕೆ. ಶಿವಕುಮಾರ್
ಉಪ ಮುಖ್ಯಮಂತ್ರಿ

ನಗರದಲ್ಲಿ ಇಂದು

'ಎಸ್.ವಿ.ಆರ್.@50' ಸಮಾರೋಪ ಮತ್ತು ರಾಜೇಂದ್ರಸಿಂಗ್ ಬಾಬು ಅವರಿಗೆ ಸನ್ಮಾನ: ಬೆಳಿಗ್ಗೆ 11.30ಕ್ಕೆ 'ರೆಟ್ರೊ ರಿವೈವಲ್' ಫ್ಯಾಷನ್ ಶೋ, ಸಂಜೆ 5ಕ್ಕೆ ಹಂಸಲೇಖ ನೇತೃತ್ವದಲ್ಲಿ ಗಾನಲಹರಿ, ಸಂಜೆ 6.30ಕ್ಕೆ ವೇದಿಕೆ ಕಾರ್ಯಕ್ರಮ, ಸಮಾರಂಭ ಉದ್ಘಾಟನೆ: ಸಿದ್ದರಾಮಯ್ಯ, ಸ್ಮರಣ ಸಂಚಿಕೆ ಬಿಡುಗಡೆ: ಎಚ್.ಸಿ. ಮಹದೇವಪ್ಪ, ಗೌರವಾರ್ಪಣೆ: ಎಸ್.ವಿ. ರಾಜೇಂದ್ರಸಿಂಗ್ ಬಾಬು, ಅನಂತನಾಗ್, ಪ್ರಕಾಶ್ ಕಾರ್ಯಪ್ಪ, ಪಿ. ಧನರಾಜ್, ಕಿರುಚಿತ್ರ ಬಿಡುಗಡೆ: ಮಣಿರತ್ನಂ, ಮುಖ್ಯ ಅತಿಥಿಗಳು: ಬರಗೂರು ರಾಮಚಂದ್ರಪ್ಪ, ಗಿರೀಶ್ ಕಾಸರವಳ್ಳಿ, ಸುಹಾಸಿನಿ, ಶಿವರಾಜ್‌ಕುಮಾರ್, ವಿ. ರವಿಚಂದ್ರನ್, ಸಾಧು ಕೋಕಿಲ, ಟಿ.ಎ. ನಾರಾಯಣಗೌಡ, ರಾಕ್‌ಲೈನ್ ವೆಂಕಟೇಶ್, ಅರ್ಜುನ್ ಸರ್ಜಾ, ಧ್ರುವ ಸರ್ಜಾ, ಆಯೋಜನೆ: ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ

ರಾಜೇಂದ್ರಸಿಂಗ್ ಬಾಬು

ತಿಂಗಳ ಸಾಂಸ್ಕೃತಿಕ ಕಾರ್ಯಕ್ರಮ: 'ತಾಜ್ ಮಹಲಿನ ಟೆಂಡರ್' ನಾಟಕ ಪ್ರದರ್ಶನ, ಅತಿಥಿ: ಕವಿತಾ ಶರ್ಮ, ಸನ್ಮಾನ: ಸುಂದರ್ ರಾಜ್ ಕೆ., ಅಧ್ಯಕ್ಷತೆ: ಜಗದೀಶ್ ಕುಮಾರ್, ಆಯೋಜನೆ: ಕನ್ನಡ ಸಾಹಿತ್ಯ ಕೂಟ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಬಿಇಎಲ್, ಸಂಜೆ 5.30

ಗಾಂಧೀಜಿ ಪರಿಚಯ: ಮಧ್ಯಾಹ್ನ 12ರಿಂದ ಗಾಂಧೀಜಿ ಅವರ ಅಪರೂಪದ ಛಾಯಾಚಿತ್ರ ಪ್ರದರ್ಶನ, ಸಂಜೆ 6.30ಕ್ಕೆ ಉಪನ್ಯಾಸ: ರಾಮಚಂದ್ರ ಗುಹಾ, ಆಯೋಜನೆ: ಆರ್‌ಬಿಎನ್‌ಎಂ ಎಜುಕೇಷನಲ್ ಚಾರಿಟೀಸ್, ಸ್ಥಳ: ಸಭಾ-ಬಿಎಲ್‌ಆರ್, ಕಾಮರಾಜ ರಸ್ತೆ.

ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷೆ ಡಾ. ವಸುಂಧರಾ ಭೂಪತಿ ಅಭಿಮತ

'ಅನುದಾನ ಇಲ್ಲದೆ ಪುಸ್ತಕ ಖರೀದಿ ಸಾಧ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರಂಥಾಲಯ ಕರವನ್ನು ನೇರವಾಗಿ ಗ್ರಂಥಾಲಯ ಇಲಾಖೆಗೆ ಪಾವತಿಸಲು ಕ್ರಮವಹಿಸಿದರೆ, ಪ್ರತ್ಯೇಕ ಅನುದಾನದ ಅಗತ್ಯವಿಲ್ಲದೆ ಪುಸ್ತಕಗಳನ್ನು ಖರೀದಿಸಲು ಇಲಾಖೆಗೆ ಸಾಧ್ಯವಾಗುತ್ತದೆ' ಎಂದು ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷೆ ಡಾ. ವಸುಂಧರಾ ಭೂಪತಿ ಅಭಿಪ್ರಾಯ ವ್ಯಕ್ತಪಡಿಸಿದರು.

ಸಂಘವು ನಗರದಲ್ಲಿ ಹಮ್ಮಿಕೊಂಡಿದ್ದ ನೂತನ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

'ದಿನಬಳಕೆಯ ಎಲ್ಲ ವಸ್ತುಗಳ ಬೆಲೆ ದುಪ್ಪಟ್ಟಾಗಿದೆ. ಆದರೆ, ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಪುಟವಾರು ಬೆಲೆ ನಿಗದಿಪಡಿಸಿ ಎಂಟು ವರ್ಷಗಳಾಗಿವೆ. ಸರ್ಕಾರ ಪುಟವಾರು ದರ ಪರಿಷ್ಕರಣೆಯನ್ನೇ ಮಾಡಿಲ್ಲ. ಈಗಲಾದರೂ ಈ ನಿಟ್ಟಿನಲ್ಲಿ ಗಮನಹರಿಸಬೇಕು' ಎಂದು ಆಗ್ರಹಿಸಿದರು.

'ರಾಜ್ಯಾದ್ಯಂತ ಪುಸ್ತಕ ಪ್ರದರ್ಶನ ಹಮ್ಮಿಕೊಳ್ಳಲು ಸಂಘವು ಯೋಜನೆ ರೂಪಿಸಿದೆ. ಪುಸ್ತಕದ ಬಗೆಗೆ ಚರ್ಚೆ-ಸಂವಾದ ನಡೆಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಲೇಖಕರು, ಪ್ರಕಾಶಕರು ಮತ್ತು ಮುದ್ರಕರ ಜತೆ ಮಾತುಕತೆ ನಡೆಸಲು ಮಾತಿನ ವಿನ್ಯಾಸ ಕಾರ್ಯಕ್ರಮ, ಹೊಸ ಪ್ರಕಾಶಕರಿಗೆ ಪುಸ್ತಕ ನಿರ್ಮಾಣ ಮಾಡಲು ಕಮ್ಮಟ, ಶಾಲಾ-ಕಾಲೇಜುಗಳಲ್ಲಿ ಪುಸ್ತಕಗಳ ಬಗ್ಗೆ ಅರಿವು ಮೂಡಿಸಲು 'ಗ್ರಂಥಾಲಯದ ಅಂಗಳ' ಮುಂತಾದ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ' ಎಂದರು.

ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಸಂಘದ ಹೊಸ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ಅಭಿನವ ರವಿಕುಮಾರ್, ಉಪಾಧ್ಯಕ್ಷ ಜಿ.ಎನ್. ಮೋಹನ್, ಪ್ರಗತಿ ಪರ ಚಿಂತಕ ಸಿದ್ದನಗೌಡ ಪಾಟೀಲ, 'ವಿಜಯ ಕರ್ನಾಟಕ' ಪುರವಣಿಗಳ ಸಂಪಾದಕಿ ವಿದ್ಯಾರಶ್ಮಿ ಪೆಲ್ಲತ್ತಡ್ಕ ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಹೊಸ ಯೋಜನೆಗಳ ಭಿತ್ತಿಪತ್ರವನ್ನು ನರಹಳ್ಳಿ ಬಾಲಸುಬ್ರಹ್ಮಣ್ಯ ಪ್ರದರ್ಶಿಸಿದರು. ಜಿ.ಎನ್. ಮೋಹನ್, ಅಭಿನವ ರವಿಕುಮಾರ್, ಡಾ. ವಸುಂಧರಾ ಭೂಪತಿ, ಸಿದ್ದನಗೌಡ ಪಾಟೀಲ ಉಪಸ್ಥಿತರಿದ್ದರು

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

HRD & Admin

WANTED FEMALE Office Assistant Any Degree Knowing Tally, Fluent In English, Kannada, Hindi Around Rajajinagar Contact: 9108458798/ 9845579620

PERSONAL

Change of Name

I , SUCHARITHA. M.V. SARABU age 49 years, W/o. ASHOK SARABU residing at Flat No.004, VM Grandeur, Jayanthi Nagar, Horamavu, Bangalore- 560043, have changed my name from ORUGANTI MADHUPA VENKATA SUCHARITHA to SUCHARITHA. M.V. SARABU for all future purposes and documents vide affidavit dated 25/10/2025 before Notary G.B. Turamari Bangalore

PUBLIC NOTICE

PUBLIC NOTICE

This is to notify the General Public that our client proposes to enter into a Joint Development Agreement to develop and sell the below mentioned Schedule Property with Sri.Krishna Saidapet Mohan, Son of Sri.S.Ram Mohan, Residing at No.30, Park View, Park Road, Tasker Town, Shivajinagar, Bangalore North, H.K.P.Road, Bangalore – 560051, who has represented that he acquired right, title, interest, ownership and possession to Schedule Property in terms of (1) Sale Deed dated 29/04/2000, registered as Document No.274/2000-01, in Book-I, Volume 109, at Pages 79 in the Office of Sub-Registrar, Shivajinagar, Bangalore and (2) Will dated 12/02/2006, executed by Sri.S.Ram Mohan. Person/s objecting for the proposed development or having any right in the Schedule Property may lodge their objections and/or claims with the undersigned along with supporting documentary evidence within **15 days** from the date of this publication and objections and/or claims received thereafter will not be binding on our client and our client will proceed to develop and sell the Schedule property as if there are no claims/objections.

:SCHEDULE PROPERTY:

All that piece and parcel of Property being a Site with a old Residential building bearing Municipal No.29, situated at Park Road, Tasker Town, Ward No.63/ Jayamahal, (Old Ward No.78), PID No.78-56-29, Bangalore and site totally measuring 3696 Square Feet and bounded by :-

East : Munshi Akbar Hussain Road;
West : Private Property No.28;
North : Conservancy Lane; and
South : Park Road.

YASEEN BABU,
K.M. LEGAL ADVOCATES,
No.1C, 'WILOCRISA', # 14, Rest House Crescent Road, BANGALORE-560001. Ph : +91 9845855933
Email: kmlegaladvocates@gmail.com
Place: Bangalore **Date:** 27/10/2025

RENTAL PROPERTIES

Accommodation Available

Commercial

FOR RENT
Independent Corner Building Suitable for Showroom Space @Jayanagar 4th Block 100Ft Road of 10,000Sqft. With Basement/ Ground/1st/2nd/3rd &4th Floor Each Floor 2400Sqft. With Lift,Parking,DG Power Suitable for Jewellary/Textile/ Saree Etc. Call-9901453477

COMMERCIAL PROPERTY
RENT Grnd flr, 2750 sqft Beml layout 3rd stage Rajarajeshwari nagar Bangalore 9945479966

FOR RENT
Independent Corner Building Suitable for Showroom Space @BSK II STAGE, Wide Roads of 15,000Sqft. With Stilt,Ground, 1st/2nd/3rd/4th Terrace Each Floor 3000 Sqft With Lift,Parking,DG Power Suitable for Jewellary/Textile/ Saree/Hospital,Etc. Call-9901453477

FOR RENT
Independent Building Suitable for Showroom Space @Kanakapura Road, J.P.NAGAR Metro Signal Near Piller No-74 of 2500-6000 Sqft. Ground Floor with Parking, DG Power Suitable for Automobile/Jewellary/ Textile/Saree, Etc. Call-9901453477

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru



ಈರುಳ್ಳಿ ಚೀಲದಲ್ಲಿ ಶ್ರೀಗಂಧ ಸಾಗಣೆ

ಸರಕು ಸಾಗಣೆ ವಾಹನದಲ್ಲಿ ಸಾಗಿಸುತ್ತಿದ್ದ ₹1.12 ಕೋಟಿ ಮೌಲ್ಯದ ಶ್ರೀಗಂಧ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರಕು ಸಾಗಣೆ ವಾಹನದಲ್ಲಿ ಈರುಳ್ಳಿ ಚೀಲಗಳ ನಡುವೆ ಶ್ರೀಗಂಧದ ತುಂಡುಗಳನ್ನು ಬಚ್ಚಿಟ್ಟು ಅಕ್ರಮವಾಗಿ ಸಾಗಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶ ಕರ್ನೂಲ್ ಮೂಲದ ಶೇಖ್ ಅಬ್ದುಲ್ ಕಲಾಂ (47) ಮತ್ತು ಶೇಖ್ ಶಾರೂಕ್(31) ಎಂಬುವರನ್ನು ಬಂಧಿಸಿ, ₹1.12 ಕೋಟಿ ಮೌಲ್ಯದ 750 ಕೆ.ಜಿ. ತೂಕದ 258 ಶ್ರೀಗಂಧದ ತುಂಡುಗಳು, ಸರಕು ಸಾಗಣೆ ವಾಹನ ಹಾಗೂ ಕಾರನ್ನು ಜಪ್ತಿ ಮಾಡಲಾಗಿದೆ.

ಆರೋಪಿಗಳು ಅಕ್ಟೋಬರ್ 15ರ ಮಧ್ಯರಾತ್ರಿ 12.30ರ ಸೋಮೇಶ್ವರ ನಗರ ಆರ್ಚ್ ಬಳಿ ಗೂಡ್ಸ್ ವಾಹನ ನಿಲ್ಲಿಸಿಕೊಂಡು ಅನುಮಾನಾಸ್ಪದವಾಗಿ ವರ್ತಿಸುತ್ತಿದ್ದರು. ಈ ಬಗ್ಗೆ ಸಿಕ್ಕ ಮಾಹಿತಿ ಮೇರೆಗೆ ಪೊಲೀಸರು ಕ್ಷಿಪ್ರ ಕಾರ್ಯಾಚರಣೆ ಕೈಗೊಂಡು, ವಾಹನ ತಪಾಸಣೆ ನಡೆಸಿದಾಗ ಈರುಳ್ಳಿ ತುಂಬಿದ್ದ ಚೀಲದಲ್ಲಿ ಶ್ರೀಗಂಧದ ತುಂಡುಗಳು ಪತ್ತೆಯಾದವು.

ಆಂಧ್ರಪ್ರದೇಶದ ಕರ್ನೂಲ್‌ನಿಂದ ಆರೋಪಿಗಳು ಶ್ರೀಗಂಧದ ತುಂಡುಗಳನ್ನು ನಗರಕ್ಕೆ ಅಕ್ರಮವಾಗಿ ಸಾಗಿಸುತ್ತಿದ್ದರು. 258 ತುಂಡುಗಳನ್ನು 18 ಚೀಲಗಳಿಗೆ ತುಂಬಿದ್ದರು. ಶೇಖ್ ಶಾರೂಕ್ ಈ ಲಘು ಸರಕು ಸಾಗಣೆ ವಾಹನ ಚಾಲನೆ ಮಾಡಿಕೊಂಡು ಬಂದಿದ್ದು, ಈ ವಾಹನದ ಹಿಂದೆ ಉಳಿದ ಮೂವರು ಆರೋಪಿಗಳು ಕಾರಿನಲ್ಲಿ ಹಿಂಬಾಲಿಸಿಕೊಂಡು ಬಂದಿದ್ದರು.

ಶ್ರೀಗಂಧದ ತುಂಡುಗಳನ್ನು ನಗರದ ಡೀಲರ್‌ಗೆ ತಲುಪಿಸಲು ಬಂದಿದ್ದರು ಎಂಬುದು ತಿಳಿದುಬಂದಿದೆ. ಈ ಕಳ್ಳಸಾಗಣೆಯಲ್ಲಿ ಇನ್ನೂ ಹಲವರು ಭಾಗಿಯಾಗಿರುವ ಶಂಕೆ ವ್ಯಕ್ತವಾಗಿದೆ. ಈ ಸಂಬಂಧ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮನೆ ಕೆಲಸದಾಕೆಯ ಕೊಲೆ: ಇಬ್ಬರ ಬಂಧನ

ಅಪರಾಧ ಸುದ್ದಿ

ಮನೆ ಕೆಲಸದಾಕೆಯನ್ನು ಕೊಲೆ ಮಾಡಿ ಆಟೊದಲ್ಲಿ ಮೃತದೇಹವನ್ನು ಬಿಟ್ಟು ಹೋಗಿದ್ದ ಘಟನೆಗೆ ಸಂಬಂಧಿಸಿದಂತೆ ತಿಲಕ್‌ನಗರ ಠಾಣೆ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ರಾಗಿಗುಡ್ಡ ಕೊಳೆಗೇರಿ ಪ್ರದೇಶ ನಿವಾಸಿ ಸಲ್ಮಾ (35) ಕೊಲೆಯಾದವರು.

ಪ್ರಕರಣ ಸಂಬಂಧ ಸ್ವಾಗತ್ ಕಾಲೊನಿಯ ನಿವಾಸಿಗಳಾದ ಸುಬ್ರಮಣಿ ಅಲಿಯಾಸ್ ಸುಬ್ಬು ಮತ್ತು ಸೆಂಥಿಲ್ ಎಂಬುವವರನ್ನು ಬಂಧಿಸಲಾಗಿದೆ.

ನಾಲ್ಕು ಮಕ್ಕಳ ತಾಯಿಯಾಗಿರುವ ಸಲ್ಮಾ ಅವರ ಪತಿ ಕೆಲ ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ. ಪತಿ ಸಾವಿನ ಬಳಿಕ ಮನೆ ಕೆಲಸ ಮಾಡಿ ಜೀವನ ನಡೆಸುತ್ತಿದ್ದರು. ಸುಬ್ರಮಣಿ ಹಾಗೂ ಸೆಂಥಿಲ್ ಜತೆ ಒಡನಾಟ ಹೊಂದಿದ್ದರು. ಈ ಮಧ್ಯೆ ಸಲ್ಮಾ, ಬೇರೊಬ್ಬ ವ್ಯಕ್ತಿಯೊಂದಿಗೆ ಹೆಚ್ಚು ಸಲುಗೆ ಬೆಳೆಸಿಕೊಂಡಿದ್ದರು. ಈ ವಿಚಾರ ತಿಳಿದು ಕೋಪಗೊಂಡಿದ್ದ ಆರೋಪಿಗಳು ಅವರನ್ನು ಕೊಲೆ ಮಾಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಶುಕ್ರವಾರ ರಾತ್ರಿ ಸುಬ್ರಮಣಿ, ಸಲ್ಮಾಗೆ ಕರೆ ಮಾಡಿ ತನ್ನ ಮನೆಗೆ ಕರೆಸಿಕೊಂಡಿದ್ದ. ಅಲ್ಲಿಗೆ ಸೆಂಥಿಲ್ ಸಹ ಬಂದಿದ್ದು, ಮೂವರೂ ಒಟ್ಟಿಗೆ ಕುಳಿತು ಮದ್ಯ ಸೇವಿಸಿದ್ದಾರೆ. ಈ ನಡುವೆ ಆರೋಪಿಗಳು ಸಲ್ಮಾ ಜತೆ ಜಗಳವಾಡಿ, ಬಲವಾದ ಆಯುಧದಿಂದ ಆಕೆಯ ತಲೆಗೆ ಹೊಡೆದಿದ್ದಾರೆ. ಅವರು ತೀವ್ರ ರಕ್ತಸ್ರಾವವಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದರು ಎಂದು ಪೊಲೀಸರು ತಿಳಿಸಿದರು.

ಕೊಲೆ ಬಳಿಕ ಮೃತದೇಹವನ್ನು ಬಿಳಿ ಬಟ್ಟೆಯಲ್ಲಿ ಸುತ್ತಿಕೊಂಡು, ಆಟೊದಲ್ಲಿ ತಂದು, ತಿಲಕ್‌ನಗರದ ಠಾಣೆಯಿಂದ ಸುಮಾರು 300 ಮೀಟರ್ ದೂರದಲ್ಲಿರುವ ಕರಿಮಾರಮ್ಮ ದೇವಾಲಯ ಬಳಿ ನಿಲ್ಲಿಸಿದ್ದ ಆಟೊದಲ್ಲಿ ಬಿಟ್ಟು ಹೋಗಿದ್ದರು. ಮೃತದೇಹ ಕಂಡು ಸ್ಥಳೀಯರು ಸಲ್ಮಾ ಅವರ ತಾಯಿಗೆ ಹಾಗೂ ಪೊಲೀಸರಿಗೆ ಮಾಹಿತಿ ನೀಡಿದರು.

ವಿಚಾರಣೆ ವೇಳೆ ಸಲ್ಮಾ ತಾಯಿ ಪರ್ವೀನ್ ತಾಜ್ ಅವರು ಸುಬ್ರಮಣಿ ಮತ್ತು ಸೆಂಥಿಲ್‌ನ ಮೇಲೆ ಶಂಕೆ ವ್ಯಕ್ತಪಡಿಸಿದ್ದರು. ಇದರ ಜಾಡು ಹಿಡಿದು ಶವ ಸಿಕ್ಕಿದ್ದ ಸ್ಥಳದ ಸುತ್ತಮುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿ ಆಧರಿಸಿ, ಕೊಲೆ ಆರೋಪಿಗಳನ್ನು ಗುರುತಿಸಿ ಬಂಧಿಸಲಾಯಿತು.

ಬಂಧಿತರು ಪೇಂಟಿಂಗ್, ಗಾರೆ, ಗ್ಯಾರೇಜ್ ಕೆಲಸ ಮಾಡುತ್ತಿದ್ದರು. ಅಲ್ಲದೆ, ಆಟೊ ಓಡಿಸುತ್ತಿದ್ದರು. ಕೊಲೆಯಾದ ಮಹಿಳೆ ಆರೋಪಿಗಳ ಜತೆ ಸಲುಗೆಯಿಂದ ಇದ್ದರು. ಆಕೆಯ ತಲೆಗೆ ಹೊಡೆದು ಕೊಲೆ ಮಾಡಿರುವುದಾಗಿ ಆರೋಪಿಗಳು ವಿಚಾರಣೆ ವೇಳೆ ತಿಳಿಸಿದ್ದಾರೆ ಎಂದು ಪೊಲೀಸರು ಹೇಳಿದರು.

ವಿದ್ಯುತ್ ಕ್ಷೇತ್ರದ ಖಾಸಗೀಕರಣ ನಿಲ್ಲಿಸಿ: ಎಐಇಸಿಎ

ಬೆಂಗಳೂರು: ವಿದ್ಯುತ್ ಕ್ಷೇತ್ರದ ಖಾಸಗೀಕರಣ ಹಾಗೂ ಸ್ಮಾರ್ಟ್ ಮೀಟರ್ ಅಳವಡಿಕೆಯನ್ನು ನಿಲ್ಲಿಸುವಂತೆ ದಕ್ಷಿಣ ಭಾರತ ವಿದ್ಯುತ್ ಗ್ರಾಹಕರ ಸಮಾವೇಶದಲ್ಲಿ ಆಗ್ರಹಿಸಲಾಯಿತು.

ನಗರದಲ್ಲಿ ಭಾನುವಾರ ಅಖಿಲ ಭಾರತ ವಿದ್ಯುತ್ ಬಳಕೆದಾರರ ಸಂಘ (ಎಐಇಸಿಎ) ಆಯೋಜಿಸಿದ್ದ ಸಮಾವೇಶದಲ್ಲಿ ಟೈಮ್ ಆಫ್ ಡೇ ಸುಂಕವನ್ನು ಕೈ ಬಿಡಬೇಕು ಹಾಗೂ ರಾಜ್ಯದಲ್ಲಿ ಪ್ರತಿ ಯೂನಿಟ್‌ಗೆ 36 ಪೈಸೆ ಮೇಲು ತೆರಿಗೆ ಮತ್ತು ಸ್ಥಿರ ದರ ಏರಿಕೆ ವಾಪಸ್ ಪಡೆಯುವುದು ಸೇರಿ ನಾಲ್ಕು ನಿರ್ಣಯ ಕೈಗೊಳ್ಳಲಾಯಿತು.

ಎಐಇಸಿಎ ಅಧ್ಯಕ್ಷ ಸ್ವಪನ್ ಘೋಷ್ ಮಾತನಾಡಿ, 'ವಿದ್ಯುತ್ ಕ್ಷೇತ್ರವು ಈಗ ಸಂಪೂರ್ಣ ಖಾಸಗೀಕರಣವಾಗುತ್ತಿದೆ. ಈ ಜನವಿರೋಧಿ ನೀತಿಯ ವಿರುದ್ಧ ದೇಶದಾದ್ಯಂತ ಬಳಕೆದಾರರ ಚಳುವಳಿ ಪ್ರಾರಂಭಿಸಬೇಕು' ಎಂದರು.

ಸಾಮಾಜಿಕ ಹೋರಾಟಗಾರ ಎಂ.ಜಿ.ದೇವಸಹಾಯಂ ಹಾಗೂ ಎಐಇಸಿಎ ಸಲಹೆಗಾರ ಎಸ್. ಗಾಂಧಿ ಮಾತನಾಡಿದರು. ಜೆಪಿಎಸ್ ರಾಜ್ಯ ಉಪಾಧ್ಯಕ್ಷ ಬಿ. ದಿಲೀಪನ್, ಎಐಇಸಿಎ ಉಪಾಧ್ಯಕ್ಷ ಕೆ.ಸೋಮಶೇಖರ್, ಖಜಾಂಚಿ ಅಜಯ್ ಚಟರ್ಜಿ, ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಭಟ್, ಎಐಕೆಕೆಎಂಎಸ್ ಮುಖಂಡರಾದ ದೀಪಾ ಹಾಜರಿದ್ದರು.

ಅನಾರೋಗ್ಯ: ಅರ್ಚಕ ಆತ್ಮಹತ್ಯೆ

ಬೆಂಗಳೂರು: ಅನಾರೋಗ್ಯದಿಂದ ಬಳಲುತ್ತಿದ್ದ ನೆಲಮಂಗಲದ ಮುನೇಶ್ವರ ದೇವಸ್ಥಾನದ ಅರ್ಚಕ ಅಶ್ವತ್ಥ್ ನಾರಾಯಣ (54) ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಖಾಸಗಿ ಕಾರ್ಖಾನೆಯಲ್ಲಿ ಕೆಲಸ ಮಾಡುವುದರ ಜತೆಗೆ ದೇವಸ್ಥಾನದಲ್ಲಿ ಅರ್ಚಕರಾಗಿಯೂ ಸೇವೆ ಸಲ್ಲಿಸುತ್ತಿದ್ದರು. ಆತ್ಮಹತ್ಯೆಗೂ ಮುನ್ನ ಮರಣಪತ್ರ ಬರೆದಿಟ್ಟಿದ್ದಾರೆ.

ನೆಲಮಂಗಲ ಗ್ರಾಮೀಣ ಪೊಲೀಸ್ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪ್ರೀತಿಸುವಂತೆ ದುಂಬಾಲು: ಎಫ್‌ಐಆರ್

ಪ್ರೀತಿಸುವಂತೆ ವಸ್ತ್ರ ವಿನ್ಯಾಸಕಿಯನ್ನು ಪೀಡಿಸಿ, ಜೀವ ಬೆದರಿಕೆ ಹಾಕಿದ ಆರೋಪದ ಮೇಲೆ ತಮಿಳುನಾಡಿನ ಇವಿಪಿ ಫಿಲ್ಮ್ ಸಿಟಿ ಮಾಲೀಕನ ವಿರುದ್ಧ ವೈಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸದಾಶಿವನಗರ ನಿವಾಸಿ 42 ವರ್ಷದ ಸಂತ್ರಸ್ತೆ ದೂರಿನ ಮೇರೆಗೆ ಸಂತೋಷ್ ರೆಡ್ಡಿ ವಿರುದ್ಧ ಲೈಂಗಿಕ ಕಿರುಕುಳ, ಹಲ್ಲೆ, ಅಪರಾಧ ಸಂಚು, ಬೆದರಿಕೆ ಆರೋಪದಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ದೂರುದಾರ ವಸ್ತ್ರ ವಿನ್ಯಾಸಕಿಯು ವಿವಾಹಿತರಾಗಿದ್ದು, ಹಲವು ವರ್ಷಗಳಿಂದ ಸದಾಶಿವನಗರದ ಸ್ಯಾಂಕಿ ಮುಖ್ಯರಸ್ತೆಯ ಅಪಾರ್ಟ್‌ಮೆಂಟ್‌ನಲ್ಲಿ ವಾಸವಾಗಿದ್ದಾರೆ. ಅವರ ಪತಿ ಉತ್ತರ ಭಾರತದಲ್ಲಿದ್ದಾರೆ. 2023ರಲ್ಲಿ ಸಂತೋಷ್ ರೆಡ್ಡಿಯ ಮಗಳು ಭಾವನ್ಯಾ ರೆಡ್ಡಿ ಅವರು ವಸ್ತ್ರ ವಿನ್ಯಾಸಕಿಯನ್ನು ಸಂಪರ್ಕಿಸಿ, ತಮ್ಮ ಸಂಬಂಧಿಕರ ಮದುವೆಗೆ ವಸ್ತ್ರ ವಿನ್ಯಾಸ ಮಾಡಿಕೊಡುವಂತೆ ಕೇಳಿದ್ದರು. ಅದರಂತೆ ವಸ್ತ್ರ ವಿನ್ಯಾಸ ಮಾಡಿಕೊಟ್ಟಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ನಂತರ ಸಂತೋಷ್ ರೆಡ್ಡಿ ತಮ್ಮ ಮಗಳ ಮೂಲಕ ವಸ್ತ್ರ ವಿನ್ಯಾಸಕಿಯನ್ನು ಪರಿಚಯಿಸಿಕೊಂಡು, ಕಂಪನಿಯಲ್ಲಿ ಬಂಡವಾಳ ಹೂಡಿಕೆಗೆ ಆಸಕ್ತಿ ತೋರಿದ್ದರು. ಆದರೆ, ವಸ್ತ್ರ ವಿನ್ಯಾಸಕಿ ಅದಕ್ಕೆ ಒಪ್ಪಿರಲಿಲ್ಲ ಎಂದು ಹೇಳಿದರು.

'ಕೆಲ ತಿಂಗಳುಗಳ ಹಿಂದೆ ನನಗೆ ಕರೆ ಮಾಡಿದ್ದ ಸಂತೋಷ್ ರೆಡ್ಡಿ, ತಮ್ಮ ಮಗಳಿಗೆ ಮದುವೆ ಮಾಡಲು ನಿರ್ಧರಿಸಿರುವುದಾಗಿ ಹೇಳಿ ವರ ನೋಡುವಂತೆ ಕೋರಿದ್ದರು. ಕೆಲ ದಿನಗಳ ಬಳಿಕ ಕರೆ ಮಾಡಿ, ಮಗಳು ಹಣದೊಂದಿಗೆ ಮನೆ ಬಿಟ್ಟು ಹೋಗಿದ್ದಾಳೆ ಎಂದು ಅಲವತ್ತುಕೊಂಡಿದ್ದರು. ಆಗ ನಾನು ಸಮಾಧಾನ ಮಾಡಿದ್ದೆ' ಎಂದು ವಸ್ತ್ರ ವಿನ್ಯಾಸಕಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಜುಲೈ 14ರಂದು ಸಂತೋಷ್ ರೆಡ್ಡಿ ನಮ್ಮ ಮನೆಗೆ ಬಂದು, 'ನಿಮ್ಮನ್ನು ಪ್ರೀತಿಸುತ್ತಿದ್ದೇನೆ. ಪ್ರೀತಿ ಒಪ್ಪಿಕೊಳ್ಳಿ' ಎಂದಿದ್ದರು. ಅದನ್ನು ನಿರಾಕರಿಸಿದಾಗ, ನನ್ನನ್ನು ಎಳೆದಾಡಿ ಅಸಭ್ಯವಾಗಿ ವರ್ತಿಸಿದ್ದರು. ಬಲ ಕೆನ್ನೆಗೆ ಮುಷ್ಟಿಯಿಂದ ಹೊಡೆದು, ಕೊಲೆ ಮಾಡುವುದಾಗಿ ಬೆದರಿಸಿದ್ದರು. ನನ್ನ ಮಕ್ಕಳನ್ನೂ ಸಾಯಿಸುತ್ತೇನೆ ಎಂದು ವಾಟ್ಸ್‌ಆ್ಯಪ್ ಸಂದೇಶ ಕಳುಹಿಸಿದ್ದಾರೆ' ಎಂದು ಆರೋಪಿಸಿದ್ದಾರೆ. ವಿಚಾರಣೆಗೆ ಬರುವಂತೆ ಸಂತೋಷ್ ರೆಡ್ಡಿಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಉರುಳಿದ ಕಂಟೇನರ್: ಇಬ್ಬರ ಸಾವು

ಆನೇಕಲ್: ಉರುಗನದೊಡ್ಡಿ ಸಮೀಪ ಭಾನುವಾರ ಕಂಟೇನರ್ ಲಾರಿ ಕಂದಕಕ್ಕೆ ಉರುಳಿ ಬಿದ್ದು ಚಾಲಕ ಸೇರಿ ಇಬ್ಬರು ಮೃತಪಟ್ಟಿದ್ದು, ನಾಲ್ವರು ಕಾರ್ಮಿಕರು ಗಾಯಗೊಂಡಿದ್ದಾರೆ. ಆಂಧ್ರಪ್ರದೇಶದ ಚಾಲಕ ಶ್ರೀನಿವಾಸ್ (26), ಲಾರಿ ಕ್ಲೀನರ್ ಜಾರ್ಖಂಡ್‌ನ ಶ್ರೀಮಾನ್ (25) ಮೃತರು.

ಬೊಮ್ಮಸಂದ್ರದಿಂದ ಹಾರೋಹಳ್ಳಿಗೆ ತೆರಳುತ್ತಿದ್ದ ಕಂಟೇನರ್ ಇಳಿಜಾರು ರಸ್ತೆಯಿಂದ ಕಂದಕಕ್ಕೆ ಉರುಳಿತು. ಗಾಯಗೊಂಡಿದ್ದ ನಾಲ್ವರು ಕಾರ್ಮಿಕರನ್ನು ಜಿಗಣಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

SBI
ಆವರಣ ಮತ್ತು ಸ್ಥಿರಾಸ್ತಿ ವಿಭಾಗ, ಸ್ಥಳೀಯ ಪ್ರಧಾನ ಕಚೇರಿ
#65, ಸಂತ ಮಾರ್ಕ್ಸ ರಸ್ತೆ, ಬೆಂಗಳೂರು – 560 001.
ದೂರವಾಣಿ ಸಂಖ್ಯೆ: 080–25943867

ಭಾರತೀಯ ಸ್ಟೇಟ್ ಬ್ಯಾಂಕ್ ತನ್ನ ವಿವಿಧ ಯೋಜನೆಗಳಿಗೆ ವಾಸ್ತುಶಿಲ್ಪ ಸಲಹಾ ಸಂಸ್ಥೆಗಳ ಅಂಗೀಕೃತ ಪಟ್ಟಿಗೆ ಸೇರಿಸಲು / ಪೂರ್ವ–ಅರ್ಹತೆಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಹತಾ ಮಾನದಂಡಗಳು, ನೀಡಲಾಗುವ ಸೇವೆಗಳ ವ್ಯಾಪ್ತಿ, ಆಯ್ಕೆಯ ನಿಯಮಗಳು ಮತ್ತು ಷರತ್ತುಗಳು, ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕ ಮತ್ತು ಈ ಉದ್ದೇಶಕ್ಕಾಗಿ ಅರ್ಜಿಯನ್ನು ಸಲ್ಲಿಸಲು ವಿವರವಾದ ಮಾದರಿ ಅರ್ಜಿ (Proforma) ಯನ್ನು ನಮ್ಮ ವೆಬ್‌ಸೈಟ್ <bank.sbi> ನಿಂದ 'SBI in the News => 'Procurement News' ಅಡಿಯಲ್ಲಿ ಡೌನ್‌ಲೋಡ್ ಮಾಡಬಹುದು.

ಬೆಂಗಳೂರು
ದಿನಾಂಕ: 27.10.2025
ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಸ್ಥಿ)

ಬೆಂಗಳೂರನಲ್ಲಿ ಕಾರ್ತಿಕ ಮಾಸ ನಿಮಿತ್ತ ರುದ್ರಾಕ್ಷಿ ಪ್ರದರ್ಶನ ಹಾಗೂ ಮಾರಾಟ

ಅಕ್ಟೋಬರ್ 22 ರಿಂದ 27 ರವರೆಗೆ ಆಯೋಜನೆ

ಬೆಂಗಳೂರು: ನಗರದ **ಹೊಟೇಲ್** Hotel Le Foliage, Beside Sangeeta Gadgets, **ಸಂಗಮ ಸರ್ಕಲ್ ಬಸ್ ಸ್ಟಾಪ್ ಹತ್ತಿರ**, Opp. Metro Pillar EP-No.9, **ಎದುರಿಗೆ, 46 ನೇ ಕ್ರಾಸ್ 8 ಬ್ಲಾಕ್, ಸಿಆರ್ ಲೇಔಟ್, 1ನೇ ಹಂತ, ಜೆ.ಪಿ. ನಗರ, ಬೆಂಗಳೂರು, ಆಗಸ್ಟ್ 22 ರಿಂದ 27** ರವರೆಗೆ ರುದ್ರಾಕ್ಷಿ ಪ್ರದರ್ಶನ ಮಾರಾಟ, **ಒಂದು ಮುಖಿ ಯಿಂದ 21 ಮುಖಿ ರುದ್ರಾಕ್ಷಗಳು ಲಭ್ಯವಿವೆ.** ಇಂಡಸ್-ನೇಪಾಳ ಸಂಸ್ಥೆಯ **ನಿರ್ದೇಶಕ ಡಾ. ನರೇಂದ್ರ ಕಾಶಿರೆಡ್ಡಿ** ಯಾವ ರುದ್ರಾಕ್ಷಿಯನ್ನು ಯಾವಾಗ ಹಾಗೂ ಯಾರು ಧರಿಸಬೇಕು ಎಂಬುದರ ಬಗ್ಗೆ ಯಾವುದೇ ಪಂಚಾಂಗ ಮತ್ತು ಕಂಪ್ಯೂಟರ್ ಸಹಾಯವಿಲ್ಲದೆ, ವೇದ ಗಣಿತದ ಮೂಲಕ ಜನ್ಮ ರಾಶಿ, ಜನ್ಮ ನಕ್ಷತ್ರದ ಆಧಾರದ ಮೇಲೆ ತಿಳಿಸಲಾಗುವುದು. ಮಾಂಸಹಾರಿಗಳು ಸಹ ರುದ್ರಾಕ್ಷಿಗಳನ್ನು ಧರಿಸಬಹುದು. ಮಳಿಗೆಯು **ಬೆಳಗ್ಗೆ 10.30 ರಿಂದ ರಾತ್ರಿ 09.00** ರವರೆಗೆ ತೆರದಿ ರುತ್ತದೆ. **ಸಂಪರ್ಕಿಸಿ: ಡಾ. ನರೇಂದ್ರ ಕಾಶಿರೆಡ್ಡಿ 7097396666**

ಇಂದು ಕೊನೆಯ ದಿನ

ADVT


ದೊಡ್ಡ & ಅಗಲವಾದ ಅಲಾಯ್ ವ್ಹೀಲ್ಸ್


ಪ್ರೀಮಿಯಂ ಕ್ರೋಮ್ ಆಕ್ಸೆಂಟ್ಸ್

ಉದ್ದದ ಪ್ಲಶ್ ಸೀಟ್ 785mm

ಬೆಸ್ಟ್-ಇನ್ ಕ್ಲಾಸ್ ಮೈಲೇಜ್#

ಸೆಗ್ಮೆಂಟ್‌ನಲ್ಲಿ ಮೊದಲ ಆಟೋ ಕ್ಯಾನ್ಸಲ್ ವಿಂಕರ್ಸ್

ಪ್ರತಿ ದಿನ EMI ₹75$ ರಿಂದ ಪ್ರಾರಂಭ | ಡೌನ್ ಪೇಮೆಂಟ್ ₹1999$ ರಿಂದ ಪ್ರಾರಂಭ | ಕಾರ್ಪೊರೇಟ್ ಆಫರ್‌ಗಳು/ ರೈತರಿಗಾಗಿ ಕೊಡುಗೆ ₹3 200*^ ವರೆಗೆ | ಇನ್‌ಸ್ಟಂಟ್ ಡಿಸ್ಕೌಂಟ್ ₹10 000$ ವರೆಗೆ HDFC BANK FESTIVE TREATS ಕ್ರೆಡಿಟ್ ಕಾರ್ಡ್ Powered by pine labs

INDIA'S FIRST 5 YEAR WARRANTY* *Conditions apply

Hero GoodLife 100% ಕ್ಯಾಶ್‌ಬ್ಯಾಕ್ | 24 ಕ್ಯಾರಟ್ ಗೋಲ್ಡ್ ಕಾಯಿನ್ ಗೆಲ್ಲುವ ಅವಕಾಶ ಮತ್ತು ಇನ್ನೂ ಹಲವು ಖಚಿತ ಬೆನಿಫಿಟ್ಸ್ ಪಡೆಯಿರಿ#

Additional Offers on Flipkart amazon.in

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. I CIN: L35911DL1984PLC017354 I For further information, contact your nearest Hero MotoCorp authorised outlet or visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. $Finance offer is at the sole discretion of the Financier, subject to its respective T&Cs. Available at select dealerships. #Based on the testing report of govt. Certified agency. Actual mileage may vary as per riding conditions. As per cumulative dispatch numbers till August 2025. *T&C apply. ^Offer subject to approval of valid documents. ##Ex-showroom price of Destini 125 in Karnataka and may change without any prior notice.

TOLL FREE 1800 266 0018

Authorised Dealers: Bengaluru Hosur Road: RT Krishna Hero, Ph: 9289923177, Lalbagh Road: Prakash Hero, Ph: 9289922117, Byatarayanapura: Bimal Hero, Ph: 9289922863, Peenya: Sai Hero, Ph: 9289922830, Hosur Road: Rt Krishna Hero, Ph: 9289923177, Banashankari: Sai Hero, Ph: 9289922476, Banaswadi: Bhagath Hero, Ph: 9289922738, Magadi Road: Poorna Hero, Ph: 9289923212, Marathalli: Vaayuratha Hero, Ph: 9289923811, Rajaji Nagar: Max Hero, Ph: 9289923023, Kolar: Sai Balaji Hero, Ph: 9821745024, Chikkaballapur: Manjunath Hero, Ph: 9821751332, Tumkur: Sai Hero, Ph: 9289922986, B,h,road: Sai Hero, Ph, 7022752841, Kamakshipalya: Poorna Motors, Ph: 9606922534, Jp Nagar: Sai Hero, Ph: 99002 36280, Kanakpura Road: Sai Hero, Ph: 8904677394, Hoskote: Bhagath Hero, Ph: 8884600051, K R Puram: Bhagath Hero, Ph: 7829488706, Jigani: RT Krishna Hero, Ph: 8762860999, Rt Nagar: Bimal Hero, Ph: 9535327710, Tiptur: Sai Hero, Ph, 9164840456, Kunigal: Sai Hero, Ph: 7022752858, Doddaballapura: Bimal Hero, Ph: 9742202125, Associate Dealer: Belathur: Ph: 9902649569, Madiwala: Ph: 9731660639, Banashankari 3rd Stage: Ph: 9513353864, Bannerghatta Road: Ph: 41209619, Kengeri: Ph: 9739275523, Yelahanka: Ph: 28462524/9341025589, Mysore Road: Ph: 9611997733, Devanahalli: Ph: 9964560599, Kanakapura: Ph: 9880212346, Whitefield: Ph: 9741646466, Bagepalli: Ph: 282828, Srinivaspur: Ph: 9738504002, Sidlaghatt: Ph: 254827, Nelamangala: Ph: 27723395, Pavagada: Ph: 9740324639, Madhugiri: Ph: 9972278989, Vijayapura: Ph: 9449619920, Sira: Ph: 9448417393, Chandapura: 9481329064, Vidyaranyapura: Ph: 9606934533, Magadi: Ph: 9482090890, Gottigere: Ph: 81976 78979, Also Available At: Dunnasandra: Ph: 8310166369, HSR Layout: Ph: 7428893265, Mathikere: 9035027951, Domlur: Ph: 7353919910, J,P,Nagar: Ph: 9035024274, RT Nagar: Ph: 9535327710, Attibele: Ph: 8050609104, B Narayanapura: Ph: 9945472149, Varthur: Ph: 9900877227, Papareddypalya: Ph: 9916678309, Anekal: Ph: 9739519252, Konankunte: Ph: 9886122251, Sarjapur Main Road: Ph: 8762860999, Bidadi: Ph: 9844767719, Ramanagara: Ph: 9663399909, Jigani: Ph: 9986498884, Chikkanayakanahalli: Ph: 9880807399, Turuvekere: Ph: 9448403205, Koratagere: Ph: 9731713711, Peresandra: Ph: 9901502049, For Bulk Deals/Corporate Purchase, "Bangalore@Heromotocorp.com" & "Kiran.kumart@Heromotocorp.com" For Buy/Sell/Exchange Old Any Vehicle Contact VV Puram, Bengaluru, Olety Sai Hero Sure: Ph: 98450 74491.

RS/Hero/10/25

‘ಸಾರಂಗಪಾಣಿ ಗಣಿಗಾರಿಕೆ ಪ್ರಸ್ತಾವ ತಿರಸ್ಕಾರ’

ಹದಿನೇಳು ಸಾವಿರ ಮರ ಹನನ ತಪ್ಪಿಸಿದ ಕೇಂದ್ರ • ರಾಜ್ಯ ಸರ್ಕಾರಕ್ಕೆ ಮುಖಭಂಗ

• ಯತೀಶ್ ಕುಮಾರ್ ಜಿ.ಡಿ

ಬೆಂಗಳೂರು: ತುಮಕೂರು ಜಿಲ್ಲೆಯ ವಿವಾದಿತ ಸಾರಂಗಪಾಣಿ ಗಣಿಗಾರಿಕೆ ಪ್ರಸ್ತಾವವನ್ನು ತಿರಸ್ಕರಿಸಲು ಕೇಂದ್ರ ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಸಚಿವಾಲಯವು ಶಿಫಾರಸು ಮಾಡಿದ್ದು, ಇದರಿಂದ ಗಣಿಗಾರಿಕೆಗೆ ಅನುಮತಿ ನೀಡಲು ನಿರಂತರ ಪ್ರಯತ್ನ ಮಾಡಿದ್ದ ರಾಜ್ಯ ಸರ್ಕಾರಕ್ಕೆ ಮುಖಭಂಗ ಆಗಿದೆ.

ಗಣಿಗಾರಿಕೆಗೆ ಅನುಮತಿ ನೀಡುವುದು ವಿನಾಶಕಾರಿ ಆಗಲಿದ್ದು ಅಲ್ಲಿನ ಜನಜೀವನ ಹಾಗೂ ಜೀವ ಪರಿಸರದ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ಸಚಿವಾಲಯ ಎಚ್ಚರಿಕೆ ನೀಡಿದೆ. ಯೋಜನೆಯ ತಿರಸ್ಕಾರದಿಂದ ಹದಿನೇಳು ಸಾವಿರಕ್ಕೂ ಹೆಚ್ಚು ಮರಗಳು ನಾಶವಾಗುವುದು ಹಾಗೂ ಮಾನವ- ವನ್ಯಜೀವಿ ಸಂಘರ್ಷ ಹೆಚ್ಚಾಗುವುದು ತಪ್ಪಿದೆ.

ಪ್ರಸ್ತಾಪಿತ ಪ್ರದೇಶವು ಬುಕ್ಕಾಪಟ್ಟಣ ಚಿಂಕಾರಾ ಅಭಯಾರಣ್ಯದ ಪರಿಭಾವಿತ ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಯಲ್ಲಿದ್ದು, ಸಚಿವಾಲಯದ ಪ್ರಾದೇಶಿಕ ಕಚೇರಿಗೆ ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ್ ಕುಲಕರ್ಣಿ ಸಲ್ಲಿಸಿದ ಆಕ್ಷೇಪಣೆಗಳನ್ನು ತನ್ನ ಪರಿಶೀಲನಾ ವರದಿಯಲ್ಲಿ ಔಪಚಾರಿಕವಾಗಿ ಒಪ್ಪಿಕೊಂಡಿದೆ.

ಮಿನರಲ್ ಎಂಟರ್‌ಪ್ರೈಸಸ್ ಪ್ರೈವೆಟ್ ಲಿಮಿಟೆಡ್ ಎಂಬ ಕಂಪನಿಯು ಸಾರಂಗಪಾಣಿ ಮ್ಯಾಂಗನೀಸ್ ಮತ್ತು ಕಬ್ಬಿಣದ ಅದಿರು ಗಣಿಗಾರಿಕೆ ಯೋಜನೆಗಾಗಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಗೊಲ್ಲರಹಳ್ಳಿ, ಲಕ್ಮೇನಹಳ್ಳಿ, ಕೋಡಿಹಳ್ಳಿ, ಹೊಸಹಳ್ಳಿ, ತೋನಲಾಪುರ ಗ್ರಾಮಗಳಲ್ಲಿ ಅಂದಾಜು 48 ಹೆಕ್ಟೇರ್ ಅರಣ್ಯ ಭೂಮಿ ಪರಿವರ್ತನೆ ಕೋರಿ ಅರಣ್ಯ ಇಲಾಖೆಗೆ ಪ್ರಸ್ತಾವ ಸಲ್ಲಿಸಿತ್ತು. ಇದರ ಪರವಾಗಿ ಸ್ಥಳೀಯ ಡಿಸಿಎಫ್ ಮತ್ತು ಹಾಸನ ವೃತ್ತದ ಸಿಸಿಎಫ್ ಶಿಫಾರಸು ಮಾಡಿದ್ದರು.

ಉದ್ದೇಶಿತ ಗಣಿ ಯೋಜನೆಯಿಂದ ಮಾನವ- ವನ್ಯಜೀವಿ ಸಂಘರ್ಷ ಹೆಚ್ಚಲಿದೆ, ಸ್ಥಳೀಯ ಜನಜೀವನದ ಮೇಲೆ ಪರಿಣಾಮ ಬೀರಲಿದ್ದು ಪ್ರಸ್ತಾವ-ವನ್ನು ತಿರಸ್ಕರಿಸಲು ಕ್ರಮ ವಹಿಸುವಂತೆ ಗಿರಿಧರ್ ಅವರು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರಿಗೆ ಕಳೆದ ವರ್ಷ ಡಿಸೆಂಬರ್‌ನಲ್ಲಿ ಪತ್ರ ಬರೆದು ಮನವಿ ಮಾಡಿದ್ದರು. ಈ ಗಣಿಗಾರಿಕೆಯ ಬೆಳವಣಿಗೆ ಬಗ್ಗೆ ‘ಪ್ರಜಾವಾಣಿ’ ಸಹ ವರದಿ ಮಾಡಿತ್ತು.

ಇಷ್ಟೆಲ್ಲಾ ವಿರೋಧಗಳ ಮಧ್ಯೆಯೂ ಅರಣ್ಯ ಪಡೆಯ ಮುಖ್ಯಸ್ಥರು ಇದೇ ವರ್ಷ ಮೇ 14 ರಂದು ಪ್ರಸ್ತಾವಕ್ಕೆ ಕೇಂದ್ರ ಸರ್ಕಾರದ ಮೊದಲನೇ ಹಂತದ ಅನುಮತಿ ಪಡೆಯಲು ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಶಿಫಾರಸು ಮಾಡಿದ್ದರು. ಪರಿಸರವಾದಿಗಳ ವಿರೋಧದ ನಡುವೆಯೂ ಗಣಿಗಾರಿಕೆಗೆ ಮೊದಲನೇ ಹಂತದ ಅನುಮತಿ ನೀಡುವಂತೆ ರಾಜ್ಯ ಸರ್ಕಾರವು ಕೇಂದ್ರ ಪರಿಸರ ಹಾಗೂ ಅರಣ್ಯ ಸಚಿವಾಲಯಕ್ಕೆ ಇದೇ ವರ್ಷ ಆಗಸ್ಟ್ ತಿಂಗಳಿನಲ್ಲಿ ಮನವಿ ಮಾಡಿತ್ತು.

ಇದೇ ವರ್ಷದ ಸೆಪ್ಟೆಂಬರ್ 23ರಂದು ಸ್ಥಳ ಪರಿಶೀಲನೆಯ ನಂತರ, ಬೆಂಗಳೂರಿನ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಪ್ರಾದೇಶಿಕ ಕಚೇರಿಯ ಡಿಐಜಿ ಪ್ರಣೀತಾ ಪೌಲ್ ಪ್ರಸ್ತಾವವನ್ನು ತಿರಸ್ಕರಿಸಲು ಸಚಿವಾಲಯದ ನವದೆಹಲಿಯ ಕೇಂದ್ರ ಕಚೇರಿಗೆ ಶಿಫಾರಸು ಮಾಡಿದ್ದಾರೆ.

ತಪಾಸಣಾ ವರದಿಯು ಹಲವಾರು ಲೋಪಗಳನ್ನು ದಾಖಲಿಸಿದೆ. ಅಮಾನ್ಯ ಪರಿಸರ ಅನುಮತಿ, ಅರಣ್ಯ ಭೂಮಿಯ ಕಾನೂನು ಸ್ಥಿತಿಯಲ್ಲಿನ ಅಸ್ಪಷ್ಟತೆ, ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಅನುಮೋದನೆ ಇಲ್ಲದಿರುವುದು ಮತ್ತು ಬುಕ್ಕಾಪಟ್ಟಣ ಅಭಯಾರಣ್ಯದ ಪರಿಭಾವಿತ ಪರಿಸರ-ಸೂಕ್ಷ್ಮ ವಲಯದಲ್ಲಿ ವಾಣಿಜ್ಯ ಗಣಿಗಾರಿಕೆಯು ನಿಷೇಧಿತ ಚಟುವಟಿಕೆಯಾಗಿದೆ ಎಂಬ ಅಂಶವನ್ನು ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

ಪ್ರಸ್ತಾವವನ್ನು ತಿರಸ್ಕರಿಸಲು ಶಿಫಾರಸು ಮಾಡಿದ್ದಕ್ಕಾಗಿ ಕೇಂದ್ರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯಕ್ಕೆ ಧನ್ಯವಾದ. ಇದು ತುಮಕೂರು ಜಿಲ್ಲೆಯ ಜನರಿಗೆ ಸಿಕ್ಕ ಜಯ

ಗಿರಿಧರ್ ಕುಲಕರ್ಣಿ, ವನ್ಯಜೀವಿ ಸಂರಕ್ಷಣಾವಾದಿ

ಕೇಂದ್ರದ ಪ್ರಮುಖ ಆಕ್ಷೇಪಗಳು

- ಗಣಿಗಾರಿಕೆಗೆ ಪ್ರಸ್ತಾವಿತ ಸ್ಥಳ ನೀರಿನ ಕೊರತೆಯಿರುವ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿದ್ದು, ತೀರ್ಥರಂಪುರ ಮೀಸಲು ಅರಣ್ಯ ಮತ್ತು ಜನ್ನೇರು ಅರಣ್ಯ ಬ್ಲಾಕ್ ಪ್ರಮುಖ ಜಲಾನಯನ ಪ್ರದೇಶಗಳು. ಇಲ್ಲಿ ಅರಣ್ಯ ನಾಶ ನೀರಿನ ಕೊರತೆಯನ್ನು ಇನ್ನಷ್ಟು ಹದಗೆಡಿಸುತ್ತದೆ
- 1999 ರಲ್ಲಿ ಗಣಿಗಾರಿಕೆ ಸ್ಥಗಿತಗೊಂಡ ನಂತರ ಅರಣ್ಯ ಪ್ರದೇಶವು ನೈಸರ್ಗಿಕವಾಗಿ ಮತ್ತೆ ಚಿಗುರುತ್ತಿದೆ
- ವನ್ಯಜೀವಿ ಸಮೀಕ್ಷೆಗಳು ಕರಡಿ, ಚಿರತೆ, ಕತ್ತೆ ಕಿರುಬ, ತೋಳ, ನರಿ, ಕಾಡುಹಂದಿ, ನಾಲ್ಕು ಕೊಂಬಿನ ಹುಲ್ಲೆ ಮತ್ತು ಕಾಡು ಬೆಕ್ಕು ಪ್ರಭೇದಗಳು ಇರುವುದಕ್ಕೆ ಪುರಾವೆ ದೊರಕಿದೆ
- ಮಾನವ-ವನ್ಯಜೀವಿ ಸಂಘರ್ಷ ದಾಖಲೆಗಳು (2015–16 ರಿಂದ 2025–26) ಒಟ್ಟು ₹43,01,720 ಪರಿಹಾರದೊಂದಿಗೆ 380ಕ್ಕೂ ಹೆಚ್ಚು ಘಟನೆಗಳನ್ನು ತೋರಿಸುತ್ತವೆ, ಇದು ಆರೋಗ್ಯಕರ ವನ್ಯಜೀವಿ ಜನಸಂಖ್ಯೆಯನ್ನು ದೃಢಪಡಿಸುತ್ತದೆ. ಇಲ್ಲಿ ಗಣಿಗಾರಿಕೆಗೆ ಅನುಮತಿ ದೊರಕಿದರೆ ಸಂಘರ್ಷ ಹೆಚ್ಚಾಗುತ್ತದೆ
- ಅರಣ್ಯ ಪಡೆಯ ಮುಖ್ಯಸ್ಥರ ಶಿಫಾರಸಿನ ಪ್ರಕಾರ ಕಂಪನಿಯು ಯಾವುದೇ ಮಾನ್ಯ ಗಣಿಗಾರಿಕೆ ಗುತ್ತಿಗೆಯನ್ನು ಹೊಂದಿಲ್ಲ. ಆದ್ದರಿಂದ ಕೇಂದ್ರ ಪರಿಸರ ಹಾಗೂ ಅರಣ್ಯ ಸಚಿವಾಲಯದ 2017ರ ಮಾರ್ಗಸೂಚಿಗಳನ್ವಯ ಹಾಲಿ ಗುತ್ತಿಗೆ ಇಲ್ಲದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ
- ಸಾರಂಗಪಾಣಿ ಪ್ರಸ್ತಾವದ ಜೊತೆಗೆ, ತೀರ್ಥರಂಪುರ ಮೀಸಲು ಅರಣ್ಯ ಮತ್ತು ಜನ್ನೇರು ಅರಣ್ಯ ಬ್ಲಾಕ್ ವ್ಯಾಪ್ತಿಯೊಳಗಿನ 18 ಇತರ ಗಣಿಗಾರಿಕೆ ಗುತ್ತಿಗೆಗಳು ಅರಣ್ಯ ಅನುಮೋದನೆ ಪಡೆಯಲು ಬಾಕಿ ಉಳಿದಿವೆ. ಗಣಿಗಾರಿಕೆ ಯೋಜನೆಯ ಅನುಮೋದನೆಯು ಈ ಪ್ರದೇಶದ ಪರಿಸರ ವಿಜ್ಞಾನ ಮತ್ತು ಈ ಪ್ರದೇಶಗಳಲ್ಲಿರುವ ಹಳ್ಳಿಗಳ ಸಾಮಾಜಿಕ-ಆರ್ಥಿಕತೆಯ ಮೇಲೆ ಹಾನಿಕಾರಕ ಪರಿಣಾಮಗಳನ್ನು ಬೀರುತ್ತದೆ

ಸುದ್ದಿ 2 ನಿಮಿಷ

ಶೇ 15ರಷ್ಟು ಬಿಪಿಎಲ್ ಕಾರ್ಡ್ ರದ್ದು: ಸಚಿವ ಕೆ.ಎಚ್.ಮುನಿಯಪ್ಪ

ಶಿವಮೊಗ್ಗ: ಕೇಂದ್ರದ ನಿಯಮಾವಳಿಯಂತೆ ಆದಾಯ ತೆರಿಗೆ ಪಾವತಿದಾರರು, ಸ್ವಂತ ಕಾರು ಇದ್ದವರ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸಿ, ಅವರಿಗೆ ಎಪಿಎಲ್ ಕಾರ್ಡ್ ನೀಡಲಾಗುವುದು ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಇಲ್ಲಿ ತಿಳಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರದ ನಿಯಮಾವಳಿ ಪ್ರಕಾರ ರಾಜ್ಯದಲ್ಲಿ ಶೇ 15ರಷ್ಟು ಬಿಪಿಎಲ್ ಕಾರ್ಡ್ ರದ್ದಾಗಲಿವೆ. ಆದರೆ ಅರ್ಹರು ಆತಂಕ ಪಡುವುದು ಬೇಡ’ ಎಂದು ತಿಳಿಸಿದರು. ಜಿಲ್ಲೆಯಲ್ಲಿ 6,200 ಕುಟುಂಬಗಳ ಬಿಪಿಎಲ್ ಕಾರ್ಡ್ ಅನರ್ಹಗೊಂಡಿವೆ’ ಎಂದು ಪ್ರಶ್ನೆಯೊಂದಕ್ಕೆ ಅವರು ಪ್ರತಿಕ್ರಿಯಿಸಿದರು.

‘ಪಡಿತರ ವಿತರಕರಿಗೆ ಮೇ ತಿಂಗಳಿಂದ ಕಮಿಷನ್ ಬಾಕಿ ಇದೆ ಎಂಬ ಪ್ರಶ್ನೆಗೆ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲು ಸೇರಿಸಿ ಸೆಪ್ಟೆಂಬರ್‌ವರೆಗಿನ ಕಮಿಷನ್ ಕೊಡಲು ನಿರ್ಧರಿಸಿದೆ. ವಾರದೊಳಗೆ ಎಲ್ಲ ಪಡಿತರ ವಿತರಕರಿಗೆ ಕಮಿಷನ್ ನೀಡಲಿದ್ದೇವೆ’ ಎಂದರು.

ಇನ್ನು ಮುಂದೆ ಎಲ್ಲಾ ಪಡಿತರ ಅಂಗಡಿಗಳಲ್ಲೂ ಆಯಾ ತಿಂಗಳ 10ನೇ ತಾರೀಕು ಪಡಿತರ ನೀಡುವಂತೆ ಕ್ರಮ ವಹಿಸಲಾಗುವುದು. ‘ಒನ್ ನೇಷನ್ ಒನ್ ಕಾರ್ಡ್’ ಯೋಜನೆಯಡಿ ವಲಸಿಗ ಕಾರ್ಮಿಕರಿಗೂ ತಕ್ಷಣ ರೇಷನ್ ಕಾರ್ಡ್ ನೀಡಲಾಗುತ್ತದೆ ಎಂದರು.

ಕನೇರಿ ಶ್ರೀ ನಿರ್ಬಂಧ: 29ಕ್ಕೆ ಸಭೆ

ವಿಜಯಪುರ: ‘ಕನೇರಿ ಶ್ರೀಗಳಿಗೆ ಜಿಲ್ಲಾ ಪ್ರವೇಶ ನಿರ್ಬಂಧ ಖಂಡಿಸಿ ಹೋರಾಟ ರೂಪುರೇಷೆ ಚರ್ಚಿಸಲು ಬೆಳಗಾವಿಯಲ್ಲಿ ಅ.29ರಂದು ಸಭೆ ನಡೆಸಲಾಗುವುದು’ ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಭಾನುವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ರಾಜ್ಯ ಸರ್ಕಾರ ಹಿಂದೂ ಧರ್ಮ, ವೀರಶೈವ, ಲಿಂಗಾಯತ ಸಮಾಜದವರಿಗೆ ತೊಂದರೆ ಕೊಡುತ್ತಿದೆ. ವೀರಶೈವ ಸಮಾಜವನ್ನು ವಿಭಜನೆ ಮಾಡುತ್ತಿದೆ. ಹಿಂದೂ ಧರ್ಮದ ಸಾಧು ಸಂತರನ್ನೂ ಬಿಡುತ್ತಿಲ್ಲ’ ಎಂದು ಆರೋಪಿಸಿದರು.

‘ಸಭೆಗೆ ಬರುವಂತೆ ಕನೇರಿ ಶ್ರೀಗಳಿಗೂ ಮನವಿ ಮಾಡಿದ್ದೇವೆ’ ಎಂದು ತಿಳಿಸಿದರು.

‘ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವರಿಗೆ ಏನೂ ಗೊತ್ತಿಲ್ಲ. ನಿರ್ಬಂಧ ವಾಪಸ್ ಪಡೆಯಲು ಇವರು ಯಾರು? ನಿರ್ಬಂಧ ವಾಪಸ್ ತೆಗೆದುಕೊಳ್ಳಲು ಸಚಿವ ಸಂಪುಟ ಸಂಪೂರ್ಣ ಅಧಿಕಾರ ನೀಡಿದೆ ಎಂದು ಹೇಳಲಿ ನೋಡೋಣ’ ಎಂದರು.

ಚಿಟಿಕೆ ಸುದ್ದಿ

ದ್ವೇಷ ಭಾಷಣ: ಕಲ್ಲಡ್ಕ ಪ್ರಭಾಕರ ಭಟ್ ವಿರುದ್ಧ ಎಫ್‌ಐಆರ್

ಮಂಗಳೂರು: ಧಾರ್ಮಿಕ ದ್ವೇಷ ಪ್ರಚೋದಿಸುವ, ಮಹಿಳೆಯರ ಘನತೆಗೆ ಧಕ್ಕೆ ತರುವಂತೆ ಭಾಷಣ ಮಾಡಿದ ಆರೋಪದ ಮೇಲೆ ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್, ಕಾರ್ಯಕ್ರಮ ಆಯೋಜಕರ ವಿರುದ್ಧ ಪುತ್ತೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಡಾ.ಪ್ರಭಾಕರ ಭಟ್ ಕಲ್ಲಡ್ಕ

ಪುತ್ತೂರಿನ ಉಪ್ಪಳಿಗೆಯಲ್ಲಿ ಈಚೆಗೆ ನಡೆದ ದೀಪೋತ್ಸವ ಕಾರ್ಯಕ್ರಮದಲ್ಲಿ ಅವರು ಪ್ರಚೋದಿತ ಭಾಷಣ ಮಾಡಿದ್ದರು ಎಂದು ಆರೋಪಿಸಿ ಪುತ್ತೂರು ತಾಲ್ಲೂಕಿನ ಈಶ್ವರಿ ಪದ್ಮುಂಜ ಅವರು ಶನಿವಾರ ದೂರು ನೀಡಿದ್ದರು.

‘ಕಲ್ಲಡ್ಕ ಪ್ರಭಾಕರ ಭಟ್ ಅವರ ಭಾಷಣ ಯೂಟ್ಯೂಬ್ ಚಾನೆಲ್‌ನಲ್ಲಿ ಪ್ರಸಾರಗೊಂಡಿದೆ. ಹಿಂದೂ- ಮುಸ್ಲಿಂ ಸಮುದಾಯಗಳ ಬಗ್ಗೆ ಅವಮಾನಕಾರಿ ಹೇಳಿಕೆ ನೀಡಿದ್ದಾರೆ’ ಎಂದು ದೂರಿನಲ್ಲಿ ಆರೋಪಿಸಲಾಗಿತ್ತು.

ಅಕ್ಟೋಬರ್‌ನಲ್ಲೂ ಮತ್ತೆ ಭರ್ತಿಯಾದ ಕಾವೇರಿ ನದಿ ಪಾತ್ರದ ಜಲಾಶಯಗಳು

ತಮಿಳುನಾಡಿಗೆ ಹೆಚ್ಚುವರಿ ನೀರು

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಪ್ರಸಕ್ತ ವರ್ಷ ಉತ್ತಮ ಮಳೆ ಸುರಿದ ಕಾರಣ ಜೂನ್‌ನಿಂದ ಇಲ್ಲಿಯವರೆಗೆ 273 ಟಿಎಂಸಿ ಅಡಿ ನೀರು ತಮಿಳುನಾಡಿಗೆ ಹರಿದು ಹೋಗಿದೆ’ ಎಂದು ಜಲಸಂಪನ್ಮೂಲ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಿಳಿಸಿದ್ದಾರೆ.

‘ಸುಪ್ರೀಂ ಕೋರ್ಟ್ ಆದೇಶದಂತೆ ತಮಿಳುನಾಡಿಗೆ ವರ್ಷಕ್ಕೆ 177.25 ಟಿಎಂಸಿ ಅಡಿ ನೀರು ಹರಿಸಬೇಕು. ಅಂದರೆ ಹೆಚ್ಚುವರಿಯಾಗಿ 96 ಟಿಎಂಸಿ ಅಡಿ ನೀರು ಹರಿಸಲಾಗಿದೆ. ‘ಈ ವರ್ಷ ಕಾವೇರಿ ನದಿ ನೀರು ಹಂಚಿಕೆ ಸಮಸ್ಯೆ ಪ್ರಕೃತಿದತ್ತವಾಗಿ ನಿವಾರಣೆಯಾಗಿದೆ’ ಎಂದಿದ್ದಾರೆ.

‘ಪ್ರಸಕ್ತ ವರ್ಷ ಮೊದಲ ಬಾರಿಗೆ ಜೂನ್ ತಿಂಗಳಲ್ಲೇ ಕೆಆರ್‌ಎಸ್ ಅಣೆಕಟ್ಟು ಭರ್ತಿಯಾಗಿ ಇತಿಹಾಸ ಬರೆದಿದೆ. ಬೆಂಗಳೂರಿಗೆ ವರ್ಷಕ್ಕೆ 31 ಟಿಎಂಸಿ ನೀರು ಕುಡಿಯುವ ನೀರಿಗೆ ಬೇಕಿದೆ. ಅಂದರೆ ಪ್ರತಿ ತಿಂಗಳು ಬೆಂಗಳೂರಿಗೆ 2.60 ಟಿಎಂಸಿ ನೀರಿನ ಅವಶ್ಯವಿದೆ. ಡ್ಯಾಂ ಭರ್ತಿಯಾಗಿರುವುದರಿಂದ ನೀರಿನ ಸಮಸ್ಯೆ ತಲೆದೋರುವುದಿಲ್ಲ’ ಎಂದು ವಿಶ್ವಾಸ ವ್ಯಕ್ತಡಿಸಿದ್ದಾರೆ.

‘ಕಾವೇರಿ ನದಿ ಪಾತ್ರದ ಹಾರಂಗಿ, ಕೆಆರ್‌ಎಸ್, ಕಬಿನಿ, ಹೇಮಾವತಿ ಜಲಾಶಯಗಳು ಅಕ್ಟೋಬರ್‌ನಲ್ಲೂ ಭರ್ತಿಯಾಗಿ, 115 ಟಿಎಂಸಿ ಅಡಿ ನೀರು ಸಂಗ್ರಹವಿದೆ. ಜೊತೆಗೆ ಕಾವೇರಿ ನೀರಾವರಿ ನಿಗಮ ವ್ಯಾಪ್ತಿಯ 6,576 ಕೆರೆಗಳು ಭರ್ತಿಯಾಗಿವೆ. ಕೃಷಿ ಚಟುವಟಿಕೆಗೆ ಅನುಕೂಲವಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

‘ಬಿಳಿಗೊಂಡ್ಲು ಜಲಮಾಪನ ಕೇಂದ್ರದಿಂದ ಜೂನ್‌ನಲ್ಲಿ 42.256 ಟಿಎಂಸಿ ಅಡಿ, ಜುಲೈನಲ್ಲಿ 103.514 ಟಿಎಂಸಿ ಅಡಿ, ಆಗಸ್ಟ್‌ನಲ್ಲಿ 51.943 ಟಿಎಂಸಿ, ಸೆಪ್ಟೆಂಬರ್‌ನಲ್ಲಿ 40.790 ಟಿಎಂಸಿ, ಅಕ್ಟೋಬರ್‌ನಲ್ಲಿ 31.344 ಟಿಎಂಸಿ ಅಡಿ ಸೇರಿದಂತೆ ಈ ವರ್ಷ ತಮಿಳುನಾಡಿಗೆ ಇದುವರೆಗೆ 273 ಟಿಎಂಸಿ ಅಡಿ ನೀರು ಹರಿದುಹೋಗಿದೆ’ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಜಲಾಶಯದಿಂದ ನದಿಗೆ ನೀರು ಹರಿಸುತ್ತಿರುವುದು



ಬೀದರ್‌ನಿಂದ ಚಾಮರಾಜನಗರ, ಬಳ್ಳಾರಿಯಿಂದ ಕೋಲಾರದವರೆಗೆ ಉತ್ತಮ ಮಳೆಯಾಗಿದೆ. ಕುಡಿಯುವ ನೀರು ಮತ್ತು ಕೃಷಿಗೆ ತೊಂದರೆ ಇಲ್ಲ. ಸರ್ಕಾರ ವರುಣನ ಕೃಪೆಗೆ ಪಾತ್ರವಾಗಿದೆ

ಡಿ.ಕೆ.ಶಿವಕುಮಾರ್, ಜಲಸಂಪನ್ಮೂಲ ಸಚಿವ

ಅತ್ಯಾಚಾರ: ಬಂಧನ

ಚಿಂಚೋಳಿ (ಕಲಬುರಗಿ ಜಿಲ್ಲೆ): ಕಲ್ಲುಗಣಿ ಕಾರ್ಮಿಕರ ಅಪ್ರಾಪ್ತ ವಯಸ್ಸಿನ ಮಗಳ ಮೇಲೆ ಮಾಲೀಕನ ಮಗ ನಿರಂತರ ಅತ್ಯಾಚಾರ ಎಸಗಿದ್ದು, ಆರೋಪಿ ಮಿರಿಯಾಣ ಗ್ರಾಮದ ಸದ್ದಾಂ ಅಲಿಯಾಸ್ ಇಮ್ರಾನ್ (33) ಎಂಬವನನ್ನು ಪೊಲೀಸರು ಬಂಧಿಸಿದ್ದಾರೆ. ‘15 ವರ್ಷದ ಸಂತ್ರಸ್ತೆ 6 ತಿಂಗಳ ಗರ್ಭಿಣಿಯಾಗಿದ್ದಾಳೆ’ ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಯ ಮೇಲೆ ಈ ಹಿಂದೆ ಅತ್ಯಾಚಾರ ಪ್ರಕರಣ ದಾಖಲಾಗಿತ್ತು. ಮಿರಿಯಾಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗುಡ್ಡೆಹಳ್ಳಿ: ದೈತ್ಯ ಪತಂಗ ಪತ್ತೆ

ಕಾರವಾರ (ಉತ್ತರ ಕನ್ನಡ ಜಿಲ್ಲೆ): ಇಲ್ಲಿನ ಗುಡ್ಡೆಹಳ್ಳಿ ಗ್ರಾಮದಲ್ಲಿ ಶನಿವಾರ 24 ಸೆಂ.ಮೀ ಅಗಲದ ರೆಕ್ಕೆ ಹೊಂದಿದ್ದ ದೈತ್ಯ ಪತಂಗ (ಅಟ್ಲಾಸ್ ಮೋತ್) ಕಂಡುಬಂದಿದೆ. ಹವ್ಯಾಸಿ ಛಾಯಾಗ್ರಾಹಕ ರವಿ ಗೌಡಾ ಎಂಬುವವರು ದೈತ್ಯ ಪತಂಗದ ಚಿತ್ರ ಸೆರೆಹಿಡಿದ್ದಾರೆ.

‘ಕರಾವಳಿ ಭಾಗದ ಕಾಡುಗಳಲ್ಲಿ ದೈತ್ಯ ಪತಂಗ ಕಾಣಿಸಿ-ಕೊಳ್ಳುತ್ತದೆ. ಪ್ರಪಂಚದಲ್ಲಿ ದೊಡ್ಡ ಗಾತ್ರದಲ್ಲಿರುವ ಪತಂಗಗಳ ಪೈಕಿ ಇದೂ ಒಂದು. ಕೆಲ ನಿರ್ದಿಷ್ಟ ಮರಗಳ ಎಲೆಗಳ ಮೇಲೆ ಮಾತ್ರ ಮೊಟ್ಟೆ ಇಡುತ್ತವೆ. ಹೆಣ್ಣು ಪತಂಗ ಮೊಟ್ಟೆ ಇಟ್ಟು ನಂತರ ಸಾಯುತ್ತದೆ’ ಎಂದು ಕೀಟ ತಜ್ಞರು ಮಾಹಿತಿ ನೀಡಿದ್ದಾರೆ.

ಅರಬ್ಬಿ ಸಮುದ್ರದಲ್ಲಿ ಐಸಿಜಿ ಸಿಬ್ಬಂದಿ ಕಾರ್ಯಾಚರಣೆ

31 ಮೀನುಗಾರರ ರಕ್ಷಣೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಸಮುದ್ರದಲ್ಲಿ ಕೆಟ್ಟುನಿಂತಿದ್ದ ಗೋವಾದ ಮೀನುಗಾರಿಕೆ ದೋಣಿಯಲ್ಲಿದ್ದ 31 ಮೀನುಗಾರರನ್ನು ಭಾರತೀಯ ಕರಾವಳಿ ರಕ್ಷಣಾ ಪಡೆ (ಐಸಿಜಿ) ನೆರವಿನಲ್ಲಿ ರಕ್ಷಿಸಲಾಗಿದೆ.

ಮೀನುಗಾರಿಕಾ ದೋಣಿ ಸ್ಟೇರಿಂಗ್ ಗೇರ್ ಕೆಟ್ಟಿದ್ದ ಕಾರಣ 31 ಮೀನುಗಾರರು 11 ದಿನಗಳಿಂದ ಅರಬ್ಬಿ ಸಮುದ್ರದಲ್ಲಿ ಸಿಲುಕಿದ್ದರು. ದೋಣಿ ನಾಪತ್ತೆ ಕುರಿತು ಐಸಿಜಿಗೆ ಮಾಹಿತಿ ನೀಡಲಾಗಿತ್ತು.

ನಾಪತ್ತೆಯಾಗಿದ್ದ ದೋಣಿ, ಮೀನುಗಾರರ ರಕ್ಷಣೆಗೆ ಕರಾವಳಿ ರಕ್ಷಣಾ ಪಡೆ 24ರಂದು ಕಾರ್ಯಾಚರಣೆ ಆರಂಭಿಸಿತ್ತು. ದೋಣಿಯು ನವ ಮಂಗಳೂರು ಬಂದರಿನಿಂದ 100 ನಾಟಿಕಲ್ ಮೈಲು ದೂರದಲ್ಲಿ ಸಂಪರ್ಕ ಕಳೆದುಕೊಂಡಿರುವುದು ಗೊತ್ತಾಗಿತ್ತು.

ದೋಣಿ ಕೊನೆಯದಾಗಿ ಕಾಣಿಸಿಕೊಂಡಿದ್ದ ಸ್ಥಳಕ್ಕೆ ಐಸಿಜಿಎಸ್ ಕಸ್ತೂರಬಾ ಗಾಂಧಿ ಹಡಗು ಕಳುಹಿಸಲಾಗಿತ್ತು. ಅದೇ ವೇಳೆ, ಕೊಚ್ಚಿಯ ಕರಾವಳಿ ರಕ್ಷಣಾ ಪಡೆಯ ಡಾರ್ನಿಯರ್ ವಿಮಾನವನ್ನು ವೈಮಾನಿಕ ಶೋಧ ಕಾರ್ಯಕ್ಕಾಗಿ ಕಳುಹಿಸಿಕೊಡಲಾಗಿತ್ತು.

ಸಮುದ್ರದಲ್ಲಿ ಕೆಲದಿನಗಳಿಂದ ಪ್ರಕ್ಷುಬ್ಧ ವಾತಾವರಣವಿದ್ದು, ಅಲೆಗಳ ಸೆಳೆತಕ್ಕೆ ಸಿಲುಕಿ ದೋಣಿ ತೇಲಿಕೊಂಡು ಹೋಗಿತ್ತು. ಸಮಕಾಲೀನ ಹವಾಮಾನ ದತ್ತಾಂಶ ಆಧರಿಸಿ ಐಸಿಜಿ ದೋಣಿ ಇರುವ ಸಂಭಾವ್ಯ ಸ್ಥಳವನ್ನು ಪತ್ತೆಹಚ್ಚಿತ್ತು. ಆ ಸ್ಥಳಕ್ಕೆ ಧಾವಿಸಿ ತುರ್ತು ನೆರವು ಒದಗಿಸಲು ಕಸ್ತೂರಬಾ ಗಾಂಧಿ ಹಡಗಿಗೆ ಸೂಚನೆಯನ್ನು ರವಾನಿಸಲಾಗಿತ್ತು.

ಅಂತೆಯೇ ಕಾರ್ಯಾಚರಣೆ ನಡೆಸಿದ ಹಡಗಿನಲ್ಲಿದ್ದ ಸಿಬ್ಬಂದಿ, ದೋಣಿ ಗುರುತಿಸಿ ಮೀನುಗಾರರಿಗೆ ತುರ್ತು ಸಹಾಯ ಒದಗಿಸಿ, ಆ ದೋಣಿಯನ್ನು ಹೊನ್ನಾವರ ಬಂದರಿಗೆ ಎಳೆದು ತರಲು ನೆರವಾಗಿತ್ತು.

‘ಪ್ರತಿಕೂಲ ಹವಾಮಾನ ಹೊರತಾಗಿ ಸಮನ್ವಯ ಕಾರ್ಯಾಚರಣೆ ಮೂಲಕ ಮೀನುಗಾರರನ್ನು ರಕ್ಷಿಸಲಾಗಿದೆ’ ಎಂದು ಇಸಿಜಿ ಹೇಳಿಕೆಯಲ್ಲಿ ತಿಳಿಸಿದೆ.

ಮೀನುಗಾರರನ್ನು ರಕ್ಷಿಸಿ ಹೊನ್ನಾವರ ಬಂದರಿಗೆ ಕರೆತರಲಾಯಿತು

ಸುಪ್ರಭಾ ಸಾಗರ ಮುನಿ ಜಿನೈಕ್ಯ

ಶ್ರವಣಬೆಳಗೊಳ (ಹಾಸನ ಜಿಲ್ಲೆ): ವರ್ಷಾಯೋಗ ಚಾತುರ್ಮಾಸ್ಯ ಆಚರಣೆಗೆ ವರ್ಧಮಾನ ಸಾಗರ ಹಾಗೂ ಸಂಘಸ್ಥ ತ್ಯಾಗಿಗಳೊಂದಿಗೆ ಬಂದಿದ್ದ ಸುಪ್ರಭಾ ಸಾಗರ ಮುನಿ (80) ಜಿನೈಕ್ಯರಾದರು.

ಅವರು ಯಮಸಲ್ಲೇಖನ ವ್ರತಾಚರಣೆ ಮಾಡಿ ಶನಿವಾರ ಸಮಾಧಿ ಮರಣ ಹೊಂದಿದರು.

ಸೆ.4ರಂದು ವರ್ಧಮಾನ ಸಾಗರ ಮುನಿ ಅವರಿಂದ ಯಮಸಲ್ಲೇಖನ ವ್ರತ ಸ್ವೀಕರಿಸಿದ್ದರು. ಅ.17ರ ನಂತರ ಆಹಾರ, ನೀರು ಸೇವನೆ ತ್ಯಜಿಸಿದ್ದರು.

ಅಂತ್ಯಕ್ರಿಯೆ: ಕ್ಷೇತ್ರದ ಚಾರುಕೀರ್ತಿ ಭಟ್ಟಾರಕರ ಮಾರ್ಗದರ್ಶನ ಹಾಗೂ ಆಚಾರ್ಯರ ತ್ಯಾಗಿಗಳ ಸಮ್ಮುಖದಲ್ಲಿ ಭಾನುವಾರ ಅಂತ್ಯಕ್ರಿಯೆ ನೆರವೇರಿತು.

‘ಯತೀಂದ್ರ ಮಾತು ಸಿ.ಎಂ ಸ್ಥಾನ ಕುರಿತು ಅಲ್ಲ’

ಪಕ್ಷವೇ ಬೇರೆ,ಅಹಿಂದ ಬೇರೆ: ಗೊಂದಲ ಅಗತ್ಯವಿಲ್ಲ –ಸತೀಶ ಜಾರಕಿಹೊಳಿ

ಪ್ರಜಾವಾಣಿ ವಾರ್ತೆ

ಸತೀಶ ಜಾರಕಿಹೊಳಿ

ಬೆಳಗಾವಿ: ‘ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಅಹಿಂದ ನಾಯಕತ್ವದ ಬಗ್ಗೆ ಹೇಳಿದ್ದಾರೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬಗ್ಗೆ ಅಲ್ಲ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಪ್ರತಿಕ್ರಿಯಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಪಕ್ಷವೇ ಬೇರೆ. ಅಹಿಂದ ಸಂಘಟನೆಯೇ ಬೇರೆ. ಸಿ.ಎಂ ಸ್ಥಾನಕ್ಕೂ ಅದಕ್ಕೂ ಸಂಬಂಧವಿಲ್ಲ. ಈ ವಿಚಾರದಲ್ಲಿ ಗೊಂದಲ ನಿರ್ಮಿಸುವ ಅಗತ್ಯವಿಲ್ಲ’ ಎಂದು ಪ್ರತಿಪಾದಿಸಿದರು.

ಸಚಿವ ಸ್ಥಾನ ತ್ಯಾಗದ ಬಗ್ಗೆ ಕೃಷ್ಣ ಬೈರೇಗೌಡರ ಹೇಳಿಕೆ ಕುರಿತು ‘ಪಕ್ಷದ ಹೈಕಮಾಂಡ್ ಸೂಚನೆಯನ್ನು ಎಲ್ಲರೂ ಪಾಲಿಸಬೇಕು. ಪಕ್ಷದ ಪರವಾಗಿ ಕೆಲಸ ಮಾಡಬೇಕು’ ಎಂದರು.

‘ಸಂಪುಟದಲ್ಲಿ 34 ಜನರಿಗಷ್ಟೇ ಸಚಿವ ಸ್ಥಾನ ನೀಡಬೇಕಿದೆ. ಅನೇಕ ಹಿರಿಯರು ಆಕಾಂಕ್ಷಿ ಇದ್ದಾರೆ. ಹೈಕಮಾಂಡ್ ತೀರ್ಮಾನವೇ ಅಂತಿಮ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಮಾತನಾಡದಂತೆ ನಿರ್ಬಂಧ’

ಧಾರವಾಡ: ‘ಮುಖ್ಯಮಂತ್ರಿ ಬದಲಾವಣೆ, ಸಚಿವ ಸಂಪುಟ ವಿಸ್ತರಣೆ, ಪುನರ್‌ರಚನೆ ಕುರಿತು ಮಾತನಾಡದಂತೆ ಪಕ್ಷ ನಿರ್ಬಂಧ ವಿಧಿಸಿದೆ’ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಪ್ರತಿಕ್ರಿಯಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ‘ಸಂಪುಟ ವಿಸ್ತರಣೆ ಅಥವಾ ಪುನರ್‌ರಚನೆ ಮಾಡುವುದು ಮುಖ್ಯಮಂತ್ರಿ ವಿವೇಚನೆಗೆ ಬಿಟ್ಟಿದ್ದು. ಹಳಬರನ್ನು ಕೈಬಿಡುವ, ಹೊಸಬರಿಗೆ ಅವಕಾಶ ಕುರಿತು ಅವರೇ ಉತ್ತರ ನೀಡಬೇಕು’ ಎಂದರು.

‘ಆಡಳಿತ ಪಕ್ಷದ ತಪ್ಪುಗಳನ್ನು ತೋರಿಸುವ, ಅಭಿವೃದ್ಧಿಗೆ ಚ್ಯುತಿ ಆಗಿದ್ದರೆ ಟೀಕಿಸುವ ಕೆಲಸವನ್ನು ಬಿಜೆಪಿಯವರು ಮಾಡಬೇಕು. ಆದರೆ, ಅವರು ಸದನದೊಳಗೂ, ಹೊರಗೂ ಅದನ್ನು ಮಾಡಲ್ಲ. ರಚನಾತ್ಮಕ ವಿರೋಧ ಪಕ್ಷಗಳಾಗಿ ಬಿಜೆಪಿ, ಜೆಡಿಎಸ್ ಕೆಲಸ ಮಾಡಲಿ’ ಎಂದರು.

ನಾನು ಆಕಾಂಕ್ಷಿ: ಕೋನರೆಡ್ಡಿ

ಧಾರವಾಡ: ‘ನಾನೂ ಸಚಿವ ಸ್ಥಾನದ ಆಕಾಂಕ್ಷಿ ಎಂದು ಪದೇಪದೇ ಹೇಳುವುದು ಸರಿಯಲ್ಲ. ಶಾಸಕರ ಕೆಲಸದ ವಿವರ ಪಡೆದು ತೀರ್ಮಾನ ಕೈಗೊಳ್ಳುವುದಾಗಿ ಹೈಕಮಾಂಡ್ ಹೇಳಿದೆ’ ಎಂದು ಶಾಸಕ ಎನ್.ಎಚ್.ಕೋನರೆಡ್ಡಿ ಅವರು ಇಲ್ಲಿ ಹೇಳಿದರು.

ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ‘ಸಂಪುಟ ವಿಸ್ತರಣೆಗೆ ಹೈಕಮಾಂಡ್ ಸೂಚನೆ ನೀಡಿದೆ ಎಂದು ಕಿತ್ತೂರು ಉತ್ಸವದ ಸಂದರ್ಭದಲ್ಲಿ ಮುಖ್ಯಮಂತ್ರಿ ನನಗೆ ತಿಳಿಸಿದರು’ ಎಂದು ಹೇಳಿದರು.

‘ಸಚಿವ ಕೃಷ್ಣ ಬೈರೇಗೌಡ ಒಬ್ಬ ಸಮರ್ಥ ನಾಯಕ. ಅಂಥವರನ್ನು ಉಳಿಸಿಕೊಳ್ಳುವುದು ಮುಖ್ಯಮಂತ್ರಿ ವಿವೇಚನೆಗೆ ಬಿಟ್ಟದ್ದು’ ಎಂದು ಹೇಳಿದರು.

ಸಂಪುಟ ಪುನರಚನೆ ಕುರಿತು ಮುಖ್ಯಮಂತ್ರಿ ಅವರೇ ಹೇಳಿದ್ದಾರೆ. ಜನವರಿಯಲ್ಲಿ ನನಗೆ ಶುಕ್ರದೆಸೆ ಬರುವುದು ನಿಜ. ಅಂತಿಮವಾಗಿ ಹೈಕಮಾಂಡ್ ನಿರ್ಧಾರಕ್ಕೆ ತಲೆಬಾಗಬೇಕು

ಲಕ್ಷ್ಮಣ ಸವದಿ, ಶಾಸಕ



ಇಂದು–ನಾಳೆ ಭಾರಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಸೋಮವಾರ ಮತ್ತು ಮಂಗಳವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿಯ ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗೆ ಸೋಮವಾರ ‘ಆರೆಂಜ್ ಅಲರ್ಟ್’ ನೀಡಲಾಗಿದ್ದು, ಈ ಜಿಲ್ಲೆಗಳ ಕೆಲವೆಡೆ ನಿರಂತರ ಗಾಳಿಯೊಂದಿಗೆ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ. ಉತ್ತರ, ದಕ್ಷಿಣ ಒಳನಾಡಿನ ಎಲ್ಲ ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ. ಉತ್ತರ ಒಳನಾಡಿನ ಬೆಳಗಾವಿ ಮತ್ತು ಧಾರವಾಡದಲ್ಲಿ ನಿರಂತರ ಗಾಳಿಯೊಂದಿಗೆ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಬಾಗಲಕೋಟೆ, ಬೀದರ್, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ, ರಾಯ ಚೂರು, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಯ ಕೆಲವೆಡೆ ಸಾಧಾರಣ ಮಳೆಯಾಗುವ ಸಂಭವವಿದೆ. ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಯಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಬಳ್ಳಾರಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ದಾವಣಗೆರೆ, ಕೋಲಾರ, ಕೊಡಗು, ಮಂಡ್ಯ, ಮೈಸೂರು, ರಾಮನಗರ, ತುಮಕೂರು ಮತ್ತು ವಿಜಯನಗರ ಜಿಲ್ಲೆಯ ಕೆಲವೆಡೆ ಸಾಧಾರಣ ಮಳೆಯಾಗುವ ಸಂಭವವಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.80	18,409	18,452
ಹಾರಂಗಿ	2,859	2,858.33	802	500
ಕಬಿನಿ	2,284.00	2,283.92	1,531	1,429
ಹೇಮಾವತಿ	2,922	2,922	6,772	6,723
ಲಿಂಗನಮಕ್ಕಿ	1,819	1,815.15	2,105	6,899
ಸೂಪಾ (ಮೀ)	564	558.29	834.21	3,105.98
ಮಾಣಿ	595	593.60	226	666
ತುಂಗಭದ್ರಾ	1,633	1,626.06	31,413	31,208
ಮಲಪ್ರಭಾ	2,079.5	2,079.50	1,694	1,694
ಘಟಪ್ರಭಾ	2175	2,174.85	520	1,158
ಭದ್ರಾ *	186	185	9,272	6,876
ಆಲಮಟ್ಟಿ (ಮೀ)	519.6	519.60	2,590	1,160
ನಾರಾಯಣಪುರ (ಮೀ)	492.25	491.57	5,000	353

* ನೆಲಮಟ್ಟದಿಂದ

ಉತ್ತರ ಕನ್ನಡದಲ್ಲಿ ಮುಂದುವರಿದ ಮಳೆ

ಹುಬ್ಬಳ್ಳಿ: ಭಾನುವಾರ ಧಾರವಾಡ ಜಿಲ್ಲೆಯ ವಿವಿಧೆಡೆ ಸಾಧಾರಣ ಮತ್ತು ಉತ್ತರ ಕನ್ನಡ ಜಿಲ್ಲೆಯಾದ್ಯಂತ ಭಾನುವಾರವೂ ಉತ್ತಮ ಮಳೆಯಾಗಿದೆ. ಕರಾವಳಿ ಭಾಗ ದಲ್ಲಿ ಗಾಳಿ ಸಹಿತ ಮಳೆ ಸುರಿದಿದ್ದರೆ, ಘಟ್ಟದ ಮೇಲಿನ ತಾಲ್ಲೂಕುಗಳಲ್ಲಿ ಆಗಾಗ ಸಾಧಾರಣ ಮಳೆ ಸುರಿದಿದೆ. ಶನಿವಾರದಿಂದ ಭಾನುವಾರ ನಸುಕಿನ ಜಾವದವರೆಗೆ ಹೊನ್ನಾವರ ತಾಲ್ಲೂಕಿನ ಕಾಸರಕೋಡದಲ್ಲಿ 9.1 ಸೆಂ.ಮೀ, ಭಟ್ಕಳ ಮತ್ತು ಹೊನ್ನಾವರದ ವಿವಿಧೆಡೆ 8 ಸೆಂ.ಮೀ ಮಳೆ ಸುರಿದಿದೆ. ಮಳೆ ಪರಿಣಾಮ ಭತ್ತದ ಗದ್ದೆಗಳಲ್ಲಿ ನೀರು ನಿಂತಿದೆ. ಫಸಲು ಕಟಾವಿಗೆ ಬರುವ ಸಮಯದಲ್ಲೇ ಮಳೆ ಸುರಿಯುತ್ತಿರುವುದು ರೈತರಲ್ಲಿ ಆತಂಕ ಉಂಟುಮಾಡಿದೆ.

ಆಳಂದ ತಾಲ್ಲೂಕು ಗೋಳಾ (ಬಿ) ಗ್ರಾಮದ ದೇಗುಲ • ಲಕ್ಕಮ್ಮದೇವಿಗೆ ಬೆನ್ನ ಹಿಂದೆ ಪೂಜೆ...

ಹೊಸ ಚಪ್ಪಲಿ ಅರ್ಪಿಸಿ ದೇವಿಗೆ ಹರಕೆ

• ಬಷೀರಅಹ್ಮದ್ ನಗಾರಿ

ಕಲಬುರಗಿ: ಒಂದೆಡೆ ಸಜ್ಜಕದ ಹೋಳಿಗೆ, ಮತ್ತೊಂದೆಡೆ ಬಾಡೂಟದ ಘಮಲು. ಜೊತೆಗೆ ತಮಟೆ ನಾದ. ಇಷ್ಟಾರ್ಥ ಈಡೇರಿಕೆಗೆ ಹರಕೆ ಹೊತ್ತು ಚಪ್ಪಲಿ ಕಟ್ಟುವ ಭಕ್ತರು...

ಇದು ಜಿಲ್ಲೆಯ ಆಳಂದ ತಾಲ್ಲೂಕಿನ ಗೋಳಾ (ಬಿ) ಗ್ರಾಮದ ಹೊರವಲಯದ ಲಕ್ಕಮ್ಮ ದೇವಿ ಜಾತ್ರೆಯಲ್ಲಿ ಭಾನುವಾರ ಕಂಡ ನೋಟ.

ಗ್ರಾಮದ ಹೊರವಲಯದ ಗುಡ್ಡಪ್ರದೇಶದಲ್ಲಿ ಈ ದೇವಿ ಜಾತ್ರೆಯು ಪ್ರತಿವರ್ಷ ದೀಪಾವಳಿ ಹಬ್ಬದ ಪಂಚಮಿಯಂದು ಮೇಳೈಸುತ್ತದೆ. ಸುತ್ತಲಿನ ತಾಲ್ಲೂಕುಗಳು, ನೆರೆಯ ಮಹಾರಾಷ್ಟ್ರ, ತೆಲಂಗಾಣ ಸೇರಿದಂತೆ ವಿವಿಧೆಡೆಯ ಸಾವಿರಾರು ಭಕ್ತರು ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ.

ಎಲ್ಲ ದೇವರಿಗೆ ಮುಖದ ಎದುರು ಪೂಜೆ ಸಲ್ಲುತ್ತದೆ. ಆದರೆ, ಲಕ್ಕಮ್ಮ ದೇವಿ ಪಶ್ಚಿಮದತ್ತ ಬಾಗಿದ್ದು ದೇವಿಗೆ ಬೆನ್ನ ಹಿಂದೆ ಪೂಜಿಸಿ, ನೈವೇದ್ಯ ಅರ್ಪಿಸುವುದು ಇಲ್ಲಿನ ವೈಶಿಷ್ಟ್ಯ.

ಭಕ್ತರು ಕಾಯಿ–ಕರ್ಪೂರದ ಜೊತೆಗೆ ದೇವಿಗೆ ಹೊಸ ಚಪ್ಪಲಿ ಸಮರ್ಪಿಸುತ್ತಾರೆ. ಹೀಗೆ ಹೊಸ ಚಪ್ಪಲಿ ಕಟ್ಟಿದರೆ ಇಷ್ಟಾರ್ಥ ಈಡೇರುತ್ತದೆ ಎಂಬುದು ಭಕ್ತರ ನಂಬಿಕೆ. ಹರಕೆ ಹೊತ್ತವರು ದೇವಾಲಯದ ಬಲತುದಿಗೆ ನೇತುಹಾಕಿದ್ದ ಹಗ್ಗಕ್ಕೆ ‘ಹೊಸ ಚಪ್ಪಲಿ’ ಕಟ್ಟುವ ನೋಟ ಭಾನುವಾರವೂ ಕಂಡು ಬಂತು. ದೇವಿ ದರ್ಶನಕ್ಕೆ ಸಾಲುಗಟ್ಟಿದ್ದ ಭಕ್ತರು ಆ ‘ಚಪ್ಪಲಿ’ಗಳನ್ನು ಶಿರಕ್ಕೆ ಒತ್ತಿಕೊಂಡು ‘ಆಶೀರ್ವಾದ’ ಪಡೆಯುತ್ತಿದ್ದರು.

ಕಾಳಿ ಮಾತೆಯ ಪ್ರತಿರೂಪವಾದ ಈ ಲಕ್ಕಮ್ಮ ದೇವಿಗೆ ಹೆಚ್ಚಾಗಿ ಪೋತೆರಾಜರು ನಡೆದು ಕೊಳ್ಳುತ್ತಾರೆ. ಜಾತ್ರೆಯಂದು ಮುಖಕ್ಕೆ ಅಂದವಾಗಿ ಬಣ್ಣ ಬಳಿದುಕೊಂಡು, ಇಡೀ ದಿನ ತಮಟೆ ನಾದ ಹೊಮ್ಮಿಸುತ್ತ, ಹೆಜ್ಜೆ ಹಾಕಿ ಭಕ್ತಿ ಅರ್ಪಿಸಿದರು.

ಸಿಹಿ, ಮಾಂಸದ ನೈವೇದ್ಯ: ದೇವಿಗೆ ಭಕ್ತರು ಆಚರಣೆಯಂತೆ ನೈವೇದ್ಯ ಅರ್ಪಿಸುತ್ತಾರೆ. ಕೆಲ ಭಕ್ತರು ದೇವಾಲಯದ ಸುತ್ತಲೂ ಒಲೆ ಹೂಡಿ ಸಜ್ಜಕದ ಹೋಳಿಗೆ ತಯಾರಿಸಿ, ಹಿಟ್ಟಿನ ದೀಪ ಬೆಳಗಿ ‘ಸಿಹಿ’ ಭಕ್ಷ್ಯದ ನೈವೇದ್ಯ ಅರ್ಪಿಸುತ್ತಾರೆ.

ಕೆಲವರು ಕೋಳಿ–ಹುಂಜಗಳನ್ನು ದೇವಾಲಯಕ್ಕೆ ಐದು ಸುತ್ತು ಹಾಕಿ ಬಳಿಕ ಅದರ ಖಾದ್ಯವನ್ನು ದೇವಿಗೆ ನೈವೇದ್ಯ ಹಿಡಿಯಲಾಗುತ್ತದೆ. ಎರಡೂ ಬಗೆಯ ನೈವೇದ್ಯಗಳು ದೇಗುಲದ ಪರಿಸರದಲ್ಲೇ ನಡೆಯುವುದು ವಿಶೇಷ.

ಆಳಂದ ತಾಲ್ಲೂಕಿನ ಗೋಳಾ (ಬಿ) ಗ್ರಾಮದ ಲಕ್ಕಮ್ಮ ದೇವಿ ಜಾತ್ರೆಯಲ್ಲಿ ಸೇರಿದ್ದ ಜನಸ್ತೋಮ

ಲಕ್ಕಮ್ಮ ದೇವಿ ಜಾತ್ರೆಯಲ್ಲಿ ಹರಕೆ ಹೊತ್ತು ಚಪ್ಪಲಿ ಕಟ್ಟಿದ ಯುವಕ

ತಂಗಿಯ ಜೀವನದ ಶ್ರೇಯೋಭಿವೃದ್ಧಿಯ ಹರಕೆ ಹೊತ್ತು ತಾಯಿ ಲಕ್ಕಮ್ಮ ದೇವಿಗೆ ಹೊಸ ಚಪ್ಪಲಿ ತಂದು ಅರ್ಪಿಸಿದೆ. ಇಷ್ಟಾರ್ಥ ಈಡೇರುವ ವಿಶ್ವಾಸವಿದೆ

ರಾಹುಲ್ ಗುತ್ತೇದಾರ, ನರೋಣಾ ನಿವಾಸಿ

ಕಟ್ಟಿಗೆ– ಕಂಚಿನ ಕಳಸದ ಮೆರವಣಿಗೆ

‘ದೀಪಾವಳಿ ಪಾಡ್ಯದಿಂದ 4ನೇ ದಿನ ರಾತ್ರಿ ಗೋಳಾ(ಬಿ) ಗ್ರಾಮದಿಂದ ಐದು ಅಡಿಗಳ ಕಟ್ಟಿಗೆ ಕಳಸವನ್ನು ದೇವಸ್ಥಾನಕ್ಕೆ ತಂದು ಪ್ರತಿಷ್ಠಾಪಿಸಲಾಗುತ್ತದೆ. ಅದು ಜಾತ್ರೆಯ ಆರಂಭ. ನಸುಕಿನ 3 ಗಂಟೆ ಗ್ರಾಮಸ್ಥರು ದೇವಿಗೆ ಹೋಳಿಗೆ ನೈವೇದ್ಯ ಹಿಡಿಯುತ್ತಾರೆ’ ಎನ್ನುತ್ತಾರೆ ಲಕ್ಕಮ್ಮ ದೇವಿ ದೇವಾಲಯದ ಟ್ರಸ್ಟ್ ಅಧ್ಯಕ್ಷ ಬಸವರಾಜ ಶಂಕರರಾವ ಪಾಟೀಲ.

‘ದೀಪಾವಳಿ ಪಂಚಮಿಯಂದು ಗ್ರಾಮದ ಮನೆ–ಮನೆಯಿಂದ ಕಂಚಿನ ಕಳಸದ ಮೆರವಣಿಗೆ ನಡೆಯುತ್ತದೆ. ಮೆರವಣಿಗೆ ಲಕ್ಕಮ್ಮ ದೇವಾಲಯ ತಲುಪಿದಂತೆ ಜಾತ್ರೆ ಸಂಪನ್ನಗೊಳ್ಳುತ್ತದೆ’ ಎಂದು ವಿವರಿಸಿದರು.

‘ವಿ.ವಿಯಲ್ಲಿ ನಡೆಯದ ಸಂಶೋಧನೆ’

ಜಚನಿ ಅಧ್ಯಯನ ಪೀಠ ಮತ್ತು ಸಂಶೋಧನಾ ಸಂಸ್ಥೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ವಿಶ್ವವಿದ್ಯಾಲಯಗಳಲ್ಲಿರುವ ಅಧ್ಯಯನ ಪೀಠಗಳಲ್ಲಿ ನಿರೀಕ್ಷಿತ ಮಟ್ಟದ ಸಂಶೋಧನೆಗಳು ನಡೆಯುತ್ತಿಲ್ಲ. ಕಾರ್ಯ ಚಟುವಟಿಕೆ ಇರಲಿ, ಬೀಗವನ್ನೇ ತೆಗೆಯದೇ ಹಲವು ಅಧ್ಯಯನ ಕೇಂದ್ರಗಳು ದೂಳಿನಲ್ಲಿ ಮುಳುಗಿವೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ ಬೇಸರ ವ್ಯಕ್ತಪಡಿಸಿದರು.

ನಗರದ ಬಸವನಗುಡಿಯ ನಿಡುಮಾಮಿಡಿ ಮಠದಲ್ಲಿ ಜಚನಿ ಅಧ್ಯಯನ ಪೀಠ ಮತ್ತು ಸಂಶೋಧನಾ ಸಂಸ್ಥೆಯನ್ನು ಭಾನುವಾರ ಉದ್ಘಾಟಿಸಿ ಮಾತನಾಡಿದ ಅವರು, ‘ಅಧ್ಯಯನ ಪೀಠಗಳು ಬೇಕೇಬೇಕು ಎಂದು ಒತ್ತಡ ಹಾಕಿ ಅನುಮತಿ ಪಡೆಯುತ್ತಾರೆ. ಸರ್ಕಾರವೂ ವರ್ಷಕ್ಕೆ ₹2 ಲಕ್ಷ ದಿಂದ ₹40 ಲಕ್ಷವರೆಗೂ ಆರ್ಥಿಕ ನೆರವು ನೀಡುತ್ತದೆ. ಆರಂಭದಲ್ಲಿ ಇದ್ದ ಕಳಕಳಿ ಕಾಣೆಯಾಗಿ ಪೀಠಗಳು ಕೆಲಸವನ್ನೇ ಮಾಡದ ಸನ್ನಿವೇಶ ನಿರ್ಮಾಣವಾಗಿದೆ. ಇದು ಒಳ್ಳೆಯ ಬೆಳವಣಿಗೆಯಲ್ಲ’ ಎಂದು ಹೇಳಿದರು.

‘ಸಂಶೋಧನಾ ಕ್ಷೇತ್ರದ ತಜ್ಞರನ್ನೊಳಗೊಂಡ ಸಮಿತಿ ರಚಿಸಿ ನಿಯಮಿತವಾಗಿ ಚಟುವಟಿಕೆ ನಡೆಸಿದರೆ

> **ಮಠದ ಸಂಪತ್ತನ್ನು ದುರುಪಯೋಗಪಡಿಸಿಕೊಂಡು ರಕ್ತ ಸಂಬಂಧಿಯನ್ನೇ ಉತ್ತರಾಧಿಕಾರಿ ಮಾಡುವ ಪ್ರಮಾಣ ನಮ್ಮಲ್ಲಿ ಹೆಚ್ಚಿದೆ. ಕೋಟಿ ಬೆಲೆಯ ಕಾರುಗಳ ವೈಭವ ನೋಡಿದರೆ ಬೇಸರವಾಗುತ್ತದೆ**
> **ವೀರಭದ್ರ ಚನ್ನಮಲ್ಲ ದೇಶೀಕೇಂದ್ರ ಸ್ವಾಮೀಜಿ,** ನಿಡುಮಾಮಿಡಿ ಮಠ

ಹೀಗೆ ಆಗುವುದಿಲ್ಲ. ಸಮಾಜದಲ್ಲಿ ದಶಕಗಳ ಹಿಂದೆಯೇ ಬದಲಾವಣೆಗೆ ನಾಂದಿ ಹಾಡಿದ ಜಚನಿ ಅವರ ಹೆಸರಲ್ಲಿ ಸಂಶೋಧನಾ ಸಂಸ್ಥೆ ಆರಂಭಿಸುತ್ತಿರುವುದು, ತಜ್ಞರ ಸಲಹಾ ಸಮಿತಿ ರಚಿಸಿರುವುದನ್ನು ನೋಡಿದರೆ ಒಳ್ಳೆಯ ಕೆಲಸ ಆಗುವ ವಿಶ್ವಾಸವಿದೆ’ ಎಂದು ತಿಳಿಸಿದರು.

ಆಶಯ ಭಾಷಣ ಮಾಡಿದ ಹಂಪಿ ಕನ್ನಡ ವಿಶ್ವವಿದ್ಯಾಲಯ ಕುಲಪತಿ ಡಿ.ವಿ. ಪರಶಿವಮೂರ್ತಿ, ‘ಸರ್ಕಾರವು ಬಡ್ತಿಗೆ ಪಿಎಚ್‌.ಡಿ ಪದವಿಯನ್ನು ಕಡ್ಡಾಯಗೊಳಿಸಿದ ಮೇಲೆ ಸಂಶೋಧನಾ ಗುಣಮಟ್ಟ ಕುಸಿದಿದೆ. ವೇತನ ಹೆಚ್ಚಳಕ್ಕಾಗಿ ಪ್ರಮಾಣಪತ್ರ ಪಡೆಯಲೆಂದು ಸಂಶೋಧನೆ ಮಾಡುವವರ ಪ್ರಮಾಣ ಹೆಚ್ಚಾಗಿದೆ. ಆದರೆ ಕನ್ನಡ ವಿಶ್ವವಿದ್ಯಾಲಯ ಮಾತ್ರ ಯುಜಿಸಿಗಿಂತಲೂ ಬಿಗಿ ನಿಯಮ ಜಾರಿಗೊಳಿಸಿ ಅನುಷ್ಠಾನಗೊಳಿಸುತ್ತಿದೆ. ಇದರಿಂದ ನಮ್ಮಲ್ಲಿ ವರ್ಷಕ್ಕೆ 100ಕ್ಕೂ ಹೆಚ್ಚು ಸಂಶೋಧಕರು ಗುಣಾತ್ಮಕವಾಗಿಯೇ ಪಿಎಚ್‌.ಡಿ ಪೂರ್ಣಗೊಳಿಸುತ್ತಿದ್ದಾರೆ’ ಎಂದು ಹೇಳಿದರು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಜಚನಿ ಕೊಡುಗೆಯನ್ನು ಸ್ಮರಿಸಿದರು.

ನಗರದ ನಿಡುಮಾಮಿಡಿ ಮಠದಲ್ಲಿ ನಡೆದ ಜಚನಿ ಅಧ್ಯಯನ ಪೀಠ ಮತ್ತು ಸಂಶೋಧನಾ ಸಂಸ್ಥೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಪ್ರೊ.ಡಿ.ವಿ. ಪರಮಶಿವಮೂರ್ತಿ, ಕೆ.ವಿ.ಪ್ರಭಾಕರ, ಡಾ. ಎಂ.ಸಿ. ಸುಧಾಕರ್, ನಿಡುಮಾಮಿಡಿ ಮಠದ ಪೀಠಾಧಿಪತಿ ವೀರಭದ್ರ ಚನ್ನಮಲ್ಲ ದೇಶೀಕೇಂದ್ರ ಸ್ವಾಮೀಜಿ, ಡಾ.ಕೆ ಮರುಳಸಿದ್ದಪ್ಪ ಮತ್ತು ಕನ್ನಡ ಸಂಘರ್ಷ ಸಮಿತಿ ಅಧ್ಯಕ್ಷ ಎ.ಎಸ್‌.ನಾಗರಾಜಸ್ವಾಮಿ ಪಾಲ್ಗೊಂಡಿದ್ದರು– ಪ್ರಜಾವಾಣಿ ಚಿತ್ರ

‘ಜಗದ್ಗುರುಗಳಿಗೂ ಪುಡಾರಿಗಳಿಗೂ ವ್ಯತ್ಯಾಸವಿಲ್ಲ’

‘ಶಿಕ್ಷಣ, ಸಂಸ್ಕೃತಿ, ಆಧ್ಯಾತ್ಮಿಕ ಪ್ರಸಾರ ಕೇಂದ್ರಗಳಾಗಬೇಕಾಗಿದ್ದ ಮಠಗಳು ಜಾತಿ ಹಿತಾಸಕ್ತಿಗಳ ಕೇಂದ್ರಗಳಾಗಿ ಮಾರ್ಪಟ್ಟಿವೆ. ಜಗದ್ಗುರುಗಳಿಗೂ ಪುಡಾರಿಗಳಿಗೂ ವ್ಯತ್ಯಾಸವೇ ಇಲ್ಲದಂತಾಗಿದೆ’ ಎಂದು ಸಾಹಿತಿ ಕೆ. ಮರುಳಸಿದ್ದಪ್ಪ ಆಕ್ರೋಶ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ‘ಕೆಲವು ಪೀಠಾಧಿಪತಿಗಳು ಮೀಸಲಾತಿ ಕೊಡಿ, ಇಂತಹವರನ್ನೇ ಮಂತ್ರಿ ಮಾಡಿ ಎಂದು ನಿರ್ದೇಶಿಸುವ ಹಂತಕ್ಕೆ ಹೋಗಿದ್ದಾರೆ. ಕಾವಿಯಂತೆ ಯೂನಿಫಾರ್ಮ್ ಧರಿಸುವುದನ್ನು ಬಿಟ್ಟರೆ ಅವರ ಮಾತಿಗೂ ರಾಜಕಾರಣಿಗಳು–ಪುಡಾರಿಗಳ ಮಾತಿಗೂ ವ್ಯತ್ಯಾಸವೇ ಇಲ್ಲದಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಗಡಿಪಾರು: ಕೈಕೋಳದೊಂದಿಗೆ ಬಂದ 35 ಜನರು

ಕೈಥಾಲ್ (ಹರಿಯಾಣ) (ಪಿಟಿಐ): ಅಮೆರಿಕದಿಂದ ಗಡಿಪಾರಾಗಿ ಭಾರತಕ್ಕೆ ಮರಳಿರುವ ತಂಡದಲ್ಲಿ ಹರಿಯಾಣದ ಕೈಥಲ್, ಕರ್ನಾಲ್ ಮತ್ತು ಕುರುಕ್ಷೇತ್ರ ಜಿಲ್ಲೆಗಳಿಗೆ ಸೇರಿದ 35 ಜನರಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಅಕ್ರಮವಾಗಿ ಅಮೆರಿಕ ಪ್ರವೇಶಿಸಿದ ಭಾರತೀಯರನ್ನು ಹೊಂದಿದ್ದ ವಿಮಾನವು ಶನಿವಾರ ತಡರಾತ್ರಿ ದೆಹಲಿ ವಿಮಾನ ನಿಲ್ದಾಣಕ್ಕೆ ಬಂದಿಳಿದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಮೆರಿಕದಿಂದ ಗಡಿಪಾರಾಗಿ ಬಂದವರಲ್ಲಿ ಕರ್ನಾಲ್‌ನ 16, ಕೈಥಲ್‌ನ 14 ಮತ್ತು ಕುರುಕ್ಷೇತ್ರ ಜಿಲ್ಲೆಯ ಐದು ಮಂದಿ ಸೇರಿದ್ದಾರೆ. ಅವರನ್ನು ಆಯಾ ಜಿಲ್ಲೆಗಳಲ್ಲಿನ ಅವರ ಕುಟುಂಬದ ಸದಸ್ಯರಿಗೆ ಹಸ್ತಾಂತರಿಸಲಾಯಿತು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

‘ವಿಮಾನದಲ್ಲಿದ್ದ ಬಹುತೇಕರಿಗೆ ಕೈಕೋಳ ಹಾಕಲಾಗಿತ್ತು’ ಎಂದು ಅಮೆರಿಕದಿಂದ ಗಡಿಪಾರಾಗಿರುವ ಕೈಥಲ್ ಮೂಲದ ನರೇಶ್ ಕುಮಾರ್ ಪ್ರತಿಕ್ರಿಯಿಸಿದ್ದಾರೆ.

‘ಇವರೆಲ್ಲ ಅಕ್ರಮ ಮಾರ್ಗದ ಮೂಲಕ ಅಮೆರಿಕದ ಒಳಗೆ ಪ್ರವೇಶಿಸಿದ್ದರು. ಇದಕ್ಕಾಗಿ ಏಜೆಂಟರಿಗೆ ಲಕ್ಷಾಂತರ ರೂಪಾಯಿ ಪಾವತಿಸಿದ್ದಾರೆ ಎಂಬುದು ಗೊತ್ತಾಗಿದೆ. ಆದರೆ ಈ ಬಗ್ಗೆ ಇಲ್ಲಿಯವರೆಗೆ ಯಾರೂ ಅಧಿಕೃತವಾಗಿ ದೂರು ದಾಖಲಿಸಿಲ್ಲ’ ಎಂದು ಡಿಎಸ್‌ಪಿ ಲಲಿತ್ ಕುಮಾರ್ ತಿಳಿಸಿದ್ದಾರೆ.

ಅಮೆರಿಕ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಮತ್ತೆ ಅಧಿಕಾರಕ್ಕೆ ಬಂದ ಬಳಿಕ, ಅಲ್ಲಿನ ಕಾನೂನು ಜಾರಿ ಸಂಸ್ಥೆಗಳು ಅಕ್ರಮ ವಲಸಿಗರ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಂಡಿವೆ. ಇದರ ಭಾಗವಾಗಿ ಈ ವರ್ಷದ ಆರಂಭದಲ್ಲಿ ಪಂಜಾಬ್, ಹರಿಯಾಣ ಮತ್ತು ಗುಜರಾತಿನ ಹಲವು ಯುವಕರನ್ನು ಅಮೆರಿಕ ಗಡಿಪಾರು ಮಾಡಿತ್ತು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256

‘ಜೀವಕ್ಕೆ ಅಪಾಯ ತಂದೊಡ್ಡುವ ರಸ್ತೆ’

ರಾಜಾರಾಮ್ ಮೋಹನ್ ರಾಯ್ ರಸ್ತೆಯ ಪೆಟ್ರೋಲ್ ಬ್ಯಾಂಕ್ ತಿರುವಿನ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ಈ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರು ತೀವ್ರ ಪರದಾಟ ನಡೆಸಬೇಕಾಗಿದೆ. ಭಾರಿ ಗಾತ್ರದ ವಾಹನಗಳು ವೇಗವಾಗಿ ಚಲಿಸುವುದರಿಂದ ದ್ವಿಚಕ್ರ ವಾಹನ ಸವಾರರು ರಸ್ತೆ ಗುಂಡಿಗಳನ್ನೂ ಲೆಕ್ಕಿಸದೆ ಹೋಗಬೇಕಾಗಿದೆ. ಒಂದು ವೇಳೆ ಗುಂಡಿ ತಪ್ಪಿಸಲು ಹೋದಲ್ಲಿ ಹಿಂಬದಿ ವಾಹನ ಗುದ್ದಿ, ರಸ್ತೆ ಅಪಘಾತವಾಗುವ ಸಾಧ್ಯತೆ ಇರುತ್ತದೆ. ಈಗಾಗಲೇ ಹಲವರು ಈ ರಸ್ತೆಯಲ್ಲಿ ಬಿದ್ದು, ಗಾಯಗೊಂಡಿದ್ದಾರೆ. ದುರಸ್ತಿಗೆ ಸಾಕಷ್ಟು ಬಾರಿ ದೂರು ನೀಡಿದರೂ ಜಿಬಿಎ ಅಧಿಕಾರಿಗಳು ಗಮನಹರಿಸಿಲ್ಲ.

ಶಿವಪ್ರಸಾದ್ ಎಸ್., ವಾಹನ ಸವಾರ

‘ರಸ್ತೆ ಗುಂಡಿ ಮುಚ್ಚಿ’



ಹರಳೂರು–ಕೂಡ್ಲು ರಸ್ತೆ ಗುಂಡಿಗಳಿಂದ ಕೂಡಿದೆ. ರಸ್ತೆಗೆ ಹಾಕಿದ್ದ ಡಾಂಬರು ಕಿತ್ತುಹೋಗಿದ್ದು, ವಾಹನ ಸವಾರರು ಸಂಚರಿಸುವುದು ಕಷ್ಟವಾಗಿದೆ. ಮಾರುದ್ದದ ಗುಂಡಿಗಳು ಅಲ್ಲಲ್ಲಿ ಕಂಡುಬರುತ್ತವೆ. ದ್ವಿಚಕ್ರ ವಾಹನ ಸವಾರರು ಈ ರಸ್ತೆಯಲ್ಲಿ ಭಯದಲ್ಲೇ ಸಂಚರಿಸಬೇಕಾದ ದುಃಸ್ಥಿತಿ ಇದ್ದು, ನಿಯಂತ್ರಣ ತಪ್ಪಿ ಬೀಳುವುದು ಸಾಮಾನ್ಯವಾಗಿದೆ. ಅಪಘಾತಗಳೂ ಹೆಚ್ಚುತ್ತಿವೆ. ಹಲವು ತಿಂಗಳಿಂದ ರಸ್ತೆ ಹಾಳಾಗಿದ್ದರೂ ಅಧಿಕಾರಿಗಳು ದುರಸ್ತಿಗೆ ಕ್ರಮ ಕೈಗೊಂಡಿಲ್ಲ. ಸಂಚಾರ ದಟ್ಟಣೆಯೂ ಹೆಚ್ಚುತ್ತಿದೆ. ಆದಷ್ಟು ಬೇಗ ರಸ್ತೆ ದುರಸ್ತಿಗೆ ಗಮನಹರಿಸಬೇಕು.

ಸಂಪತ್, ಸ್ಥಳೀಯ ನಿವಾಸಿ

‘ಕಸ ವಿಲೇವಾರಿ ಮಾಡಿ’

ಅವೆನ್ಯೂ ರಸ್ತೆಗೆ ಹೊಂದಿಕೊಂಡಿರುವ ಆಸ್ಪತ್ರೆ ರಸ್ತೆಯಲ್ಲಿ ಕಸದ ರಾಶಿ ಹಾಕಲಾಗಿದೆ. ಹಲವು ದಿನಗಳಿಂದ ಇರುವ ಈ ಕಸದ ರಾಶಿಯನ್ನು ತೆರವು ಮಾಡುತ್ತಿಲ್ಲ. ಪೌರಕಾರ್ಮಿಕರು ಅಥವಾ ಸಂಬಂಧಪಟ್ಟವರು ಈ ಬಗ್ಗೆ ಗಮನಹರಿಸುತ್ತಿಲ್ಲ. ಇದರಿಂದಾಗಿ ಕಸದ ರಾಶಿ ಬೆಳೆಯುತ್ತಲೇ ಇದೆ. ಸ್ಥಳೀಯ ನಿವಾಸಿಗಳು ಹಾಗೂ ಪಾದಚಾರಿಗಳು ಸಮಸ್ಯೆ ಎದುರಿಸುತ್ತಿದ್ದಾರೆ. ಈ ಕಸವು ರಸ್ತೆಯನ್ನೂ ಆವರಿಸಿಕೊಳ್ಳುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ, ತುರ್ತಾಗಿ ಕಸ ತೆರವಿಗೆ ಕ್ರಮವಹಿಸಬೇಕು.

ಧನಂಜಯ್, ಸ್ಥಳೀಯ ನಿವಾಸಿ

‘ಮರದ ಪೆಟ್ಟಿಗೆ ಅಳವಡಿಸಿ’

ಜಂಬೂಸವಾರಿ ದಿಣ್ಣೆ ಮುಖ್ಯರಸ್ತೆಯ ಆರ್‌ಬಿಐ ಲೇಔಟ್‌ನಲ್ಲಿ ಕ್ಯಾಪಿಟಲ್ ಪಬ್ಲಿಕ್ ಸ್ಕೂಲ್ ಎದುರು ಹಳೆ ಬಟ್ಟೆಗಳನ್ನು ಇಡಲಾಗುತ್ತಿದೆ. ಈ ಹಿಂದೆ ಅಲ್ಲಿ ಮರದ ಪೆಟ್ಟಿಗೆಯನ್ನು ಇರಿಸಲಾಗಿತ್ತು. ಸಾರ್ವಜನಿಕರು ತಮಗೆ ಅವಶ್ಯವಲ್ಲದ ಬಟ್ಟೆಗಳನ್ನು ತಂದು ಆ ಪೆಟ್ಟಿಗೆಯಲ್ಲಿ ಹಾಕುತ್ತಿದ್ದರು. ಅಗತ್ಯವಿದ್ದವರು ಆ ಬಟ್ಟೆಗಳನ್ನು ಕೊಂಡೊಯ್ಯುತ್ತಿದ್ದರು. ಈಗ ಮರದ ಪೆಟ್ಟಿಗೆ ಇಲ್ಲದ ಕಾರಣ ಪಾದಚಾರಿ ಮಾರ್ಗದಲ್ಲಿಯೇ ಬಟ್ಟೆಗಳ ರಾಶಿ ಬಿದ್ದಿದೆ. ಬಟ್ಟೆಗಳು ಹಾಳಾಗಿ, ಬಳಸಲು ಯೋಗ್ಯವಲ್ಲದ ಸ್ಥಿತಿಗೆ ತಲುಪುತ್ತಿವೆ. ಆದ್ದರಿಂದ ದಾನಿಗಳು ಇಲ್ಲಿ ಮರದ ಪೆಟ್ಟಿಗೆ ಅಳವಡಿಸಿದರೆ ಅಗತ್ಯ ಇರುವವರಿಗೆ ನೆರವಾಗುತ್ತದೆ.

ಎಚ್. ದೊಡ್ಡಮಾರಯ್ಯ, ಸಂತೃಪ್ತಿ ನಗರ

‘ಈಜು ಕೊಳದಂತಾಗುವ ರಸ್ತೆ’

ಎಲೆಕ್ಟ್ರಾನಿಕ್ ಸಿಟಿಯ ಹುಲಿಮಂಗಲ ರಸ್ತೆಯಲ್ಲಿರುವ ರಿತು ಸ್ವೀಟ್ಸ್ ಮಳಿಗೆ ಬಳಿ ರಸ್ತೆಯು ಗುಂಡಿಗಳಿಂದ ಆವೃತ್ತವಾಗಿದ್ದು, ಮಳೆ ಬಂದಲ್ಲಿ ರಸ್ತೆ ಈಜು ಕೊಳದಂತಾಗುತ್ತದೆ. ಇಲ್ಲಿ ಸಂಚಾರ ಕಷ್ಟಸಾಧ್ಯವಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ, ಗುಂಡಿಗಳನ್ನು ಮುಚ್ಚಲು ಕ್ರಮವಹಿಸಬೇಕು.

ಮಣಿರಾಜನ್, ಸ್ಥಳೀಯ ನಿವಾಸಿ

‘ಧರ್ಮ ಬಂಗಾರ’ ಪ್ರಶಸ್ತಿ

ಪ್ರಜಾವಾಣಿ ಚಿತ್ರ

ಶಿವಮೊಗ್ಗ ಜಿಲ್ಲೆಯ ಸೊರಬದಲ್ಲಿ ಭಾನುವಾರ ನಡೆದ ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರ 93ನೇ ಜನ್ಮದಿನಾಚರಣೆ ಸಮಾರಂಭದಲ್ಲಿ ಬೆಂಗಳೂರಿನ ಗುಬ್ಬಿ ತೋಟದಪ್ಪ ಧರ್ಮಸಂಸ್ಥೆ ಪರವಾಗಿ ನಿವೃತ್ತ ಪೊಲೀಸ್ ಮಹಾನಿರ್ದೇಶಕ ಎಲ್.ರೇವಣಸಿದ್ದಯ್ಯ ಅವರಿಗೆ ‘ಧರ್ಮ ಬಂಗಾರ’ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಾಹಿತಿ ಕಾಳೇಗೌಡ ನಾಗವಾರ, ಬಂಗಾರಪ್ಪ ವಿಚಾರ ವೇದಿಕೆಯ ವೇಣುಗೋಪಾಲ್ ನಾಯಕ್, ಮಾಜಿ ಸಂಸದ ಚಂದ್ರಪ್ಪ, ಸಚಿವ ಕೆ.ಎಚ್. ಮುನಿಯಪ್ಪ, ಶಾಸಕರಾದ ಬೇಳೂರು ಗೋಪಾಲಕೃಷ್ಣ, ಬಲ್ಕೀಶ್ ಬಾನು, ಸಚಿವರಾದ ಮಧು ಬಂಗಾರಪ್ಪ, ಸಂತೋಷ್ ಲಾಡ್, ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್ ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ತಿಲಕ್ ಕುಮಾರ್, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಆರ್.ಎಂ. ಮಂಜುನಾಥ್ ಗೌಡ, ಅಲೆಮಾರಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ಭಾಗವಹಿಸಿದ್ದರು

ಹಂಪಿಯಲ್ಲಿ ಪ್ರವಾಸಿಗ ನಾಪತ್ತೆ

ಹೊಪಸೇಟೆ (ವಿಜಯನಗರ): ಮಹಾರಾಷ್ಟ್ರದ ಕೊಲ್ಲಾಪುರದಿಂದ ಹಂಪಿಗೆ ಪ್ರವಾಸ ಬಂದಿದ್ದ ಕುಟುಂಬವೊಂದರ ಸದಸ್ಯ, 20 ವರ್ಷದ ಆದಿತ್ಯ ಕುಮಾರ ಪ್ರಜಾಪತಿ ಅವರು 2 ದಿನದಿಂದ ನಾಪತ್ತೆ ಆಗಿರುವ ಕುರಿತು ಶನಿವಾರ ಹಂಪಿ ಪ್ರವಾಸಿ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ.

ಆದಿತ್ಯ ಕುಮಾರ

ಹಂಪಿಯ ವರಾಹ ದೇವಸ್ಥಾನದ ಹತ್ತಿರ ಮಧ್ಯಾಹ್ನ ಆದಿತ್ಯ ಕುಮಾರ ನಾಪತ್ತೆಯಾಗಿದ್ದಾರೆ ಎಂದು ಯುವಕನ ತಂದೆ ಕ್ಯಾಲಿಕುಮಾರ ಪ್ರಜಾಪತಿ ದೂರಿನಲ್ಲಿ ತಿಳಿಸಿದ್ದಾರೆ.

‘ಯುವಕನಿಗಾಗಿ ಶೋಧ ನಡೆಯುತ್ತಿದೆ. ಭಾನುವಾರ ಸಂಜೆಯವರೆಗೆ ಸುಳಿವು ಸಿಕ್ಕಿಲ್ಲ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

सत्यमेव जयते

ಕೇಂದ್ರೀಯ ವಿಚಕ್ಷಣಾ ಆಯೋಗ
केंद्रीय सतर्कता आयोग

CENTRAL VIGILANCE COMMISSION

ವಿಚಕ್ಷಣಾ ಜಾಗೃತಿ ಸಪ್ತಾಹ
सतर्कता जागरूकता सप्ताह
2025

ವಿಚಕ್ಷಣೆ: ನಮ್ಮ ಆಂತರಿಕ ಹೊಣೆಗಾರಿಕೆ
सतर्कता : हमारी साझा जिम्मेदारी

ಅಕ್ಟೋಬರ್ 27 ರಿಂದ ನವೆಂಬರ್ 2ರವರೆಗೆ | 27 अक्टूबर - 2 नवंबर

ಸಮಗ್ರತೆಯ ಸಂಕಲ್ಪಕ್ಕಾಗಿ
pledge.cvc.nic.in

ದೂರು ಸಲ್ಲಿಸಲು
portal.cvc.gov.in

cbc59101/13/0001/2526

ಸತರ್ಕತಾ ಭವನ, ಬ್ಲಾಕ್-ಎ, ಜಿಪಿಒ ಕಾಂಪ್ಲೆಕ್ಸ್, ಐಎನ್‌ಎ, ನವದೆಹಲಿ-110023 www.cvc.gov.in



ಶುಲ್ಕ ಸಮಸ್ಯೆಯೇ? ದೂರು ಕೊಡಿ

ವೃತ್ತಿಪರ ಶಿಕ್ಷಣದ ವಿದ್ಯಾರ್ಥಿಗಳು ಮತ್ತು ಕಾಲೇಜು ಆಡಳಿತ ಮಂಡಳಿಗಳ ನಡುವೆ ಶುಲ್ಕ ನೀಡಿಕೆಗೆ ಸಂಬಂಧಿಸಿದಂತೆ ಉದ್ಭವವಾಗುವ ಸಮಸ್ಯೆಗಳನ್ನು 'ಶುಲ್ಕ ನಿಯಂತ್ರಣ ಸಮಿತಿ'ಯ ಮಧ್ಯಸ್ಥಿಕೆಯಲ್ಲಿ ಹೇಗೆ ಬಗೆಹರಿಸಿಕೊಳ್ಳಬಹುದು ಎಂಬುದನ್ನು ವಿವರಿಸಿದ್ದಾರೆ

ಉಮೇಶ ಭಟ್ಟ ಪಿ.ಎಚ್.

ಬೆಂಗಳೂರಿನ ಕಾಲೇಜೊಂದರಲ್ಲಿ ಮ್ಯಾನೇಜ್‌ಮೆಂಟ್ ಕೋಟಾದಡಿ ಎಂಬಿಎಗೆ ಪ್ರವೇಶ ಪಡೆದಿದ್ದ ವಿದ್ಯಾರ್ಥಿ, ₹4.50 ಲಕ್ಷವನ್ನು ಕಾಲೇಜು ಅಭಿವೃದ್ಧಿಗೆಂದು ಪಾವತಿಸಿದ್ದ. ಬಳಿಕ ಬೇರೆ ಕೋರ್ಸ್‌ಗೆ ಸೇರುವ ಅವಕಾಶ ಬಂದಿದ್ದರಿಂದ ಇಲ್ಲಿ ಬಿಡುವ ಸನ್ನಿವೇಶ ಎದುರಾಯಿತು. ಕಾಲೇಜಿನವರು 'ನಿಮ್ಮ ಕಾರಣಕ್ಕೆ ಬೇರೆ ಕಡೆಗೆ ಹೋಗುತ್ತಿದ್ದೀರಿ. ನಾವು ಹಣ ವಾಪಸ್ ಕೊಡಲಾಗದು' ಎಂದರು. ಶುಲ್ಕ ನಿಯಂತ್ರಣ ಸಮಿತಿಯು ವಿದ್ಯಾರ್ಥಿಯ ದೂರು ಸ್ವೀಕರಿಸಿ, ಇಬ್ಬರಿಂದಲೂ ಹೇಳಿಕೆ ಪಡೆಯಿತು. ಕಾಲೇಜಿನವರ ಲೋಪ ಇಲ್ಲದೇ ಇದ್ದರೂ ವಿದ್ಯಾರ್ಥಿಯ ಆರ್ಥಿಕ ಸ್ಥಿತಿಯ ದೃಷ್ಟಿಯಿಂದ ₹2.25 ಲಕ್ಷ ಹಿಂದಿರುಗಿಸಲು ಆದೇಶಿಸಿತು. ಆಡಳಿತ ಮಂಡಳಿಯು ಒಪ್ಪಿ ಅಷ್ಟು ಹಣವನ್ನು ಹಿಂದಿರುಗಿಸಿತು.

ಶಿವಮೊಗ್ಗದ ವಿದ್ಯಾರ್ಥಿನಿಯೊಬ್ಬಳು ಖಾಸಗಿ ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶ ಪಡೆದಳು. ವೈದ್ಯಕೀಯ ಕೋರ್ಸ್ ಆಕೆಗೆ ಇಷ್ಟವಾಗದೆ ಮನೋ ಸಮಸ್ಯೆಯಿಂದ ಬಳಲತೊಡಗಿದಳು. ಮೊದಲ ವರ್ಷಕ್ಕೆ ಕಟ್ಟಿದ್ದ ₹12 ಲಕ್ಷ ಶುಲ್ಕ ವಾಪಸ್ ನೀಡುವಂತೆ ಪೋಷಕರು ಕೋರಿದರು. ಆದರೆ ಆಡಳಿತ ಮಂಡಳಿ, 'ಮಧ್ಯದಲ್ಲಿ ಬಿಟ್ಟು ಹೋದರೆ ನಮಗೆ ತೊಂದರೆಯಾಗುತ್ತದೆ, ಉಳಿದ ನಾಲ್ಕು ವರ್ಷದ ₹48 ಲಕ್ಷ ಪಾವತಿಸಿದರೆ ಆಕೆಯ ದಾಖಲೆ ನೀಡುತ್ತೇವೆ' ಎಂದು ಹೇಳಿತು. ಕೊನೆಗೆ ಪೋಷಕರು ಶುಲ್ಕ ನಿಯಂತ್ರಣ ಸಮಿತಿಗೆ ಮೊರೆ ಹೋದರು. ಸಮಿತಿಯು ವಿಚಾರಣೆ ನಡೆಸಿ, ಆಕೆಗೆ ಕೋರ್ಸ್ ಇಷ್ಟವಾಗದಿರುವುದರಿಂದ, ಜೊತೆಗೆ ಪ್ರವೇಶ ಪಡೆದು ಅರ್ಧ ವರ್ಷವೂ ಮುಗಿದಿಲ್ಲವಾದ್ದರಿಂದ ಒಂದು ವರ್ಷದ ಶುಲ್ಕದಲ್ಲಿ ಇಂತಿಷ್ಟು ಕಡಿತ ಮಾಡಿಕೊಂಡು ಉಳಿದ ಹಣದ ಜೊತೆಗೆ ದಾಖಲೆಯನ್ನೂ ನೀಡಬೇಕೆಂದು ಸೂಚಿಸಿತು. ಆಡಳಿತ ಮಂಡಳಿಯ ವಿವರಣೆಗೆ ಸಮಿತಿ ಬಗ್ಗಲಿಲ್ಲ. ಆಗ ಸಂಸ್ಥೆಯು ಒಪ್ಪಿ ಹಣ ಪಾವತಿಸಿತು. ವಿದ್ಯಾರ್ಥಿನಿ ಈಗ ತನ್ನಿಚ್ಛೆಯಂತೆ ಮೈಸೂರಿನಲ್ಲಿ ಸಂಗೀತ ಶಿಕ್ಷಣ ಪಡೆಯುತ್ತಿದ್ದಾಳೆ.

ಇವು ಒಂದೆರಡು ಉದಾಹರಣೆಗಳು ಮಾತ್ರ. ರಾಜ್ಯದಲ್ಲಿ ವೃತ್ತಿಪರ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದ ಇಂತಹ ನೂರಾರು ಪ್ರಕರಣಗಳಿವೆ. ಅವುಗಳಲ್ಲಿ ಹೆಚ್ಚಿನವರು ನ್ಯಾಯ ಪಡೆದುಕೊಂಡು ವೃತ್ತಿಪರ ಶಿಕ್ಷಣವನ್ನು ಪೂರೈಸಿದ್ದಾರೆ.

ಸರ್ಕಾರ ನಿಗದಿಪಡಿಸಿದ ಶುಲ್ಕವಲ್ಲದೆ ಹೆಚ್ಚುವರಿ ಹಣಕ್ಕೆ ಕಾಲೇಜುಗಳು ಬೇಡಿಕೆ ಇಡುವುದು, ರಸೀದಿ ನೀಡದೇ ಹಣ ಪಡೆಯುವುದು, ಕೋರ್ಸ್ ಅವಧಿಗೆ ಮುನ್ನವೇ ಸಂಪೂರ್ಣ ಶುಲ್ಕಕ್ಕೆ ಬೇಡಿಕೆ ಇಟ್ಟು, ಸಂಸ್ಥೆಯನ್ನು ಬಿಡುವಂತಹ ಸನ್ನಿವೇಶ ನಿರ್ಮಾಣವಾದರೆ, ಪಾವತಿಸಿದ ಹಣ ವಾಪಸ್ ನೀಡದೇ ಇರುವಂತಹ ಸನ್ನಿವೇಶಗಳಿದ್ದರೆ ಕಾಲೇಜುಗಳ ವಿರುದ್ಧ ವಿದ್ಯಾರ್ಥಿಗಳು ದೂರು ಸಲ್ಲಿಸಬಹುದು.

ಇಂತಹ ಪ್ರಕರಣಗಳ ವಿಚಾರಣೆ ನಡೆಸಿ, ಪೋಷಕರು ಹಾಗೂ ಮಕ್ಕಳ ಮೇಲಿನ ಹೊರೆ ತಪ್ಪಿಸುವುದರ ಜತೆಗೆ, ಕಾಲೇಜು ಶಿಕ್ಷಣ ಮಂಡಳಿಗಳಿಗೆ ಮೂಗುದಾರ ಹಾಕಲೆಂದೇ ಕರ್ನಾಟಕ ವೃತ್ತಿಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ–2006ರ ಅಡಿಯಲ್ಲಿ 'ಶುಲ್ಕ ನಿಯಂತ್ರಣ ಸಮಿತಿ'ಯನ್ನು (ಎಫ್‌ಆರ್‌ಸಿ) ರಚಿಸಲಾಗಿದೆ. 19 ವರ್ಷಗಳಿಂದ ಈ ಸಮಿತಿ ಇದೆಯಾದರೂ ಮೂರ್ನಾಲ್ಕು ವರ್ಷಗಳಿಂದ ಸಕ್ರಿಯವಾಗಿದೆ.

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯವರ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯು ವರ್ಷಕ್ಕೆ ನೂರಾರು ದೂರುಗಳನ್ನು ಸ್ವೀಕರಿಸುತ್ತಿದೆ. ಆನ್‌ಲೈನ್‌ನಲ್ಲೂ ದೂರು ದಾಖಲಿಸಲು ಅವಕಾಶವಿದೆ. ಈ ವರ್ಷ ಈವರೆಗೆ 400ಕ್ಕೂ ಅಧಿಕ ಪ್ರಕರಣಗಳು ದಾಖಲಾಗಿ, ಅವುಗಳಲ್ಲಿ 200ರಷ್ಟು ಪ್ರಕರಣಗಳು ಇತ್ಯರ್ಥವಾಗಿವೆ.

ಸಮಸ್ಯೆ ಎದುರಿಸುತ್ತಿರುವವರು ತಮ್ಮ ಪ್ರವೇಶ, ನೀಡಿದ ಶುಲ್ಕ, ರಸೀದಿಯನ್ನು ಒಳಗೊಂಡ ದಾಖಲೆಗಳೊಂದಿಗೆ ದೂರು ನೀಡಬೇಕು. ಮೊದಲು ಎರಡು ಕಡೆಯವರಿಗೂ ನೋಟಿಸ್ ನೀಡಿ ಹೇಳಿಕೆ ದಾಖಲಿಸಲಾಗುತ್ತದೆ. ದೂರಿನ ವಸ್ತುಸ್ಥಿತಿ ಅರಿತ ನಂತರ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರ ಸಮ್ಮುಖದಲ್ಲಿ ವಿಚಾರಣೆ ನಡೆಸಿ ನಿರ್ದೇಶನ ನೀಡಲಾಗುತ್ತದೆ. ಇದನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ), ತಾಂತ್ರಿಕ ಶಿಕ್ಷಣ ವಿಭಾಗ ಇಲ್ಲವೇ ವೈದ್ಯಕೀಯ ಶಿಕ್ಷಣ ಇಲಾಖೆಯ ಮುಖ್ಯಸ್ಥರಿಗೂ ರವಾನಿಸಲಾಗುತ್ತದೆ. ಸಮಿತಿ ನೀಡಿದ ಸೂಚನೆಯನ್ನು ನಿಗದಿತ ಸಮಯದೊಳಗೆ ಪಾಲಿಸದೇ ಇದ್ದರೆ ಮಾನ್ಯತೆ ರದ್ದುಪಡಿಸುವಂತಹ ಎಚ್ಚರಿಕೆಯನ್ನು ಸಹ ನೀಡಲಾಗುತ್ತದೆ. ಕೆಲವರು ಮೇಲ್ಮನವಿಗೆ ಮೊರೆ ಹೋದರೆ, ಹೆಚ್ಚು ಸಂಸ್ಥೆಗಳು ಹಾಗೂ ಪೋಷಕರು ಸಮಿತಿಯ ಆದೇಶವನ್ನು ಪಾಲಿಸುವುದು ಉಂಟು.

'ಎಂಜಿನಿಯರಿಂಗ್, ವೈದ್ಯಕೀಯ ಕೋರ್ಸ್‌ಗಳ ಜತೆಯಲ್ಲಿಯೇ ಬಿ.ಎಸ್ಸಿ ನರ್ಸಿಂಗ್, ಫಾರ್ಮ ಕೋರ್ಸ್‌ಗಳಿಗೆ ಬೇಡಿಕೆ ಹೆಚ್ಚಿದೆ. ಈ ಕೋರ್ಸ್‌ಗಳ ಮೇಲೆ ನಿಯಂತ್ರಣ ಬೇಕಿದೆ. ಕೆಲವರು ಭಯದಿಂದ ಹೆಚ್ಚುವರಿ ಶುಲ್ಕ ಭರಿಸುತ್ತಾರೆ. ದೂರು ನೀಡಿದರೆ, ಮುಂದೆ ಅಲ್ಲಿಯೇ ವ್ಯಾಸಂಗ ಮಾಡಬೇಕಾಗಿರುವುದರಿಂದ ಭವಿಷ್ಯಕ್ಕೆ ತೊಂದರೆಯಾಗಬಹುದು ಎನ್ನುವ ಭಯವೂ ಇರುತ್ತದೆ. ಆದರೆ ಕೋರ್ಸ್‌ಗೆ ಸೇರಿದಾಗ ಮಾತ್ರವಲ್ಲ ಮುಗಿದ ಮೇಲೂ ಸೂಕ್ತ ದಾಖಲೆಗಳೊಂದಿಗೆ ಸಮಿತಿಗೆ ದೂರು ನೀಡಬಹುದು' ಎಂದು ಹೇಳುತ್ತಾರೆ ಸಮಿತಿಯ ಅಧ್ಯಕ್ಷ ಬಿ.ಶ್ರೀನಿವಾಸ ಗೌಡ.

ಕಾಲೇಜುಗಳಿಂದಲೇ ಜಾಗೃತಿಗೆ ಶಿಫಾರಸು



ಸ್ಥಳೀಯರು ಮಾತ್ರವಲ್ಲದೆ ವೃತ್ತಿಪರ ಶಿಕ್ಷಣ ಪಡೆಯಲು ಕರ್ನಾಟಕಕ್ಕೆ ಬರುವ ಕೇರಳ, ತಮಿಳುನಾಡು, ರಾಜಸ್ಥಾನ, ಬಿಹಾರದವರೂ ಕಾಲೇಜುಗಳ ಶುಲ್ಕದ ಜಾಲದಲ್ಲಿ ಸಿಲುಕಿದ್ದಿದೆ. ಸಮಿತಿಯು ಇಂತಹ ಹಲವಾರು ಪ್ರಕರಣಗಳನ್ನು ಬಗೆಹರಿಸಿ ಹೆಚ್ಚುವರಿ ಶುಲ್ಕವನ್ನು ಹಿಂದಿರುಗಿಸುವಂತೆ ಮಾಡಿದೆ. ಕೆಲವು ಆಡಳಿತ ಮಂಡಳಿಗಳು ಆದೇಶ ನೀಡುವ ಮುನ್ನವೇ ಸಮಿತಿಯ ಸೂಚನೆಗೆ ಸಮ್ಮತಿಸಿ ಹೆಚ್ಚುವರಿ ಶುಲ್ಕವನ್ನು ಹಿಂದಿರುಗಿಸಿದ ಉದಾಹರಣೆಗಳಿವೆ. ಆದರೆ ಇನ್ನು ಕೆಲವು ಪ್ರಕರಣಗಳಲ್ಲಿ ಆದೇಶವನ್ನು ಜಾರಿ ಮಾಡಲೇಬೇಕಾಗುತ್ತದೆ.

ಎಂಜಿನಿಯರಿಂಗ್, ವೈದ್ಯಕೀಯ ಸಂಬಂಧಿತ ವೃತ್ತಿಪರ ಶಿಕ್ಷಣ ಸಂಸ್ಥೆಗಳು ಒಮ್ಮತದ ಒಪ್ಪಂದದ ವಿವರವನ್ನು ತಮ್ಮ ವೆಬ್‌ಸೈಟ್‌ಗಳಲ್ಲಿ ಕಡ್ಡಾಯವಾಗಿ ಪ್ರಕಟಿಸಬೇಕು. ಹೆಚ್ಚುವರಿ ಶುಲ್ಕ ಸಂಗ್ರಹದ ಬಗ್ಗೆ ದೂರು ಹೊಂದಿರುವ ವಿದ್ಯಾರ್ಥಿಗಳು ಪರಿಹಾರಕ್ಕಾಗಿ ಸಮಿತಿಯನ್ನು ಸಂಪರ್ಕಿಸಬಹುದು ಎನ್ನುವ ಒಪ್ಪಂದವನ್ನು ಪ್ರವೇಶದ ವೇಳೆಯೇ ಮಾಡಿಕೊಳ್ಳುವಂತೆ ಶಿಫಾರಸು ಮಾಡಲಾಗಿದೆ.

ಬಿ.ಶ್ರೀನಿವಾಸ ಗೌಡ, ಅಧ್ಯಕ್ಷ, ವೃತ್ತಿಶಿಕ್ಷಣ 'ಶುಲ್ಕ ನಿಯಂತ್ರಣ ಸಮಿತಿ'

ಇಲ್ಲಿದೆ ಕಚೇರಿ

ಅಧ್ಯಕ್ಷರು, ಶುಲ್ಕ ನಿಯಂತ್ರಣ ಸಮಿತಿ
ಕೆಇಎ ಕಟ್ಟಡ, 2ನೇ ಮಹಡಿ 18ನೇ ಅಡ್ಡರಸ್ತೆ, ಮಲ್ಲೇಶ್ವರಂ
ಬೆಂಗಳೂರು–560012
ಇ–ಮೇಲ್: frc.kea@gmail.com
ಕಚೇರಿ ದೂರವಾಣಿ ಸಂಖ್ಯೆ: 080–23442599

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಷಿಪ್

1. ವಿಡಿಯೊ ಎಡಿಟಿಂಗ್/ಮೇಕಿಂಗ್

ಈಸ್ಟ್‌ಕಾಮರ್ಸ್ ಮಾರ್ಕೆಟ್‌ಪ್ಲೇಸ್ ಎಲ್‌ಎಲ್‌ಸಿ ಸಂಸ್ಥೆಯು ವಿಡಿಯೊ ಎಡಿಟಿಂಗ್/ಮೇಕಿಂಗ್ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಅಡೋಬ್ ಆಫ್ಟರ್ ಎಫೆಕ್ಟ್ಸ್, ಅಡೋಬ್ ಪ್ರೀಮಿಯರ್ ಪ್ರೊ, ಫೈನಲ್ ಕಟ್ ಪ್ರೊ, ವಿಡಿಯೊ ಎಡಿಟಿಂಗ್ ಮತ್ತು ವಿಡಿಯೊ ಮೇಕಿಂಗ್‌ನಲ್ಲಿ ಜ್ಞಾನ ಹೊಂದಿರುವ ವಿದ್ಯಾರ್ಥಿಗಳು ನವೆಂಬರ್ 20ರೊಳಗೆ ಅರ್ಜಿ ಸಲ್ಲಿಸಬಹುದು.

ಸ್ಟೈಪೆಂಡ್: ₹15,000–25,000.
ಸಂಪರ್ಕ: https://shorturl.at/5JF0f.

ಬೆಂಗಳೂರು ಕೇಂದ್ರಿತ ಇಂಟರ್ನ್‌ಷಿಪ್

2. ಇನ್‌ಸೈಡ್ ಸೇಲ್ಸ್

ಏರ್‌ಟ್ರೈಬ್ ಸಂಸ್ಥೆಯು ಇನ್‌ಸೈಡ್ ಸೇಲ್ಸ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ವಿದ್ಯಾರ್ಥಿಗಳು ಬಿಸಿನೆಸ್ ಡೆವಲಪ್‌ಮೆಂಟ್, ಎಫೆಕ್ಟಿವ್ ಕಮ್ಯುನಿಕೇಷನ್, ಇಂಟರ್‌ಪರ್ಸನಲ್ ಸ್ಕಿಲ್ಸ್, ನೆಟ್‌ವರ್ಕಿಂಗ್, ಆಪರೇಷನ್ಸ್, ಸೇಲ್ಸ್ ಮತ್ತು ಸೇಲ್ಸ್ ಸ್ಟ್ರ್ಯಾಟಜಿಯಲ್ಲಿ ನಿಪುಣರಾಗಿರಬೇಕು. ನವೆಂಬರ್ 20ರೊಳಗೆ ಅರ್ಜಿ ಸಲ್ಲಿಸಬೇಕು. **ಸ್ಟೈಪೆಂಡ್:** ₹15,000–₹20,000.
ಸಂಪರ್ಕ: https://shorturl.at/weJbY

ತಾರತಮ್ಯದ ಆಕ್ಷೇಪ: ಇದೆ ಉತ್ತರ

ಸಮಾಧಾನ

ಡಾ. ಡಿ.ಎಂ. ಹೆಗಡೆ, ಸಮಾಲೋಚಕ

- **ಮಗಳು ಚೆನ್ನಾಗಿ ಓದುತ್ತಾಳೆ. ಮಗ ಸರಿಯಾಗಿ ಓದುವುದಿಲ್ಲ. ಆದರೆ ಮಗಳಿಗೆ ನಾವು ತಾರತಮ್ಯ ಮಾಡುತ್ತಿದ್ದೇವೆ ಎಂಬ ಭಾವನೆ ಇದೆ. ಅಣ್ಣನಿಗೊಂದು ನ್ಯಾಯ, ನನಗೊಂದು ರೀತಿಯ ನ್ಯಾಯ ಎಂದು ಸದಾ ವಾದಿಸುತ್ತಾಳೆ. ಯಾಕೆ ಹೀಗೆ ಹೋಲಿಕೆ ಮಾಡಿಕೊಂಡು ಮನಸ್ಸು ಹಾಳು ಮಾಡಿಕೊಳ್ಳುತ್ತಾಳೆ ಎಂಬುದೇ ತಿಳಿಯುವುದಿಲ್ಲ. ಅವಳನ್ನು ಇಂತಹ ಭಾವನೆಯಿಂದ ಹೊರತರುವುದು ಹೇಗೆ?**

ರಾಜೇಶ್ ಗಟ್ಟಿ, ಮಂಗಳೂರು

ಅಪ್ಪ–ಅಮ್ಮ ತನ್ನ ಅಣ್ಣನನ್ನು ಹೆಚ್ಚು ಪ್ರೀತಿಸುತ್ತಾರೆ, ಅವನಿಗೆ ಹೆಚ್ಚು ಮಹತ್ವ ಕೊಡುತ್ತಾರೆ ಎಂದು ನಿಮ್ಮ ಮಗಳಿಗೆ ಅನ್ನಿಸಿರುವುದರಲ್ಲಿ ವಿಶೇಷವೇನಿಲ್ಲ. ಇದು ಮಕ್ಕಳಿರುವ ಬಹುತೇಕ ಸಂಸಾರಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಸಮಸ್ಯೆ. ತನ್ನನ್ನು ಇತರರೊಂದಿಗೆ ಹೋಲಿಸಿಕೊಂಡು ಹಿಗ್ಗುವುದು ಅಥವಾ ಕುಗ್ಗುವುದು ಮನುಷ್ಯರ ಸಹಜ ಸ್ವಭಾವ. ಇದಕ್ಕೆ ನೀವು ಚಿಂತಿತರಾಗಬೇಕಿಲ್ಲ.

ಪಾಲಕರು ಕೂಡ ತಮ್ಮ ಮಕ್ಕಳ ಅರ್ಹತೆ, ವಿಶೇಷ ಸ್ವಭಾವ ಹಾಗೂ ವ್ಯಕ್ತಿತ್ವದ ಕಾರಣಕ್ಕೆ ಅವರೊಂದಿಗೆ ಭಿನ್ನವಾಗಿ ವರ್ತಿಸುವುದು ಅಸಹಜವೇನಲ್ಲ. ಮಗ ದೊಡ್ಡವನು. ಅವನಿಗೆ ಜವಾಬ್ದಾರಿಯನ್ನು ಕಲಿಸುವ ಸಲುವಾಗಿ ನೀವು ಅವನೊಂದಿಗೆ ಬೇರೆ ರೀತಿಯಲ್ಲಿ ವರ್ತಿಸಿರಬಹುದು. ಅವನ ಆಸಕ್ತಿಗೆ ಅನುಸಾರವಾಗಿ ಪ್ರೋತ್ಸಾಹಿಸಿರಬಹುದು. ಮಗಳಿಗೆ ಕೆಲವು ಕಠಿಣ ನಿಯಮಗಳನ್ನು ವಿಧಿಸಿರಬಹುದು. ಅದನ್ನು ಅವಳು ಬೇರೆಯದೇ ರೀತಿಯಲ್ಲಿ ಅರ್ಥ ಮಾಡಿಕೊಂಡಿರಬಹುದು. ಅವನು ಚೆನ್ನಾಗಿ ಓದದಿದ್ದರೂ ಮನೆಯಲ್ಲಿ ಅವನಿಗೆ ತನಗಿಂತ ಹೆಚ್ಚು ಗೌರವ ಸಿಗುತ್ತದೆ ಎಂದು ಅನ್ನಿಸಿರಬಹುದು. ಅವಳಿಗೆ ತಾನು ಹೆಣ್ಣುಮಗು, ಹಾಗಾಗಿ ಪಾಲಕರು ತನಗೆ ಕಡಿಮೆ ಪ್ರೀತಿ ತೋರಿಸುತ್ತಾರೆ ಎಂದುಕೊಂಡಿರಬಹುದು. ಇಂಥದ್ದಕ್ಕೆಲ್ಲ, ಆಕೆ ನೋಡುವ ಸಿನಿಮಾಗಳು, ಸಾಮಾಜಿಕ ಮಾಧ್ಯಮದ ಪೋಸ್ಟ್‌ಗಳು, ಹಿರಿಯರು ಹೇಳಿದ ಮಾತುಗಳು ಅಥವಾ ಕೆಲವು ಪ್ರಕರಣಗಳು ಕಾರಣವಾಗಿರಬಹುದು. ಹಾಗಾಗಿ, ಪಾಲಕರಿಂದ ಅವಳು ಬೇರೆಯದನ್ನೇ ನಿರೀಕ್ಷಿಸುತ್ತಿರಬಹುದು. ಅದನ್ನು ಸ್ಪಷ್ಟವಾಗಿ ಹೇಳಲು ಅವಳಿಂದ ಸಾಧ್ಯವಾಗಿಲ್ಲದೇ ಇರಬಹುದು.

ಆದರೆ ಇಂಥ ಸಮಸ್ಯೆಯ ಅರಿವಾಗುತ್ತಿದ್ದ ಹಾಗೆಯೇ ನೀವು ಜಾಗೃತರಾಗಬೇಕು. ಅವಳ ಅನಿಸಿಕೆಯನ್ನು ತಕ್ಷಣಕ್ಕೆ ಖಂಡಿಸಬಾರದು. ಸಮಾಧಾನದಿಂದ, ಶಾಂತವಾಗಿ, ಪ್ರೀತಿಯಿಂದ ಅವಳೊಂದಿಗೆ ಮಾತನಾಡಬೇಕು. ನೀವು ಯಾವ ಸಂದರ್ಭದಲ್ಲಿ ತಾರತಮ್ಯ ಮಾಡಿದ್ದೀರಿ ಎನ್ನುವುದನ್ನು ತಿಳಿಸುವಂತೆ ಅವಳನ್ನು ಕೇಳಿ. ಆ ಪ್ರಕರಣಗಳಲ್ಲಿ ನಿಮ್ಮ ವರ್ತನೆಯಲ್ಲಿದ್ದ ದೋಷವನ್ನು ಒಪ್ಪಿಕೊಳ್ಳಿ ಮತ್ತು ಅದು ಪುನರಾವರ್ತನೆಯಾಗದಂತೆ ಇರುವುದಾಗಿ ಅವಳಿಗೆ ಹೇಳಿ. ಅವಳ ನಿರೀಕ್ಷೆಯನ್ನು ಗೌರವಿಸಿ. ವಯಸ್ಸಿಗೆ ತಕ್ಕಂತೆ ಅವಳಿಗೆ ಕೊಡಬೇಕಾದಷ್ಟು ಪ್ರಾಮುಖ್ಯತೆ, ಪ್ರೀತಿ, ಕಾಳಜಿ ಹಾಗೂ ಸ್ವಾತಂತ್ರ್ಯವನ್ನು ಕೊಡುತ್ತಿರುವ ಬಗ್ಗೆ ಮುಕ್ತವಾಗಿ ತಿಳಿಸಿ ಹೇಳಿ.

ಮಗನಿಗೂ ಮಗಳಿಗೂ ಇರುವ ಸಹಜವಾದ ವ್ಯತ್ಯಾಸವನ್ನು ಸಮಯಾವಕಾಶ ಆದಾಗ ವಿವರಿಸಿ ಹೇಳಿ. ಮನೆಯಲ್ಲಿ ಇಬ್ಬರೂ ಮಕ್ಕಳ ಅಗತ್ಯವನ್ನು ಹಾಗೂ ಅವರ ಏಳಿಗೆಗಾಗಿ ನೀವು ಶ್ರಮಿಸುತ್ತಿರುವುದನ್ನು ವಿವರಿಸಿ. ಇಬ್ಬರನ್ನೂ ನೀವು ಸಮಾನವಾಗಿ ಪ್ರೀತಿಸುವುದನ್ನು, ಎಲ್ಲರೂ ಒಟ್ಟಾಗಿ, ಪರಸ್ಪರ ಪ್ರೀತಿ, ವಿಶ್ವಾಸದಿಂದ ಇರಬೇಕಾದ ಅಗತ್ಯವನ್ನು ತಿಳಿಸಿ. ಮನೆಯಲ್ಲಿರುವ ಎಲ್ಲರೂ ಸಾಧ್ಯವಾದಷ್ಟೂ ಸಹಜವಾಗಿಯೂ ಮುಕ್ತವಾಗಿಯೂ ಇರಿ. ದಿನಕ್ಕೆ ಒಂದು ಸಲವಾದರೂ ಎಲ್ಲರೂ ಒಟ್ಟಿಗೆ ಕುಳಿತು ಊಟ ಮಾಡಿ. ತಿಂಗಳಿಗೆ ಒಮ್ಮೆಯಾದರೂ ಎಲ್ಲರೂ ಒಟ್ಟಿಗೆ ಅರ್ಧದಿನದ ಮಟ್ಟಿಗಾದರೂ ಸರಿ ಹೊರಗೆಲ್ಲಾದರೂ ಹೋಗಿ ಬನ್ನಿ.

ಪಾಲಕರು ಬಹಳಷ್ಟು ಬಾರಿ ಮಕ್ಕಳಿಂದಲೂ ಕಲಿಯುವುದು ಇರುತ್ತದೆ. ಅಂತಹ ಅವಕಾಶಗಳ ಬಗ್ಗೆ ನೀವು ಉತ್ಸುಕರಾಗಿರಬೇಕು. ಎಲ್ಲ ಸಂದರ್ಭಗಳಲ್ಲಿಯೂ ಪಾಲಕರು ಹೇಳಿದ್ದೇ ಸರಿ, ಮಕ್ಕಳು ಹೇಳಿದ್ದು ತಪ್ಪು ಎನ್ನುವುದು ಸರಿಯಲ್ಲ. ಇವಿಷ್ಟನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಮಗಳನ್ನು ಹೆಚ್ಚು ಕಾಳಜಿಯಿಂದ, ಆಸ್ಥೆಯಿಂದ ಪ್ರೀತಿಸಿ, ಪ್ರೋತ್ಸಾಹಿಸಿ.

ಬೃಹತ್ ವಿದ್ಯಾರ್ಥಿವೇತನಕ್ಕೆ ರಾಷ್ಟ್ರಮಟ್ಟದ ಪರೀಕ್ಷೆ

ಅಸೋಸಿಯೇಶನ್ ಆಫ್ ಮುಸ್ಲಿಂ ಪ್ರೊಫೆಷನಲ್ಸ್ (ಎಎಂಪಿ) ಸಂಸ್ಥೆಯು ಬೃಹತ್ ವಿದ್ಯಾರ್ಥಿ ವೇತನ ಯೋಜನೆ ರೂಪಿಸಿದೆ. ಅದಕ್ಕಾಗಿ ರಾಷ್ಟ್ರ ಮಟ್ಟದಲ್ಲಿ ಪ್ರತಿಭಾ ಶೋಧ ಪರೀಕ್ಷೆ ನಡೆಸಲಿದೆ. ಸಾಮಾನ್ಯ ಜ್ಞಾನ, ನೀಟ್, ಐಐಟಿ–ಜೆಇಇ ಮತ್ತು ಸಾಮಾನ್ಯ ಕಾನೂನು ಪ್ರವೇಶ ಪರೀಕ್ಷೆಗೆ (ಸಿಎಲ್‌ಎಟಿ) ವಿದ್ಯಾರ್ಥಿಗಳ ಸಿದ್ಧತೆಯನ್ನು ಗುರಿಯಾಗಿಟ್ಟು ಈ ಪರೀಕ್ಷೆಯನ್ನು ನಡೆಸಲಾಗುತ್ತದೆ.

ನಗದು ಬಹುಮಾನ ಹಾಗೂ ಇತರ ಶೈಕ್ಷಣಿಕ ಸೌಲಭ್ಯಗಳನ್ನು ಪಡೆಯಲು ಸಹ ಈ ಪರೀಕ್ಷೆಯು ಅವಕಾಶ ಮಾಡಿಕೊಡುತ್ತದೆ.

ಮೂರು ವಿಭಾಗಗಳಲ್ಲಿ ಪರೀಕ್ಷೆ ನಡೆಯುತ್ತದೆ

1. ಶಾಲೆಗಳು (8, 9 ಮತ್ತು 10ನೇ ತರಗತಿ)
2. ಜೂನಿಯರ್/ ಇಂಟರ್‌ಮೀಡಿಯಟ್ ಕಾಲೇಜುಗಳು (11 ಮತ್ತು 12ನೇ ತರಗತಿ)
3. ಪದವಿ ಕಾಲೇಜುಗಳು.

ಏನೆಲ್ಲಾ ಸೌಲಭ್ಯ ಸಿಗಲಿದೆ?

- 500ಕ್ಕೂ ಹೆಚ್ಚು ಪ್ರತಿಭಾಶಾಲಿಗಳಿಗೆ ಐಐಟಿ–ಜೆಇಇ, ನೀಟ್ ತರಬೇತಿಗೆ ಶೇ 100ರಷ್ಟು ವಿದ್ಯಾರ್ಥಿವೇತನ
- ಉನ್ನತ ಅಂಕ ಗಳಿಸಿದ ಎಲ್ಲ ವಿಭಾಗದ ವಿದ್ಯಾರ್ಥಿಗಳಿಗೂ ನಗದು ಬಹುಮಾನ
- ಅರ್ಹ 500 ಮಂದಿಗೆ ವಾರ್ಷಿಕ ವಿದ್ಯಾರ್ಥಿವೇತನ
- ಎಲ್ಲ ವಿದ್ಯಾರ್ಥಿಗಳಿಗೂ ಇ–ಪ್ರಮಾಣಪತ್ರ ನೀಡಿಕೆ

ಪರೀಕ್ಷೆಯ ದಿನಾಂಕ: ಶನಿವಾರ, ಡಿಸೆಂಬರ್ 13
ನೋಂದಣಿಗೆ ಕೊನೇ ದಿನ: ನವೆಂಬರ್ 25

ಆಸಕ್ತ ವಿದ್ಯಾರ್ಥಿಗಳು ಶುಲ್ಕರಹಿತ ಅರ್ಜಿ ಸಲ್ಲಿಕೆ ಮತ್ತು ಹೆಚ್ಚಿನ ಮಾಹಿತಿಗೆ ಈ ವೆಬ್‌ಸೈಟ್ ಸಂಪರ್ಕಿಸಬಹುದು.
https://www.ampindia.org

ವಿದ್ಯಾರ್ಥಿ ವೇತನ ಕೈಪಿಡಿ

ಮಹೀಂದ್ರ ಬಿಗ್ ಬಾಸ್ ನಯೀ ಪೆಹಚಾನ್

ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವ ಟ್ರ್ಯಾಕ್ಟರ್ ಮೆಕ್ಯಾನಿಕ್‌ಗಳ ಮಕ್ಕಳನ್ನು ಶೈಕ್ಷಣಿಕವಾಗಿ ಬೆಂಬಲಿಸಲು ಅನುವಾಗುವಂತೆ 2025–26ನೇ ಸಾಲಿನ ಈ ವಿದ್ಯಾರ್ಥಿವೇತನ ನೀಡಲಾಗುತ್ತದೆ.

ಅರ್ಹತೆ: 7ರಿಂದ 21 ವರ್ಷ ವಯಸ್ಸಿನವರಾಗಿದ್ದು, ಶಾಲೆ, ಕಾಲೇಜು ಅಥವಾ ವೃತ್ತಿಪರ ಕೋರ್ಸ್‌ಗಳಿಗೆ ದಾಖಲಾಗಿರಬೇಕು. ಹಿಂದಿನ ತರಗತಿ ಅಥವಾ ಸೆಮಿಸ್ಟರ್‌ನಲ್ಲಿ ಶೇ 50ರಷ್ಟು ಅಂಕಗಳನ್ನು ಗಳಿಸಿರಬೇಕು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದವರಿಗೆ ಮೀಸಲಾತಿ ಸೌಲಭ್ಯವಿದೆ.

ಆರ್ಥಿಕ ನೆರವು: ವರ್ಷಕ್ಕೆ ₹6,000
ಅರ್ಜಿ ಸಲ್ಲಿಸಲು ಕೊನೇ ದಿನ: 15-11-2025
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್
ಮಾಹಿತಿಗೆ: Short Url: www.b4s.in/praja/MAMF1

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಇಂಗ್ಲಿಷ್

Dr. B.R. Ambedkar

7. What made Dr. Ambedkar describe the methods of Civil disobedience, Non-cooperation and Satyagraha as the "Grammar of anarchy"?

Ans: Civil Disobedience, Non-Co-operation, and Satyagraha were not done as constitutional methods. Always the public agitations to achieve social justice through the methods of the constitution. So, According to him, the above agitations were called "Grammar of anarchy"

8. How did Dr. Ambedkar and Mahatma Gandhi try to wipe out caste discrimination from India?

Ans: The efforts of Dr. Ambedkar and Gandhi in wiping out caste discrimination and establishing an egalitarian society can be described as two sides of the same coin. In a divided India, suffering from the 'Divide and Rule' tactics of the British, the approaches of Ambedkar and the Mahatma were the unifying forces. If Gandhi tried to abolish the caste system by reminding the upper caste people of their duty towards the oppressed, Ambedkar goaded the oppressed to exercise their right to equality. Thus, together, the two great visionaries were the architects of Modern India with the vision of equality and fraternity.

9. Discuss with your friends and complete the web-chart given below



Ans: 1. Found the Books 2. Fist Law Minister
3. Symbol of Revolt
4. Chairman of the drafting committee
5. The pilot of Indian constitution.

****

The Concert

Share your responses

1. Which word in the first paragraph describes the manner of the girl when she saw the news paper?

Ans:- 'excitedly'

2. Why do you think the mother cautioned the girl?

Ans: Mother cautioned the girl because her son was suffering from cancer. He was in the last stage of his life. His body was very weak and he needed sleep and complete rest. In addition to that, he was also fond of music especially Sitar. If he heard the news, it would disturb him.

3. 'We mustn't miss the chance',

a) What chance did the boy not like to miss? Why? Do you think the boy would get a chance in the future?

Ans: The chance that the boy wouldn't like to miss is listening to Pandit Ravi Shankar's Sitar recital. The boy had always wanted to hear and see Pandit Ravi Shankar, but had never got the chance. We do not know whether the boy would get the chance to hear Ravi Shankar again. We cannot look into the future and say what would happen in the future. The boy may or may not get the chance

4. Imagine you were the mother of the boy; would you have reacted differently in the situation? If so, how?

Ans: Generally, Anant's mother reacted correctly. If we think differently, we should make some special arrangements for him and give him an opportunity to listen and see Pandit Ravishankar. Because it was his great desire and our duty is to fulfill.

5. Read the third paragraph. He raised himself up without any help. The mother murmured with 'a catch in her throat' on seeing him. What does this suggest about the condition of the boy? Read the fourth Paragraph and answer.

Ans: It is clear that the boy suffers from some serious illness and has been bedridden. The fact that the mother is emotionally moved to see that the boy raised himself without any help suggests that the boy was dependent on others for physical activities.

Share Your Responses

1. For a moment, Smita had forgotten something. What was it?

Ans: Smith, a moment had forgotten that her brother was very ill.

1. In what way was truly frightening to Smita?

Ans: Smita had known that Anant was going to die. The word cancer had hung in the air, her brother was dying of cancer. This truth was frightening Smita.

2. Do you consider Anant a talented boy? Justify with support from the text.

Ans: According to the text, Anant was a talented boy. At the beginning of his music career, he was able to compose his own tunes..In addition to that, he was the best player in Table-Tennis and the fastest runner in his school. *(Contd.........)*

Biology

PRINCIPLES OF INHERITANCE AND VARIATION

9. Write a note on Human genetic disorders.

Ans:- Human Genetic Disorders

Genetic disorders are defects that are caused by a genetic mechanism like mendelian genes, multifactor genes, chromosomal aberrations and anomalies.

In 1902, sir Archibald Garrod and William Bateson scanned human population and found that several human disorders seem to be inherited like mendelian genes. They are mendelian disorders.

Mendelian disorders are genetic disease showing mendelian pattern of inheritance which are caused by mutations in their genes with pathological consequences.

The other genetic disorders caused by chromosomal aberrations and anomalies are known as **chromosomal disorders**. They do not follow mendelian pattern of inheritance but are caused by mainly defective synapsis and disjunction during meiosis.

10. Mention some differences Between Mendelian Disorders and Chromosomal Disorders.

Mendelian Disorders	*Chromosomal Disorders*
They are caused by defective alleles.	They are caused by Chromosomal aberrations and anomalies
Defective alleles are produced due to mutations.	The Chromosomal aberrations and anomalies develop due to defective synapsis and disjunction during meiosis.
They follow mendelian pattern of inheritance.	The disorders may or may not be transmitted.
The chances of having the disorder can be known through pedigree analysis Eg:- Sickle cell Anaemia,	The disorder can be known through amniocentesis. Eg:- Down's Syndrome, Turner's Syndrome.

11. Write a note on autosomal disorders.

Ans:- Autosomal Disorders

(a) Sickle Cell Anaemia - It is a recessive hereditary disorder of autosomal nature.

It is caused by mutation of the gene controlling β-chain of haemoglobin. The gene is situated on **11th chromosome**. The mutated gene is called Hb^s. The wild type gene is known as Hb^A. H^S causes one change in amino acid sequence of β-chain. It replaces glutamine present at 6th position by amino acid valine. Haemoglobin-S behaves like normal haemoglobin A, except under conditions of oxygen deficiency as during excessive exercise or at high altitude. Oxygen stress builds hydrophobic bonds between valine of haemoglobin-S and other haemoglobin chains. This distorts haemoglobin structure. The erythrocytes lose their circular shape and become sickle Shaped. Membrane elasticity is lost. As a result sickle-shaped erythrocytes are unable to pass through fine blood capillaries. The blood capillaries are clogged. Blood supply to many vital organs is affected. Sickle celled erythrocytes degenerate after some time resulting in deficiency of erythrocytes.

The **major effect** of Hb^s is the formation of sickles or sickle celled erythrocytes. Clogging of blood capillaries, anaemia, reduced blood supply to vital organs jaundice, muscle cramps, headache and damage to spleen, brain and other vital organs, etc. are side effects of Hb^s.

Hb^A and Hb^S are codominants. The affected individuals live normally except under oxygen stress. Rather they are benefitted in malaria prone areas as the malarial parasites are unable to feed and multiply inside Hb^S carrying erythrocytes. The homozygous individuals,

Hb^S. Hb^S are not that lucky. Their erythrocytes become sickle shaped even under normal conditions so that the homozygous individuals die before attaining maturity. A cross between two heterozygous Hb^A Hb^S individuals, therefore, produces offspring consisting of 1 severely anaemic: 2 carriers: 1 normal. The suffering from death of severely anaemic child can be avoided by discouraging marriages between heterozygous individuals (Hb^A Hb^S).



NORMAL ERYTHROCYTES SICKLED ERYTHROCYTES

(b) Thalassemia - It is heterogeneous group of hereditary diseases caused by haemolytic anaemia that develops due to imbalanced synthesis of generally α and β globins of haemoglobin.

The effect is pronounced when the defective genes occur in homozygous state. In heterozygous state the adverse effect is *(Contd...)*

‘ಮೀಸಲಾತಿ ಹುಚ್ಚು ಬಿಡಬೇಕು’

ದಲಿತರಿಗೆ ನಿವೃತ್ತ ಐಎಎಸ್ ಅಧಿಕಾರಿ ಎಸ್.ಎಲ್. ಗಂಗಾಧರಪ್ಪ ಸಲಹೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಪ್ರತಿಭಾ ಪುರಸ್ಕಾರ ಹಾಗೂ ಪುಸ್ತಕಗಳ ಜನಾರ್ಪಣೆ
- ‘ಮೀಸಲಾತಿ 10 ವರ್ಷ ಮಾತ್ರ ನೀಡಬೇಕು ಎಂದಿದ್ದ ಅಂಬೇಡ್ಕರ್’

ಬೆಂಗಳೂರು: ‘ದಲಿತ ಜನಾಂಗವು 70–80 ವರ್ಷಗಳಿಂದ ಮೀಸಲಾತಿಯ ಉಪಯೋಗ ಪಡೆದುಕೊಂಡು ಮೀಸಲಾತಿಯ ಹುಚ್ಚು ಹಿಡಿಸಿಕೊಂಡಿದೆ. ಇನ್ನು ಮುಂದೆ ಅದನ್ನು ಮರೆಯಬೇಕು’ ಎಂದು ನಿವೃತ್ತ ಐಎಎಸ್ ಅಧಿಕಾರಿ, ರಾಜ್ಯ ಭೋವಿ ಸಂಘದ ಅಧ್ಯಕ್ಷ ಎಸ್.ಎಲ್. ಗಂಗಾಧರಪ್ಪ ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಭೋವಿ (ವಡ್ಡರ) ಸಂಘವು ಭಾನುವಾರ ನಗರದಲ್ಲಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಪುಸ್ತಕಗಳ ಜನಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸಂವಿಧಾನ ರಚಿಸಿದ ಡಾ. ಬಿ.ಆರ್. ಅಂಬೇಡ್ಕರ್ ಅವರು ಮೀಸಲಾತಿಯನ್ನು 10 ವರ್ಷ ಮಾತ್ರ ನೀಡಬೇಕು, ನಂತರ ಕೊಡಬಾರದು ಎಂದು ಬರೆದಿದ್ದರು. ಆದರೆ, ರಾಜಕೀಯ, ಸಾಮಾಜಿಕ ಸೇರಿದಂತೆ ಅನೇಕ ಕಾರಣಗಳಿಂದ ಪ್ರತಿ 10 ವರ್ಷಕ್ಕೆ ಅದು ಮುಂದುವರಿದಿದೆ. ಮುಂದಿನ ವರ್ಷಕ್ಕೆ 80 ವರ್ಷ ಆಗಲಿದೆ. ಮತ್ತೆ 10 ವರ್ಷ ಮುಂದಕ್ಕೆ ಹೋಗುತ್ತದಾ ಅಥವಾ ಅಲ್ಲಿಗೆ ಕೊನೆಗೊಳ್ಳುತ್ತದಾ ಎಂಬುದು ಗೊತ್ತಿಲ್ಲ’ ಎಂದು ಹೇಳಿದರು.

‘ಮೀಸಲಾತಿಗೆ ಸಂಬಂಧಿಸಿದಂತೆ ಬಹಳ ದೊಡ್ಡಮಟ್ಟದಲ್ಲಿ ರಾಜಕೀಯ ನಡೆಯುತ್ತಿದೆ. ರಾಜ್ಯ, ಕೇಂದ್ರದಲ್ಲಿಯೂ ರಾಜಕೀಯ ನಡೆಯುತ್ತಿರುವುದರಿಂದ ಮೀಸಲಾತಿಯನ್ನು ನಂಬಿಕೊಂಡು ಯಾರೂ ಹೋಗಬಾರದು ಎಂಬುದು ನನ್ನ ಅಭಿಪ್ರಾಯ. ಎಲ್ಲರೂ ಅವರವರ ಶಕ್ತಿ, ಪರಿಶ್ರಮದಿಂದ ಮುಂದೆ ಬರಬೇಕು. ಮೀಸಲಾತಿ ಇದೆ, ಟೀಚರ್ ಆಗ್ತೀನಿ, ಕೆಎಎಸ್ ಅಧಿಕಾರಿ ಆಗ್ತೀನಿ ಎಂಬುದನ್ನು ಬಿಟ್ಟುಬಿಡಬೇಕು’ ಎಂದು ತಿಳಿಸಿದರು.

‘ಮೀಸಲಾತಿ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ ಅದರ ಫಲವನ್ನು ಅನುಭವಿಸಿ. ಆದರೆ, ಅದನ್ನೇ ನಂಬಿಕೊಂಡು ಕೊನೆವರೆಗೆ ಇದ್ದೇ ಇರುತ್ತದೆ ಎಂದು ವಿಶ್ವಾಸ ಇಟ್ಟುಕೊಂಡು ಅದಕ್ಕೆ ಜೋತು ಬೀಳುವುದು ಒಳ್ಳೆಯದಲ್ಲ. ಆದಷ್ಟು ಬೇಗ ಮೀಸಲಾತಿ ಹುಚ್ಚು ತೊಲಗಬೇಕು’ ಎಂದರು.

ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಮಾತನಾಡಿ, ‘ಹಿಂದುಳಿದ ವರ್ಗಗಳಿಗೆ ಕೇಂದ್ರದಲ್ಲಿ ಮೀಸಲಾತಿ ಇರಲಿಲ್ಲ. ಮಂಡಲ್ ಆಯೋಗವು ಶೇ 27ರಷ್ಟು ಶಿಫಾರಸು ಮಾಡಲಾಗಿದ್ದರೂ ಜಾರಿಯಾಗಿರಲಿಲ್ಲ. ನಾನು ಕೇಂದ್ರ ಸಚಿವನಾಗಿದ್ದಾಗ ಜಾರಿ ಮಾಡಲು ಹೊರಟರೆ ಅಲ್ಲಿನ ಐಎಎಸ್ ಅಧಿಕಾರಿಗಳೇ ಅಡ್ಡಿಪಡಿಸಿದರು. ಗುಣಮಟ್ಟ ಕುಸಿಯುತ್ತದೆ ಎಂದೆಲ್ಲ ಸಬೂಬು ಹೇಳಿದರು. ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವುದನ್ನು ವಿರೋಧಿಸಿ ಕೆಲವರು ಸುಪ್ರೀಂಕೋರ್ಟ್‌ಗೆ ಹೋದರು. ಸರ್ಕಾರದ ಪರವಾಗಿ ಬೇಕಾದ ದಾಖಲೆಗಳನ್ನು ಸುಪ್ರೀಂಕೋರ್ಟ್‌ಗೆ ಸಲ್ಲಿಸಬೇಕಿತ್ತು. ಆ ಕೆಲಸವನ್ನು ಕೂಡ ಐಎಎಸ್ ಅಧಿಕಾರಿಗಳು ಮಾಡಲಿಲ್ಲ’ ಎಂದು ನೆನಪು ಮಾಡಿಕೊಂಡರು.

‘ಸುಪ್ರೀಂಕೋರ್ಟ್‌ನಲ್ಲಿ ಈ ಪ್ರಕರಣ ಬಿದ್ದುಹೋಗುವ ಸಂಭವ ಇತ್ತು. ಕೊನೇ ಕ್ಷಣದಲ್ಲಿ ಈ ಬಗ್ಗೆ ಮಾಹಿತಿ ಪಡೆದು ಎಲ್ಲ ದಾಖಲೆಗಳನ್ನು ಒದಗಿಸಿ ಸರ್ಕಾರದ ಪರವಾಗಿ ತೀರ್ಪು ಬರುವಂತೆ ಮಾಡಿದೆ. ಇವತ್ತು ಎಲ್ಲ ರಾಜ್ಯಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸಿಕ್ಕಿದೆ’ ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಚೌಡಯ್ಯ ರಚಿಸಿದ ‘ಎಸ್.ಎಲ್. ಗಂಗಾಧರಪ್ಪ ಇಟ್ಟಹೆಜ್ಜೆ ದಿಟ್ಟ ನಿಲುವು’, ‘ಈ ನೆಲದ ಗುಣ’, ‘ಪ್ರವಾಸ ಕಥನ’ ಕೃತಿಗಳು ಜನಾರ್ಪಣೆಗೊಂಡವು.

ಕೆಪಿಎಸ್‌ಸಿ ಸದಸ್ಯ ವಿ. ದೇವಪ್ಪ, ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ಮಹಾರಾಣಿ ಕ್ಲಸ್ಟರ್ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ಕೆ.ವೈ. ನಾರಾಯಣ ಸ್ವಾಮಿ, ನೆಲಮಂಗಲ ಸಿದ್ಧಗಂಗಾ ಪ್ರಥಮದರ್ಜೆ ಕಾಲೇಜು ಪ್ರಾಂಶುಪಾಲ ಕೆ.ಎನ್. ಅಮರೇಂದ್ರ, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ, ಸಂಘದ ಉಪಾಧ್ಯಕ್ಷ ಎಂ.ಬಿ. ಮಲ್ಲೇಶ್, ಸೀತಾಲಕ್ಷ್ಮೀ ಗಂಗಾಧರಪ್ಪ ಉಪಸ್ಥಿತರಿದ್ದರು.

ಕರ್ನಾಟಕ ರಾಜ್ಯ ಭೋವಿ (ವಡ್ಡರ) ಸಂಘ ಭಾನುವಾರ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸಾಧಕ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು
ಪ್ರಜಾವಾಣಿ ಚಿತ್ರ

ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಬಂಗಾರಪ್ಪ ಅವರ 93ನೇ ಜನ್ಮದಿನಾಚರಣೆ ಅಂಗವಾಗಿ ಸೊರಬದಲ್ಲಿ ಭಾನುವಾರ ನಡೆದ ನಮನ ಚಿಂತನ ಸನ್ಮಾನ ಕಾರ್ಯಕ್ರಮವನ್ನು ಸಚಿವ ಕೆ.ಎಚ್. ಮುನಿಯಪ್ಪ ಉದ್ಘಾಟಿಸಿದರು. ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ಶಾಸಕರಾದ ಬಲ್ಕೀಶ್ ಬಾನು, ಬೇಳೂರು ಗೋಪಾಲಕೃಷ್ಣ, ಸಚಿವರಾದ ಸಂತೋಷ್ ಲಾಡ್, ಮಧು ಬಂಗಾರಪ್ಪ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಆರ್.ಎಂ. ಮಂಜುನಾಥ್ ಗೌಡ, ಅಲೆಮಾರಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ, ಭಾಗವಹಿಸಿದ್ದರು

ಹಿಂದುಳಿದ ಸಮುದಾಯಗಳಿಗೆ ಶೇ 75ರಷ್ಟು ಮೀಸಲಾತಿಗೆ ಒತ್ತಾಯ

ಶಿವಮೊಗ್ಗ: ‘ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಸಮೀಕ್ಷೆಯ ವರದಿ ಆಧರಿಸಿ ಹಿಂದುಳಿದ ವರ್ಗಗಳ ಎಲ್ಲ ಜಾತಿ ಸಮುದಾಯಗಳಿಗೂ ರಾಜ್ಯದಲ್ಲಿ ಶೇ 75ರಷ್ಟು ಮೀಸಲಾತಿ ಕಲ್ಪಿಸುವಂತೆ ಸರ್ಕಾರಕ್ಕೆ ಒತ್ತಾಯಿಸಲಿದ್ದೇವೆ’ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಇಲ್ಲಿ ಹೇಳಿದರು.

ಮಾಜಿ ಮುಖ್ಯಮಂತ್ರಿ ದಿವಂಗತ ಎಸ್. ಬಂಗಾರಪ್ಪ ಅವರ 93ನೇ ಜನ್ಮದಿನಾಚರಣೆ ಅಂಗವಾಗಿ ಎಸ್. ಬಂಗಾರಪ್ಪ ಫೌಂಡೇಷನ್ ಹಾಗೂ ಎಸ್. ಬಂಗಾರಪ್ಪ ವಿಚಾರ ವೇದಿಕೆಯಿಂದ ಸೊರಬದಲ್ಲಿ ಭಾನುವಾರ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ತಮಿಳುನಾಡಿನಲ್ಲಿ ಈಗಾಗಲೇ ಹಿಂದುಳಿದ ವರ್ಗದವರಿಗೆ ಶೇ 69ರಷ್ಟು ಮೀಸಲಾತಿ ಸೌಲಭ್ಯ ಕಲ್ಪಿಸ ಲಾಗಿದೆ. ಸರ್ವರಿಗೂ ಸಮಪಾಲು- ಸಮಬಾಳು ಎಂಬ ಆಶಯದಲ್ಲಿ ಅದೇ ಮಾದರಿಯನ್ನು ಇಲ್ಲಿಯೂ ಅಳವಡಿಸಬೇಕು. ಸುಪ್ರೀಂ ಕೋರ್ಟ್ ಆದೇಶವೂ ಇದಕ್ಕೆ ಪೂರಕವಾಗಿದೆ. ಇದೇ ವೇದಿಕೆಯ ಮೂಲಕ ಮುಖ್ಯಮಂತ್ರಿಗಳಿಗೆ ಈ ಕುರಿತ ಒತ್ತಾಯ ಮಾಡಲಿದ್ದೇವೆ’ ಎಂದರು.

ಉಳುವವನೇ ಭೂಮಿಯ ಒಡೆಯ ಕಾಯ್ದೆಯ ಮೂಲಕ ದೇವರಾಜ ಅರಸು ರಾಜ್ಯದ ಜನರಿಗೆ ಭೂಮಿ ಹಂಚಿಕೆ ಮಾಡಿದರೆ, ರೈತರ ಪಂಪ್ ಸೆಟ್‌ಗಳಿಗೆ ಉಚಿತ ವಿದ್ಯುತ್ ಸಂಪರ್ಕ ನೀಡಿ ರೈತರಿಗೆ ಬಂಗಾರಪ್ಪ ಅವರು ನೆರವಾದರು ಎಂದು ಲಾಡ್ ಸ್ಮರಿಸಿದರು.

> ಮಾತನ್ನು ಕೃತಿಯಲ್ಲಿ ತಂದವರು ಬಂಗಾರಪ್ಪ. ರೈಲಿನಲ್ಲಿ ಬೆಂಗಾವಲಿಗಿದ್ದ ಪೊಲೀಸರೊಂದಿಗೆ ಊಟ ಹಂಚಿಕೊಳ್ಳುತ್ತಿದ್ದರು. ಪೊಲೀಸರ ಕೆಲಸದಲ್ಲಿ ಮಧ್ಯಪ್ರವೇಶಿಸುವುದಿಲ್ಲ ಎಂದು ನೇರವಾಗಿ ಹೇಳುತ್ತಿದ್ದರು
> **ಎಲ್.ರೇವಣಸಿದ್ದಯ್ಯ,** ನಿವೃತ್ತ ಡಿಜಿಪಿ

ಬಡವರು, ರೈತರ ಪರ ಇದ್ದ ನಾಯಕ ಬಂಗಾರಪ್ಪ. ಅವರನ್ನು ಯಾವುದೇ ಕಾರಣಕ್ಕೂ ಮುಖ್ಯಮಂತ್ರಿ ಸ್ಥಾನದಿಂದ ಕೆಳಗೆ ಇಳಿಸದಂತೆ ಒತ್ತಡ ಹೇರಲು ಆಗಿನ ಪ್ರಧಾನಿ ಪಿ.ವಿ. ನರಸಿಂಹರಾವ್ ಬಳಿಗೆ 23 ಶಾಸಕರ ನಿಯೋಗ ಕೊಂಡೊಯ್ದಿದ್ದೆ. ಇದು ಬಹಳಷ್ಟು ಜನರಿಗೆ ಗೊತ್ತಿಲ್ಲ ಎಂದು ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

‘ತೆಲುಗು ಮಾತಾಡುತ್ತಿದ್ದ ಕಾರಣಕ್ಕೆ ಪ್ರಧಾನಿ ಪಿ.ವಿ.ನರಸಿಂಹರಾವ್ ಅವರೊಂದಿಗೆ ನನಗೆ ವಿಶೇಷ ಸಲುಗೆ ಇತ್ತು. ಅದನ್ನು ಬಳಸಿಕೊಂಡು ಬಂಗಾರಪ್ಪ ಅವರನ್ನು ಯಾವುದೇ ಕಾರಣಕ್ಕೂ ಆ ಸ್ಥಾನದಿಂದ ತೆಗೆಯದಂತೆ ಒತ್ತಡ ಹಾಕಿದ್ದೆನು. ಆದರೆ ಅದು ಸಾಧ್ಯವಾಗಲಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಸಾಮಾನ್ಯ ತಾಲ್ಲೂಕು ಬೋರ್ಡ್ ಮೆಂಬರ್ ಆಗಿದ್ದವ ನಾನು. ರಾಜೀವ್ ಗಾಂಧಿಗೆ ಮಾತುಕೊಟ್ಟಿದ್ದೇನೆ ಎಂದು ನನ್ನಪರ ಪ್ರಚಾರ ಮಾಡಿ ಗೆಲ್ಲಿಸಿದರು. ಅವರ ಋಣ ನನ್ನ ಮೇಲಿದೆ’ ಎಂದರು.

ಕಾರ್ಯಕ್ರಮದಲ್ಲಿ ಸಾಹಿತಿ, ಮೈಸೂರಿನ ಕಾಳೇಗೌಡ ನಾಗವಾರ, ಬೆಂಗಳೂರಿನ ಗುಬ್ಬಿ ತೋಟದಪ್ಪ ಧರ್ಮಸಂಸ್ಥೆ ಪರವಾಗಿ ನಿವೃತ್ತ ಪೊಲೀಸ್ ಮಹಾನಿರ್ದೇಶಕ ಎಲ್.ರೇವಣಸಿದ್ದಯ್ಯ, ಬೆಳಗಾವಿಯ ಚೌಡಿಕೆ ಕಲಾವಿದೆ ರಾಧಾಬಾಯಿ ಮಾದರ್ ಹಾಗೂ ಕಲಬುರ್ಗಿಯ ರಂಗಕಲಾವಿದ ಜೇವರ್ಗಿ ರಾಜಣ್ಣ ಅವರಿಗೆ ‘ಬಂಗಾರ ಪ್ರಶಸ್ತಿ’ ನೀಡಿ ಗೌರವಿಸಲಾಯಿತು.

ಸಚಿವ ಮಧು ಎಸ್.ಬಂಗಾರಪ್ಪ, ಸಾಗರ ಶಾಸಕ ಬೇಳೂರು ಗೋಪಾಲಕೃಷ್ಣ, ಶಿರಸಿ ಶಾಸಕ ಭೀಮಣ್ಣ ನಾಯ್ಕ, ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ತಿಲಕ್ ಕುಮಾರ್, ವಿಧಾನಪರಿಷತ್ ಸದಸ್ಯೆ ಬಲ್ಕೀಶ್ ಬಾನು, ಮಾಜಿ ಸಂಸದರಾದ ಆಯನೂರು ಮಂಜುನಾಥ್, ಚಂದ್ರಪ್ಪ, ಬಂಗಾರಪ್ಪ ವಿಚಾರ ವೇದಿಕೆಯ ವೇಣುಗೋಪಾಲ್ ನಾಯಕ್, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ ಇದ್ದರು.

100 ಕಾಂಗ್ರೆಸ್ ಕಚೇರಿ: ನ. 20 ಗಡುವು

ಎಲ್ಲ ಸಚಿವರು, ಶಾಸಕರಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗಾಂಧಿ ಭಾರತ–100’ ವರ್ಷಾಚರಣೆಯ ಕಾರಣಕ್ಕೆ ರಾಜ್ಯದಲ್ಲಿ ನಿರ್ಮಿಸಲು ಉದ್ದೇಶಿಸಿದ 100 ಕಾಂಗ್ರೆಸ್ ಕಚೇರಿಗಳ ಶಂಕು ಸ್ಥಾಪನೆಗೆ ನ.20ರ ಗಡುವು ನಿಗದಿಪಡಿಸಲಾಗಿದೆ. ಈ ವಿಚಾರದಲ್ಲಿ ಈವರೆಗಿನ ಮಾಹಿತಿಯನ್ನು ತಕ್ಷಣ ನೀಡುವಂತೆ ಎಲ್ಲ ಸಚಿವರು, ಶಾಸಕರಿಗೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪತ್ರ ಬರೆದಿದ್ದಾರೆ.


ಶಿವಕುಮಾರ್

‘ಗಾಂಧಿ ಭಾರತ ಶತಮಾನೋತ್ಸವ’ ಕಾರ್ಯಕ್ರಮ ಅಂತಿಮ ಹಂತಕ್ಕೆ ಬಂದಿರುವುದರಿಂದ 100 ಕಾಂಗ್ರೆಸ್ ಕಚೇರಿಗಳನ್ನು ನಿರ್ಮಿಸಲು ಉದ್ದೇಶಿಸಿರುವ ನಿವೇಶನಗಳಲ್ಲಿ ಏಕಕಾಲಕ್ಕೆ ಶಂಕು ಸ್ಥಾಪನೆ ನೆರವೇರಿಸಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಒಪ್ಪಿದ್ದಾರೆ. ಹೀಗಾಗಿ, ನಿವೇಶನಗಳನ್ನು ಇನ್ನೂ ಅಂತಿಮಗೊಳಿಸದವರು ಪ್ರಕ್ರಿಯೆಯನ್ನು ತ್ವರಿತಗೊಳಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

ನಿವೇಶನಗಳನ್ನು ಖರೀದಿಸಲು ಸರ್ಕಾರದ ಅಧೀನ ಸಂಸ್ಥೆಗಳಾದ ನಗರ ಯೋಜನಾ ಪ್ರಾಧಿಕಾರಗಳು, ನಗರಾಭಿವೃದ್ಧಿ ಇಲಾಖೆ, ಕಂದಾಯ ಇಲಾಖೆಗಳ ಮಂಜೂರಾತಿ ಪಡೆದು ನೋಂದಣಿ ಮಾಡಿಕೊಳ್ಳಬೇಕಿದೆ. ಯಾವ್ಯಾವ ಸ್ಥಳದಲ್ಲಿ ನಿವೇಶನ ನೋಂದಣಿ ಆಗಿದೆ ಮತ್ತು ಮಂಜೂರಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂಬ ಮಾಹಿತಿಯನ್ನು ತಕ್ಷಣ ಕಳುಹಿಸುವಂತೆ ಎಐಸಿಸಿ ಸೂಚಿಸಿದೆ. ಎಲ್ಲರೂ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ತಮ್ಮ ಕ್ಷೇತ್ರಗಳಲ್ಲಿ ನಿವೇಶನ ಹೊಂದಲು ತಕ್ಷಣ ಕಾರ್ಯಪ್ರವೃತ್ತರಾಗಬೇಕು ಎಂದೂ ಅವರು ಪತ್ರದಲ್ಲಿ ತಿಳಿಸಿದ್ದಾರೆ.

‘ಚುನಾವಣೆ ನಂತರ ಶಂಕುಸ್ಥಾಪನೆ’

‘ಮಹಾತ್ಮ ಗಾಂಧಿಯವರು ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿ ಹಾಗೂ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ 100 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ 100 ಕಡೆ ಕಾಂಗ್ರೆಸ್ ಕಚೇರಿ ನಿರ್ಮಿಸುವ ಕೆಲಸ ಕೈಗೆತ್ತಿಕೊಂಡಿದ್ದೇವೆ. ಕಾಂಗ್ರೆಸ್ ಕಚೇರಿ ಪಕ್ಷದ ಕಾರ್ಯಕರ್ತರಿಗೆ ದೇವಾಲಯವಿದ್ದಂತೆ’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು. ನೂರು ಕಾಂಗ್ರೆಸ್ ಕಚೇರಿಗಳ ಶಂಕುಸ್ಥಾಪನೆಗೆ ರಾಹುಲ್ ಗಾಂಧಿಯನ್ನು ಆಹ್ವಾನಿಸುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ, ‘ಕಾರ್ಯಕರ್ತರ ಅನುಕೂಲಕ್ಕಾಗಿ ರಾಜ್ಯದಾದ್ಯಂತ ನೂರು ಕಾಂಗ್ರೆಸ್ ಕಚೇರಿಗಳನ್ನು ನಿರ್ಮಿಸಲಾಗುತ್ತದೆ. ರಾಹುಲ್ ಗಾಂಧಿಯವರು ಒಂದು ದಿನ ಬಂದು ಈ ಕೆಲಸಕ್ಕೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಬಿಹಾರ ಚುನಾವಣೆ ನಂತರ ಶಂಕುಸ್ಥಾಪನೆಯ ದಿನ ನಿಗದಿ ಆಗಬಹುದು’ ಎಂದರು.

‘ತಕ್ಷಣವೇ ಸೋಯಾ ಖರೀದಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರವು ಕೂಡಲೇ ಹೆಸರು, ಸೂರ್ಯಕಾಂತಿ, ಉದ್ದು, ಸೋಯಾ ಖರೀದಿ ಆರಂಭಿಸಬೇಕು’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಒತ್ತಾಯಿಸಿದ್ದಾರೆ.

ಆರ್.ಅಶೋಕ

ಬೀದರ್‌ನಲ್ಲಿ ಸೋಯಾ ಖರೀದಿ ಕೇಂದ್ರ ಆರಂಭಿಸದೇ ಇರುವ ಕಾರಣಕ್ಕೆ ಬೆಳೆಗಾರರು ಖಾಸಗಿ ವ್ಯಕ್ತಿಗಳಿಗೆ ಮಾರುತ್ತಿದ್ದಾರೆ ಎಂದು ‘ಪ್ರಜಾವಾಣಿ’ಯಲ್ಲಿ ಪ್ರಕಟವಾಗಿದ್ದ ವರದಿಯನ್ನು ‘ಎಕ್ಸ್’ನಲ್ಲಿ ಅವರು ಪೋಸ್ಟ್ ಮಾಡಿದ್ದಾರೆ.

ಜತೆಗೆ, ‘ಅತಿವೃಷ್ಟಿಯಿಂದ ರೈತರು ಈಗಾಗಲೇ ನಲುಗಿ ಹೋಗಿದ್ದಾರೆ. ಅಳಿದುಳಿದಿರುವ ಬೆಳೆಯನ್ನು ಒಳ್ಳೆಯ ಬೆಲೆಗೆ ಮಾರಾಟ ಮಾಡಲು ಮುಂದಾದರೆ, ಫ್ರೂಟ್ಸ್ ಐಡಿ ಇಲ್ಲ, ಗುಣಮಟ್ಟ ಇಲ್ಲ, ಸರಿಯಾದ ಗೋಣಿಚೀಲದಲ್ಲಿ ತುಂಬಿಲ್ಲ ಎಂದು ನೆಪ ಹೇಳಿ ಸತಾಯಿಸಲಾಗುತ್ತಿದೆ’ ಎಂದು ಆರೋಪಿಸಿದ್ದಾರೆ. ‘ಕುರ್ಚಿ ಕಿತ್ತಾಟದಲ್ಲಿ ಮುಳುಗಿಹೋಗಿರುವ ಈ ಸರ್ಕಾರವು, ನೆರೆಬಾಧಿತ ರೈತರ ಸಂಕಷ್ಟವನ್ನು ಸಂಪೂರ್ಣವಾಗಿ ಮರೆತಿದೆ. ರೈತರಿಗೆ ಇನ್ನಷ್ಟು ತೊಂದರೆ ಕೊಡುತ್ತಿದೆ. ತಕ್ಷಣವೇ ಖರೀದಿ ಕೇಂದ್ರಗಳನ್ನು ಆರಂಭಿಸಿ, ರೈತರ ನೆರವಿಗೆ ಧಾವಿಸಬೇಕು’ ಎಂದು ಆಗ್ರಹಿಸಿದ್ದಾರೆ.

‘ಜಮೀರ್ ಕರೆ ಖಂಡನೀಯ’

‘ರೈತರಿಗೆ ವಂಚಿಸಿದ ಆರೋಪಿಗಳನ್ನು ರಕ್ಷಿಸುವಂತೆ ಸಚಿವ ಜಮೀರ್ ಅಹಮದ್ ಖಾನ್ ಅವರು ಪೊಲೀಸರಿಗೆ ಕರೆ ಮಾಡಿ, ಒತ್ತಡ ಹೇರಿರುವುದು ಖಂಡನೀಯ’ ಎಂದು ಅಶೋಕ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಮುಖ್ಯಮಂತ್ರಿ ಅವರ ಆಪ್ತ, ಸಚಿವ ಸಂಪುಟದ ಸದಸ್ಯರೇ ಹೀಗೆ ಕಾನೂನು ಬಾಹಿರವಾಗಿ ನಡೆದುಕೊಳ್ಳುವುದಾದರೆ ರಾಜ್ಯದಲ್ಲಿ ಸಂವಿಧಾನ, ಕಾನೂನು ನಿಯಮಗಳು ಇದ್ದು ಏನು ಪ್ರಯೋಜನ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ, ಜಮೀರ್ ಅವರನ್ನು ಇನ್ನೂ ಸಂಪುಟದಲ್ಲಿ ಇರಿಸಿಕೊಂಡು ಯಾವ ಸಂದೇಶ ನೀಡುತ್ತಿದ್ದೀರಿ’ ಎಂದು ಪ್ರಶ್ನಿಸಿದ್ದಾರೆ.

‘ಮಲೆನಾಡಿನಲ್ಲಿ ಕಾಳಿಂಗ ಕೊಲ್ಲುವುದಿಲ್ಲ’

ಬೆಂಗಳೂರು: ‘ಮಲೆನಾಡಿನಲ್ಲಿ ಇತರೇ ಸಮುದಾಯಗಳಂತೆ ಮುಸ್ಲಿಂ ಮತ್ತು ಕ್ರೈಸ್ತರು ಪ್ರಕೃತಿಯ ಜತೆ ಸಹ ಜೀವನ ನಡೆಸುತ್ತಾ ಬಂದಿದ್ದಾರೆ. ಸರ್ಪಗಳನ್ನು ಪೂಜಿಸುವ ಹಿಂದೂಗಳ ಧಾರ್ಮಿಕ ಭಾವನೆಗಳನ್ನು ಗೌರವಿಸುತ್ತಾ ಬಂದಿದ್ದಾರೆ’ ಎಂದು ‘ಪರಿಸರ ಸಂವಾದ’ದ ರಾಜ್ಯ ಕಾರ್ಯದರ್ಶಿ ಇಸ್ಮಾಯಿಲ್ ತೀರ್ಥಹಳ್ಳಿ ತಿಳಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಆಗುಂಬೆಯ ‘ಕಾಳಿಂಗ ಮನೆ’ ಸಂಸ್ಥೆ ‘ಪ್ರಜಾವಾಣಿ’ಗೆ ನೀಡಿರುವ ಸ್ಪಷ್ಟನೆಯಲ್ಲಿ, ‘ಮಲೆನಾಡಿನ ಮುಸ್ಲಿಂ ಮತ್ತು ಕ್ರೈಸ್ತ ಧರ್ಮೀಯರು ಹಾವಿನೊಂದಿಗೆ ಯಾವುದೇ ರೀತಿಯ ಧಾರ್ಮಿಕ ನಂಬಿಕೆಯನ್ನಾಗಲಿ, ಪೂಜನೀಯ ಭಾವನೆಯನ್ನು ಹೊಂದಿಲ್ಲ. ತಮಗೆ ವಿಪತ್ತು ಬಂದಾಗ ಯಾವುದೇ ಹಾವನ್ನಾದರೂ ಕೊಲ್ಲಲು ಅವರು ಸಿದ್ಧರಾಗುತ್ತಾರೆ ಎಂಬ ಸುಳ್ಳು ಆರೋಪ ಮಾಡಿದ್ದಾರೆ. ಇದು ಖಂಡನೀಯ’ ಎಂದಿದ್ದಾರೆ.

‘ಯಾವುದೇ ದಾಖಲೆಗಳಿಲ್ಲದೆ ವೈಯಕ್ತಿಕ ಸ್ವಾರ್ಥಕ್ಕಾಗಿ ಸಮುದಾಯಗಳ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ. ಧಾರ್ಮಿಕ ದ್ವೇಷ ಬಿತ್ತುವ ಪ್ರಯತ್ನ ಕೂಡಾ ಇಲ್ಲಿ ಕಾಣುತ್ತಿದೆ. ಈ ಮೂಲಕ ತಮ್ಮ ತಪ್ಪುಗಳನ್ನು ಮುಚ್ಚಿ ಹಾಕಲು ಪ್ರಯತ್ನಿಸುತ್ತಿದ್ದಾರೆ. ಸರ್ಕಾರ ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕು’ ಎಂದು ಒತ್ತಾಯಿಸಿದ್ದಾರೆ.

‘ಕಾಳಿಂಗ ಮನೆ ತಮ್ಮ ಸುಳ್ಳುಗಳ ಸಮರ್ಥನೆಗೆ ಪುನಃ ಕಪೋಲಕಲ್ಪಿತ ಕಥೆಗಳನ್ನು ಹಣೆಯುತ್ತಾ ಮುಸ್ಲಿಂ ಮತ್ತು ಕ್ರೈಸ್ತ ಧರ್ಮೀಯರನ್ನು ಅಪರಾಧಿಗಳಂತೆ ಬಿಂಬಿಸುತ್ತಿದ್ದಾರೆ. ಅಲ್ಲಿ ನಡೆಯುತ್ತಿರುವ ಎಲ್ಲ ಚಟುವಟಿಕೆಗಳ ಬಗ್ಗೆ ಸಮಗ್ರ ತನಿಖೆ ನಡೆಸಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

‘ವೈದ್ಯೆ ಆತ್ಮಹತ್ಯೆ: ಸಾಂಸ್ಥಿಕ ಕೊಲೆ’

ಪ್ರಜಾವಾಣಿ ವಾರ್ತೆ

ಮುಂಬೈ: ‘ಸತಾರಾ ಜಿಲ್ಲೆಯ ಫಲ್ಟನ್‌ನಲ್ಲಿ 28 ವರ್ಷದ ವೈದ್ಯೆಯ ಆತ್ಮಹತ್ಯೆಯು ‘ಸಾಂಸ್ಥಿಕ ಕೊಲೆ’ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ರಾಹುಲ್ ಗಾಂಧಿ

‘ಈ ಘಟನೆಯು ಬಿಜೆಪಿ ಸರ್ಕಾರದ ಅಮಾನವೀಯ ಮತ್ತು ಸಂವೇದನಾರಹಿತ ಮುಖವನ್ನು ಬಹಿರಂಗ ಪಡಿಸುತ್ತದೆ. ಅತ್ಯಾಚಾರ ಮತ್ತು ಕಿರುಕುಳದಿಂದ ವೈದ್ಯೆಯು ಹತಾಶೆಗೆ ಒಳಗಾಗಿರುವುದು ಯಾವುದೇ ನಾಗರಿಕ ಸಮಾಜದ ಆತ್ಮಸಾಕ್ಷಿಯನ್ನು ಅಲುಗಾಡಿಸುವಂತಹ ದುರಂತವಾಗಿದೆ’ ಎಂದು ಸಾಮಾಜಿಕ ಮಾಧ್ಯಮ ‘ಎಕ್ಸ್’ನಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

‘ಇತರರ ನೋವನ್ನು ನಿವಾರಿಸಲು ಹಾತೊರೆಯುತ್ತಿದ್ದ ಭರವಸೆಯ ವೈದ್ಯೆಯೊಬ್ಬರು ಭ್ರಷ್ಟ ವ್ಯವಸ್ಥೆ ಮತ್ತು ಅಧಿಕಾರ ವ್ಯವಸ್ಥೆಯೊಂದಿಗೆ ಬೇರೂರಿರುವ ದುಷ್ಕರ್ಮಿಗಳ ಕಿರುಕುಳಕ್ಕೆ ಬಲಿಯಾಗಿದ್ದಾರೆ. ದುಷ್ಕರ್ಮಿಗಳಿಂದ ಸಾರ್ವಜನಿಕರನ್ನು ರಕ್ಷಿಸುವ ಕಾರ್ಯವನ್ನು ಮಾಡದ ಅಧಿಕಾರ ವ್ಯವಸ್ಥೆಯೇ ಈ ಮುಗ್ಧ ಮಹಿಳೆಯ ಮೇಲೆ ಅತ್ಯಂತ ಘೋರ ಅಪರಾಧವನ್ನು ಎಸಗಿದೆ’ ಎಂದು ಆರೋಪಿಸಿದ್ದಾರೆ.

‘ಬಿಜೆಪಿಯೊಂದಿಗೆ ಸಂಬಂಧ ಹೊಂದಿರುವ ಕೆಲ ಪ್ರಭಾವಿಗಳು ಕೂಡ ವೈದ್ಯೆ ಮೇಲೆ ಒತ್ತಡ ಹೇರಲು ಪ್ರಯತ್ನಿಸಿದ್ದಾರೆ’ ಎಂದು ರಾಹುಲ್ ಗಾಂಧಿ ಅವರು ದೇವೇಂದ್ರ ಫಡಣವೀಸ್ ನೇತೃತ್ವದ ಸರ್ಕಾರವನ್ನು ಟೀಕಿಸಿದ್ದಾರೆ.

ಎಸ್‌ಐಆರ್: ಇಂದು ವೇಳಾಪಟ್ಟಿ ಘೋಷಣೆ?

ಒಂದನೇ ಪುಟದಿಂದ...

ಚುನಾವಣೆ ಸಮೀಪಿಸುತ್ತಿರುವ ರಾಜ್ಯಗಳಲ್ಲಿ ಮೊದಲ ಹಂತದ ಎಸ್‌ಐಆರ್ ನಡೆಯಬಹುದು.

ಚುನಾವಣೆ ಸಮೀಪಿಸುತ್ತಿರುವ ಕೇರಳ, ತಮಿಳುನಾಡು, ಪುದುಚೇರಿ, ಪಶ್ಚಿಮ ಬಂಗಾಳದಲ್ಲಿ ಮೊದಲ ಹಂತದ ಎಸ್‌ಐಆರ್ ನಡೆಯುವ ಮುನ್ಸೂಚನೆ ಇದೆ. ಜತೆಗೆ, ಕೇಂದ್ರಾಡಳಿತ ಪ್ರದೇಶಗಳು ಸೇರಿದಂತೆ 10–15 ರಾಜ್ಯಗಳಲ್ಲಿ ಸಮಗ್ರ ಪರಿಷ್ಕರಣೆ ನಡೆಯಲಿದೆ. ಬಹುತೇಕ ರಾಜ್ಯಗಳಲ್ಲಿ 2002 ಮತ್ತು 2004ರ ನಡುವೆ ಎಸ್‌ಐಆರ್ ನಡೆದಿತ್ತು.

ಸೋಮವಾರ ಸಂಜೆ 4.15ಕ್ಕೆ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ಮಾಧ್ಯಮಗೋಷ್ಠಿ ನಿಗದಿಯಾಗಿದೆ.

ಕರೂರು ಕಾಲ್ತುಳಿತ: ತನಿಖೆ ವಹಿಸಿಕೊಂಡ ಸಿಬಿಐ

ನವದೆಹಲಿ (ಪಿಟಿಐ): ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಅಧ್ಯಕ್ಷ, ನಟ ವಿಜಯ್ ಅವರ ರ‍್ಯಾಲಿ ವೇಳೆ ಕರೂರಿನಲ್ಲಿ ಸಂಭವಿಸಿದ್ದ ಕಾಲ್ತುಳಿತ ಪ್ರಕರಣದ ತನಿಖೆಯನ್ನು ಸಿಬಿಐ ವಹಿಸಿಕೊಂಡಿದೆ.

ಕರೂರಿನ ವೇಲುಸ್ವಾಮಿಪುರದ ಘಟನಾ ಸ್ಥಳಕ್ಕೆ ಸಿಬಿಐನ ವಿಶೇಷ ತಂಡ ಈಗಾಗಲೇ ಭೇಟಿ ನೀಡಿ ಪರಿಶೀಲಿಸಿದೆ. ರಾಜ್ಯ ಪೊಲೀಸರು ದಾಖಲಿಸಿದ್ದ ಎಫ್‌ಐಆರ್ ಅನ್ನು ಸಿಬಿಐ ಮರು ದಾಖಲಿಸಿದೆ. ಈ ಬಗ್ಗೆ ಸ್ಥಳೀಯ ನ್ಯಾಯಾಲಯಕ್ಕೂ ಮಾಹಿತಿ ನೀಡಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ಸ್ವತಂತ್ರ ತನಿಖೆ ನಡೆಸುವಂತೆ ಕೋರಿ ಟಿವಿಕೆ ಸಲ್ಲಿಸಿದ್ದ ಅರ್ಜಿ ಮೇರೆಗೆ ಸುಪ್ರೀಂ ಕೋರ್ಟ್ ಈ ಪ್ರಕರಣವನ್ನು ಸಿಬಿಐಗೆ ವಹಿಸಿತ್ತು. ಸೆ.27ರಂದು ಸಂಭವಿಸಿದ್ದ ಕಾಲ್ತುಳಿತದಲ್ಲಿ 41 ಮಂದಿ ಮೃತಪಟ್ಟಿದ್ದರು.

ಕರ್ನೂಲ್: ಮದ್ಯದ ಮತ್ತಿನಲ್ಲಿದ್ದ ಬೈಕ್ ಸವಾರ

ಒಂದನೇ ಪುಟದಿಂದ...

‘ಮದ್ಯ ಕುಡಿದಿರುವುದು ಪ್ರಾದೇಶಿಕ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ನಡೆಸಿದ ಬೈಕ್ ಸವಾರನ ಒಳಾಂಗಗಳ ಮಾದರಿಯ ಪರೀಕ್ಷೆಯಲ್ಲಿ ಪತ್ತೆಯಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಾಂತ್ ಪಾಟೀಲ್ ತಿಳಿಸಿದ್ದಾರೆ.

ಸ್ನೇಹಿತ ಯರ‍್ರಿಸ್ವಾಮಿ ನೀಡಿದ ದೂರಿನ ಅನ್ವಯ, ಶಿವಶಂಕರ್ ವಿರುದ್ಧ ಉಲಿಂಡಕೊಂಡ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿದೆ. ಆರೋಪಿಯು ಅಜಾಗರೂಕತೆಯಿಂದ ವಾಹನ ಚಲಾಯಿಸಿ, ಸಾವಿಗೆ ಕಾರಣವಾದ ಕಾರಣ ಬಿಎನ್‌ಎಸ್ ಸೆಕ್ಷನ್ 281, 125(ಎ) ಹಾಗೂ 106(1) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಪ್ರಯಾಣಿಕ ರಮೇಶ್ ನೀಡಿದ ದೂರಿನ ಅನ್ವಯ ಬಸ್ ಚಾಲಕ ಮಿರಿಯಾಲ ಲಕ್ಷ್ಮಯ್ಯ ಆರೋಪಿ ನಂ.1, ಬಸ್ ಮಾಲೀಕ ವೇಮೂರಿ ವಿನೋದ್ ಕುಮಾರ್ ಅವರನ್ನು ಆರೋಪಿ ನಂ.2 ಎಂದು ಹೆಸರಿಸಲಾಗಿದೆ.

‘ಕುಡಿದು ವಾಹನ ಚಲಾಯಿಸುವವರು ಭಯೋತ್ಪಾದಕರು’

ಹೈದರಾಬಾದ್: ಕರ್ನೂಲ್ ಬಳಿ ಬಸ್ ದುರಂತ ನಡೆಯಲು ಕಾರಣ ಎನ್ನಲಾದ ಮದ್ಯಪಾನ ಮಾಡಿದ್ದ ಬೈಕ್ ಸವಾರನ ವಿಡಿಯೊ ಹಂಚಿಕೊಂಡು ಟ್ವೀಟ್ ಮಾಡಿರುವ ಹೈದರಾಬಾದ್ ಪೊಲೀಸ್ ಆಯುಕ್ತ ವಿ.ಸಿ. ಸಜ್ಜನರ, ಕುಡಿದು ವಾಹನ ಚಲಾಯಿಸುವವರು ಭಯೋತ್ಪಾದಕರಿದ್ದಂತೆ ಎಂದು ಕಿಡಿಕಾರಿದ್ದಾರೆ.

ವಿ.ಸಿ. ಸಜ್ಜನರ

‘ಕರ್ನೂಲ್ ಬಸ್ ದುರಂತ ಒಂದು ಅಪಘಾತ ವಲ್ಲ. ಇದು ಬೈಕ್ ಚಾಲಕನ ಬೇಜವಾಬ್ದಾರಿತನದ ವರ್ತನೆ. ಅವನಿಂದಲೇ ಅಮಾಯಕರು ಪ್ರಾಣ ಕಳೆದುಕೊಂಡಿರುವುದು ತಿಳಿದು ಬಂದಿದೆ. ಇಂತವರನ್ನು ಯಾರೂ ಕ್ಷಮಿಸುವುದಿಲ್ಲ’ ಎಂದಿದ್ದಾರೆ.

14 ಪ್ರಕರಣಗಳು ದಾಖಲು

ಬಸ್ ದುರಂತದಿಂದ ಎಚ್ಚೆತ್ತುಕೊಂಡಿರುವ ತೆಲಂಗಾಣ ಸಾರಿಗೆ ಇಲಾಖೆಯ ಅಧಿಕಾರಿಗಳು ಸುರಕ್ಷತೆ ಹಾಗೂ ‘ಫಿಟ್ನೆಸ್’ ನಿಯಾಮವಳಿಗಳನ್ನು ಉಲ್ಲಂಘಿಸಿದ ಖಾಸಗಿ ಬಸ್‌ಗಳ ಮೇಲೆ ಕಠಿಣ ಕ್ರಮ ಕೈಗೊಂಡಿದ್ದಾರೆ.

‘ಸುರಕ್ಷತಾ ಕ್ರಮಗಳ ಕೊರತೆ ಹೊಂದಿರುವ ಬಸ್‌ಗಳ ಮೇಲೆ 14 ಪ್ರಕರಣಗಳನ್ನು ದಾಖಲಿಸಿದ್ದು, ₹46 ಸಾವಿರ ದಂಡ ಸಂಗ್ರಹಿಸಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಹೈದರಾಬಾದ್‌ನಿಂದ ನಿತ್ಯವೂ 500ಕ್ಕೂ ಅಧಿಕ ಬಸ್‌ಗಳು ಅಂತರರಾಜ್ಯ ಸಂಚರಿಸುತ್ತವೆ.

ಲಖನೌ: ಬಸ್‌ಗೆ ಬೆಂಕಿ

ಪ್ರಜಾವಾಣಿ ವಾರ್ತೆ

ಲಖನೌ (ಪಿಟಿಐ): ಇಲ್ಲಿನ ಆಗ್ರಾ–ಲಖನೌ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಡಬಲ್ ಡೆಕ್ಕರ್ ಹವಾನಿಯಂತ್ರಿತ ಸ್ಲೀಪರ್ ಬಸ್‌ವೊಂದಕ್ಕೆ ಭಾನುವಾರ ಬೆಳಿಗ್ಗೆ ಬೆಂಕಿ ಹೊತ್ತಿಕೊಂಡಿದ್ದು, ಎಲ್ಲ ಪ್ರಯಾಣಿಕರು ಸುರಕ್ಷಿತವಾಗಿ ಪಾರಾಗಿದ್ದಾರೆ.

ರೇವ್ರಿ ಟೋಲ್ ಪ್ಲಾಜಾ ಬಳಿ ಬೆಳಿಗ್ಗೆ 4.45ಕ್ಕೆ ಈ ಘಟನೆ ಸಂಭವಿಸಿದೆ. ಒಂದು ಗಂಟೆಯೊಳಗೆ ಬೆಂಕಿ ನಂದಿಸಲಾಗಿದ್ದು, ಬಸ್‌ನಲ್ಲಿದ್ದ ಎಲ್ಲರನ್ನೂ ರಕ್ಷಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಖಾಸಗಿ ಸಂಸ್ಥೆಯ ಬಸ್ ಇದಾಗಿದ್ದು, ದೆಹಲಿಯಿಂದ ಗೊಂಡಾಗೆ ಲಖನೌ ಮಾರ್ಗವಾಗಿ ಚಲಿಸುತ್ತಿತ್ತು. ಬೆಂಕಿ ಹೊತ್ತಿಕೊಂಡಾಗ ಬಸ್‌ನಲ್ಲಿ 39 ಪ್ರಯಾಣಿಕರಿದ್ದರು.

‘ಬಸ್‌ನ ಚಕ್ರವೊಂದರಲ್ಲಿ ಮೊದಲು ಬೆಂಕಿ ಕಾಣಿಸಿಕೊಂಡಿತು. ನಂತರ ಬೆಂಕಿಯು ಬಸ್ ಅನ್ನು ಆವರಿಸಿತು. ಚಕ್ರಕ್ಕೆ ಬೆಂಕಿ ಹೊತ್ತಿಕೊಳ್ಳಲು ಕಾರಣ ತಿಳಿದಿಲ್ಲ’ ಎಂದು ಬಸ್ ಚಾಲಕ ತಿಳಿಸಿದ್ದಾರೆ.

ಆರ್‌ಎಸ್‌ಎಸ್ ಸೇರಿ 10 ಸಂಘಗಳಿಗೆ ಜಿಲ್ಲಾಡಳಿತ ಆಹ್ವಾನ

ಚಿತ್ತಾಪುರ ಪಥಸಂಚಲನ: 28ಕ್ಕೆ ಶಾಂತಿ ಸಭೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಿಲ್ಲೆಯ ಚಿತ್ತಾಪುರದಲ್ಲಿ ನ.2ರಂದು ಪಥಸಂಚಲನ–ಪ್ರತಿಭಟನೆ ನಡೆಸಲು ಉದ್ದೇಶಿಸಿರುವ ಸಂಘಟನೆಗಳೊಂದಿಗೆ ಅ.28ರಂದು ಶಾಂತಿ ಸಭೆ ನಡೆಯಲಿದ್ದು, ಹಾಜರಾಗುವಂತೆ 10 ಸಂಘಟನೆಗಳಿಗೆ ಜಿಲ್ಲಾಡಳಿತ ನೋಟಿಸ್ ನೀಡಿದೆ.

‘ಈ ಸಂಬಂಧ ಜಿಲ್ಲಾಧಿಕಾರಿ ಹೈಕೋರ್ಟ್‌ನ ಕಲಬುರಗಿ ಪೀಠಕ್ಕೆ ಸಲ್ಲಿಸಿದ ವರದಿ ಪ್ರಕಾರ ಹಾಗೂ ವಿಚಾರಣೆ ವೇಳೆ ಹೈಕೋರ್ಟ್ ನೀಡಿದ ಆದೇಶದಂತೆ ಅ.28ರಂದು ಬೆಳಿಗ್ಗೆ 11.30ಕ್ಕೆ ಶಾಂತಿ ಸಭೆ ನಿಗದಿಪಡಿಸಲಾಗಿದೆ’ ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

‘ಶಾಂತಿ ಸಭೆಯಲ್ಲಿ ಪ್ರತಿ ಸಂಘಟನೆಯಿಂದ ಗರಿಷ್ಠ ಮೂವರು ಸದಸ್ಯರು ಹಾಜರಾಗಬಹುದು. ಲಿಖಿತ ಹೇಳಿಕೆ ಸಲ್ಲಿಸಲೂ ಅವಕಾಶವಿದೆ’ ಎಂದು ತಿಳಿಸಲಾಗಿದೆ.

ಆರ್‌ಎಸ್‌ಎಸ್, ದಲಿತ ಪ್ಯಾಂಥರ್, ಭೀಮ್ ಆರ್ಮಿ, ಗೊಂಡ–ಕುರುಬ ಎಸ್ಟಿ ಹೋರಾಟ ಸಮಿತಿ, ಕರ್ನಾಟಕ ರಾಜ್ಯದ ಛಲವಾದಿ ಕ್ಷೇಮಾಭಿವೃದ್ಧಿ ಸಂಘ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸೇರಿದಂತೆ 10 ಸಂಘಟನೆಗಳಿಗೆ ನೋಟಿಸ್ ಕೊಟ್ಟಿದೆ.

ದೇವರಿಗಿಂತ ದೊಡ್ಡವರಾ?: ಸಚಿವ ಪ್ರಿಯಾಂಕ್ ಖರ್ಗೆ

ಬೆಂಗಳೂರು: ‘ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ನೋಂದಣಿ ಆಗುವುದಿಲ್ಲ, ದೇಣಿಗೆ ಲೆಕ್ಕ ಕೊಡುವುದಿಲ್ಲ ಎಂದರೆ ಅವರು ದೇವರಿಗಿಂತ ದೊಡ್ಡವರೇ’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಆರ್‌ಎಸ್‌ಎಸ್ ಕಾನೂನು ಪ್ರಕಾರ ನಡೆದುಕೊಳ್ಳಬೇಕು. ಆರ್‌ಎಸ್‌ಎಸ್‌ಗೆ ದೇಣಿಗೆ ಕೊಡುವವರು ಯಾರು ಎಂಬುದು ತಿಳಿಯಬೇಕು. ದೇವಾಲಯದ ಹುಂಡಿ ಹಣದ ಲೆಕ್ಕ ನೀಡಿ, ದೇವಾಲಯದ ಜೀರ್ಣೋದ್ಧಾರಕ್ಕೆ ಬಳಸುತ್ತಾರೆ. ಇವರು ದೇವರಿಗಿಂತ ದೊಡ್ಡವರೆಂದರೆ ಕೇಳಬೇಕೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾನೂನು ಪಾಲಿಸಲೇಬೇಕು: ‘ನ. 2ರಂದು ಆರ್‌ಎಸ್‌ಎಸ್ ಪಥಸಂಚಲನ ಮಾಡುತ್ತೇವೆ’ ಎಂದು ಕಲ್ಲಡ್ಕ ಪ್ರಭಾಕರ್ ಭಟ್ ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್, ‘ಕಲ್ಲಡ್ಕ ಪ್ರಭಾಕರ್ ಭಟ್ ಕಾನೂನು, ಸಂವಿಧಾನಕ್ಕಿಂತ ದೊಡ್ಡವರೇ? ಕಾನೂನು ಮೀರಿ ಮಾಡಿದರೆ ಸರ್ಕಾರ ಸುಮ್ಮನಿರುತ್ತದೆಯೇ? ಕಲ್ಲಡ್ಕ ಪ್ರಭಾಕರ್ ಭಟ್ ಅಲ್ಲ, ಅವರಪ್ಪನಾದರೂ ಅಷ್ಟೇ, ಕಾನೂನು ಪ್ರಕಾರವೇ ನಡೆದುಕೊಳ್ಳಬೇಕು’ ಎಂದರು.

‘ಆರ್‌ಎಸ್‌ಎಸ್ ದೇಣಿಗೆ ಬಗ್ಗೆ ನಿಮ್ಮ ಸರ್ಕಾರ ಈ ಹಿಂದೆ ಯಾಕೆ ತನಿಖೆ ಮಾಡಿಲ್ಲ’ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್, ‘ಅದೇ ನಮ್ಮಿಂದ ಆಗಿರುವ ತಪ್ಪು. ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಂದ ಹಿಡಿದು ಇಂದಿರಾಗಾಂಧಿವರೆಗೆ ದೊಡ್ಡ ಮನಸ್ಸು ಮಾಡಿದ ಕಾರಣ ಆರ್‌ಎಸ್‌ಎಸ್‌ನವರು ಈ ಥರ ಬೆಳೆದಿದ್ದಾರೆ. ಹಿಂದುಳಿದವರು, ದಲಿತರನ್ನು ಕಾಲಾಳು ಮಾಡಿಕೊಂಡಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ನಿನ್ನನ್ನು ದ್ವೇಷಿಸುವವರನ್ನು ದ್ವೇಷಿಸುವ ಬದಲಿಗೆ ಅವರನ್ನು ಪ್ರೀತಿಯಿಂದ ಗೆಲ್ಲು.

–ಗೌತಮ ಬುದ್ಧ

ಸಂಪಾದಕೀಯ

ಮತಗಳವು: ಚುನಾವಣಾ ಆಯೋಗ ವಿಶ್ವಾಸಾರ್ಹತೆ ಕಳೆದುಕೊಳ್ಳದಿರಲಿ

ಕಲಬುರಗಿ ಜಿಲ್ಲೆಯ ಆಳಂದ ವಿಧಾನಸಭಾ ಕ್ಷೇತ್ರದಲ್ಲಿ 'ಮತಗಳ್ಳತನ' ನಡೆದಿರುವ ಆರೋಪಗಳ ಬಗ್ಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ನಡೆಸುತ್ತಿರುವ ತನಿಖೆಯಿಂದ ಹೊರಬರುತ್ತಿರುವ ಸಂಗತಿಗಳು ಭಾರತದ ಚುನಾವಣಾ ಪ್ರಕ್ರಿಯೆಯ ವಿಶ್ವಾಸಾರ್ಹತೆ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಮೂಡಿಸುವಂತಿವೆ. 2023ರ ವಿಧಾನಸಭಾ ಚುನಾವಣೆಗೂ ಮುನ್ನ ಒಬ್ಬ ಮತದಾರನ ಚೀಟಿಯನ್ನು ಅಕ್ರಮವಾಗಿ ರದ್ದುಪಡಿಸಲು ₹80 ಪಾವತಿ ಮಾಡಲಾಗುತ್ತಿತ್ತು ಎನ್ನುವುದು ಎಸ್‌ಐಟಿ ತನಿಖೆಯಲ್ಲಿ ತಿಳಿದುಬಂದಿದೆ. ಆರು ಸಾವಿರಕ್ಕೂ ಹೆಚ್ಚು ಮತದಾರರ ಚೀಟಿಗಳನ್ನು ಅಕ್ರಮವಾಗಿ ರದ್ದುಗೊಳಿಸಲು ಫಾರ್ಮ್–7 ಸಲ್ಲಿಸಲಾಗಿದೆ. ಇದಕ್ಕಾಗಿ ₹4.80 ಲಕ್ಷ ಪಾವತಿ ಮಾಡಲಾಗಿದೆ ಎಂದು ಹೇಳಲಾಗಿದೆ. ಅಕ್ರಮವಾಗಿ ರದ್ದುಪಡಿಸಲು ಸಲ್ಲಿಸಲಾದ ಹೆಚ್ಚಿನ ಅರ್ಜಿಗಳು ದಲಿತರು ಹಾಗೂ ಅಲ್ಪಸಂಖ್ಯಾತ ವರ್ಗದ ಮತದಾರರಿಗೆ ಸೇರಿವೆ. ಮತದಾರರ ಪಟ್ಟಿಯಲ್ಲಿನ ಅಕ್ರಮದ ಪ್ರಮಾಣ ಮತ್ತು ಸ್ವರೂಪ ಚುನಾವಣಾ ಆಯೋಗಕ್ಕೆ ಎಚ್ಚರಿಕೆಯ ಗಂಟೆಯಂತಿದೆ. ದುರದೃಷ್ಟವಶಾತ್, ಆರೋಪಗಳಿಂದ ಎಚ್ಚೆತ್ತುಗೊಳ್ಳಬೇಕಾದ ಆಯೋಗ ಅಕ್ರಮ ಜರುಗಿರುವುದನ್ನು ಸಾರಾಸಗಟಾಗಿ ನಿರಾಕರಿಸುವ ಮೂಲಕ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಮಾರ್ಗವನ್ನು ಆರಿಸಿಕೊಂಡಿದೆ.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಮತಗಳ್ಳತನದ ತನಿಖೆಗೆ ಅಡ್ಡಿ ಮಾಡುತ್ತಿದ್ದಾರೆ ಎಂದು ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಆರೋಪಿಸುವ ಮೂಲಕ ಆಳಂದದ ಪ್ರಕರಣ ದೇಶದ ಗಮನಸೆಳೆದಿತ್ತು. ಎಸ್‌ಐಟಿಗೆ ಮುನ್ನ ತನಿಖೆ ನಡೆಸಿದ್ದ ಸಿಐಡಿ, ಅಗತ್ಯ ತಾಂತ್ರಿಕ ದತ್ತಾಂಶಗಳನ್ನು ಒದಗಿಸುವಂತೆ ಬರೆದ ಹದಿನೆಂಟು ಪತ್ರಗಳಿಗೆ ಆಯೋಗ ಒಮ್ಮೆಯೂ ಸ್ಪಂದಿಸಲಿಲ್ಲ ಎಂದು ರಾಹುಲ್ ಗಾಂಧಿ ದೂರಿದ್ದರು. ತನಿಖೆಗೆ ಆಯೋಗದ ಸಹಕಾರ ದೊರೆಯುತ್ತಿಲ್ಲ ಎಂದು ರಾಜ್ಯ ಸರ್ಕಾರವೂ ಹೇಳಿದೆ. ಈ ಮೊದಲು, ಬೆಂಗಳೂರಿನ ಮಹದೇವಪುರ ವಿಧಾನಸಭಾ ಕ್ಷೇತ್ರದ ಮತಪಟ್ಟಿಯಲ್ಲಿ ದೊಡ್ಡ ಪ್ರಮಾಣದ ಲೋಪದೋಷಗಳು ಇರುವುದಾಗಿ ರಾಹುಲ್ ಆರೋಪಿಸಿದ್ದರು. ಆ ಬಗ್ಗೆ ಪರಿಶೀಲನೆ ನಡೆಸಿದ ಸ್ವತಂತ್ರ ಸತ್ಯಶೋಧನಾ ತಂಡಗಳು, ಮತದಾರರ ಪಟ್ಟಿಯಲ್ಲಿ ಲೋಪಗಳು ಇರುವುದನ್ನು ದೃಢೀಕರಿಸಿದ್ದವು. ಆರೋಪಗಳಿಗೆ ಸಂಬಂಧಿಸಿದ ತನಿಖೆಗೆ ಸಹಕಾರ ನೀಡದಿರುವುದು ಹಾಗೂ ಮತದಾರರ ಪಟ್ಟಿಯಲ್ಲಿ ಕಂಡುಬಂದಿರುವ ವ್ಯತ್ಯಾಸಗಳ ಬಗ್ಗೆ ಚುನಾವಣಾ ಆಯೋಗ ಮೌನವಾಗಿರುವುದು ಅದರ ಬಗ್ಗೆ ಸಾರ್ವಜನಿಕರು ಹೊಂದಿರುವ ವಿಶ್ವಾಸಾರ್ಹತೆಗೆ ಕುಂದು ತರುವಂತಿದೆ. ಆಯೋಗದ ನಡವಳಿಕೆಯೂ ಸಮಸ್ಯಾತ್ಮಕವಾಗಿದೆ. ರಾಹುಲ್ ಗಾಂಧಿ ಅವರು ಮತಗಳ್ಳತನದ ಆರೋಪಗಳನ್ನು ಮಾಡಿದಾಗ, ಪ್ರಮಾಣಪತ್ರ ಸಲ್ಲಿಸುವಂತೆ ಆಯೋಗ ಒತ್ತಾಯಿಸಿತ್ತು. ಇದೇ ಬಗೆಯ ಆರೋಪಗಳನ್ನು ಬಿಜೆಪಿ ಮುಖಂಡರು ಮಾಡಿದಾಗ ಆಯೋಗ ಯಾವುದೇ ಬಗೆಯ ಪ್ರಮಾಣಪತ್ರ ಕೇಳಲಿಲ್ಲ. ಮತದಾರರ ಪಟ್ಟಿಯ ದತ್ತಾಂಶಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ಹಿಡಿತ ಹೊಂದಿರುವ ಆಯೋಗ, ಬೇರೆಯವರಿಂದ ಸಾಕ್ಷ್ಯಗಳನ್ನು ನಿರೀಕ್ಷಿಸುವುದು ವಿಚಿತ್ರವಾಗಿದೆ. ಸಾಕ್ಷ್ಯ ಹಾಗೂ ಸಮಗ್ರ ಮಾಹಿತಿ ತನ್ನ ಬಳಿಯೇ ಇದ್ದರೂ, ಆರೋಪಗಳು ಎದುರಾದ ಸಂದರ್ಭದಲ್ಲಿ ಅದನ್ನು ಸರಿಪಡಿಸುವ ಹೊಣೆಗಾರಿಕೆಯನ್ನು ಪ್ರದರ್ಶಿಸುವಲ್ಲಿ ಆಯೋಗ ವಿಫಲವಾಗಿದೆ. ಚುನಾವಣಾ ಪ್ರಕ್ರಿಯೆಯಲ್ಲಿ ಆಗಿರಬಹುದಾದ ಅಕ್ರಮಗಳನ್ನು ಗುರ್ತಿಸಿ ಸರಿಪಡಿಸಿಕೊಳ್ಳುವ ಅಗತ್ಯವನ್ನು ಆಯೋಗ ಗಂಭೀರವಾಗಿ ಪರಿಗಣಿಸಿರುವಂತೆ ಕಾಣಿಸುತ್ತಿಲ್ಲ.

> ಮತಗಳ್ಳತನದ ಆರೋಪಗಳ ಕುರಿತಂತೆ ಚುನಾವಣಾ ಆಯೋಗದ ನಿರ್ಲಕ್ಷ್ಯ ಹಾಗೂ ಮೌನ ಸರಿಯಲ್ಲ. ಆಯೋಗ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುವುದು ಅದರ ವಿಶ್ವಾಸಾರ್ಹತೆಗೆ ತಕ್ಕುದಲ್ಲ.

ಮತದಾನದ ಪಾವಿತ್ರ್ಯವನ್ನು ರಕ್ಷಿಸುವುದು ಚುನಾವಣಾ ಆಯೋಗದ ಕರ್ತವ್ಯವಾಗಿದೆಯೇ ಹೊರತು, ತನ್ನನ್ನು ತಾನು ಪರಿಶೀಲನೆಗಳಿಂದ ತಪ್ಪಿಸಿಕೊಳ್ಳುವುದಲ್ಲ. ತನಿಖೆಗಳಿಗೆ ಸಹಕರಿಸದಿರುವುದು ಹಾಗೂ ಕಾನೂನುಬದ್ಧ ಪ್ರಶ್ನೆಗಳನ್ನು ಕೇಳದಿರುವಂತೆ ತಡೆಯುವ ನಡವಳಿಕೆ, ಆಯೋಗದ ನೈತಿಕ ಶಕ್ತಿಯನ್ನು ಕುಗ್ಗಿಸುವಂತಹದ್ದು ಹಾಗೂ ಪ್ರಜಾಸತ್ತಾತ್ಮಕ ಪ್ರಕ್ರಿಯೆ ಬಗ್ಗೆ ಸಾರ್ವಜನಿಕರು ಇಟ್ಟಿರುವ ನಂಬಿಕೆಯನ್ನು ಹಾಳುಮಾಡುವಂತಹದ್ದು. ಆಳಂದ ಪ್ರಕರಣದಲ್ಲಿನ ಅಕ್ರಮಗಳನ್ನು ನಿರ್ಲಕ್ಷಿಸುವ ಧೋರಣೆ ಆಯೋಗದ ಸಾಂಸ್ಥಿಕ ವಿಶ್ವಾಸಾರ್ಹತೆಗೆ ಧಕ್ಕೆ ತರುವಂತಿದೆ. ಪ್ರಶ್ನೆಗಳು ಎದುರಾದಾಗ ಮುಕ್ತವಾಗಿ ಎದುರಿಸಬೇಕೇ ಹೊರತು, ಇನ್ನಷ್ಟು ಸಂಶಯಕ್ಕೆ ಆಸ್ಪದ ಕಲ್ಪಿಸುವಂತಾಗಬಾರದು. ರಕ್ಷಣಾತ್ಮಕ ವರ್ತನೆಯಿಂದ ಆಯೋಗ ಹೊರಬಂದು ಹೊಣೆಗಾರಿಕೆಯಿಂದ ನಡೆದುಕೊಳ್ಳಬೇಕಾಗಿದೆ. ಉತ್ತರದಾಯಿತ್ವದಿಂದ ನುಣುಚಿಕೊಳ್ಳುವುದೇ ಆಯ್ಕೆಯಾದಲ್ಲಿ, ಆಯೋಗ ತನ್ನ ಘನತೆಯನ್ನು ಕಳೆದುಕೊಳ್ಳಲಿದೆ ಹಾಗೂ ನ್ಯಾಯಸಮ್ಮತ ಚುನಾವಣೆಗಳ ಬಗೆಗಿನ ಸಾರ್ವಜನಿಕರ ನಂಬಿಕೆಯೂ ಅಪಾಯಕ್ಕೆ ಸಿಲುಕಲಿದೆ.

ಚಾಟಿ

ಹುಸಿ ಪ್ರಚಾರ

ನಿಮ್ಮ ರಾಷ್ಟ್ರೀಯತೆಗಿಂತಲೂ ಕರ್ನಾಟಕ ದೊಡ್ಡದು– ಹೀಗೆ ಕನ್ನಡಿಗರು ಹೇಳದೇ ಇದ್ದರೆ ಇವರು ಕನ್ನಡ, ಕರ್ನಾಟಕವನ್ನು ಹಿಂದೀಸ್ಥಾನ್ ಮಾಡಲೂ ಹೇಸರು... ಹಿಂದಿ ರಾಷ್ಟ್ರಭಾಷೆ ಎಂಬುದು ಬಿಜೆಪಿಗರ ಹುಸಿ ಪ್ರಚಾರ. ಹತ್ತು ರೂಪಾಯಿ ನೋಟು ನೋಡಿ ಇವರು ಅಜ್ಞಾನ ತೊಳೆದುಕೊಳ್ಳಲಿ.

ಪ್ರಕಾಶ್ ಮಂಟೇದ, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಬೆಂಗಳೂರಿನ ರಸ್ತೆಗಳನ್ನು ಸರಿಪಡಿಸಬೇಕಾದ ರಾಜ್ಯ ಸರ್ಕಾರ ಐ.ಟಿ–ಬಿ.ಟಿ ಕಂಪನಿಗಳಿಗೆ ಬೆದರಿಕೆ ಒಡ್ಡುತ್ತಾ, ವಿಷಯಾಂತರ ಮಾಡುವುದರಲ್ಲೇ ನಿರತವಾಗಿದೆ. ಸರ್ಕಾರದ ಪ್ರಾಯೋಜಿತ ರಸ್ತೆ ಹೊಂಡಕ್ಕೆ 26 ವರ್ಷದ ಯುವ ಬ್ಯಾಂಕ್ ಉದ್ಯೋಗಿ ಬಲಿಯಾಗಿದ್ದಾರೆ. ಇಂತಹ ಅನ್ಯಾಯದ ಸಾವುಗಳಿಗೆ ಕೊನೆ ಎಂದು?

ಸಿ.ಟಿ. ರವಿ, ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

• **ಬಿಡುವು**

ನರಕ ಚತುರ್ದಶಿ ಪ್ರಯುಕ್ತ 2000 ಇಸವಿಯ ಅಕ್ಟೋಬರ್ 26ರಂದು ಕಚೇರಿಗೆ ಬಿಡುವಿತ್ತು. ಹಾಗಾಗಿ, ಅ. 27ರ ಶುಕ್ರವಾರದ ಸಂಚಿಕೆ ಪ್ರಕಟವಾಗಿಲ್ಲ.

75 ವರ್ಷಗಳ ಹಿಂದೆ

ಶುಕ್ರವಾರ, 27-10-1950

• **ಬೆಣ್ಣೆ ನಿಯಂತ್ರಣ ಸರ್ಕಾರ ಉರುಳಿಸಿತು**

ಕೂಪನ್‌ಹೇಗನ್, ಅ. 26– ಡೆನ್ಮಾರ್ಕ್‌ನ ಸೋಷಿಯಲಿಸ್ಟ್ ಪ್ರಧಾನಿ ಹಾನ್ಸ್ ಹೆಡ್ ಟಾಫ್ಟ್ ಇಂದು ತಮ್ಮ ಸರ್ಕಾರದ ರಾಜೀನಾಮೆಯನ್ನು ದೊರೆಗಳಿಗೆ ಸಲ್ಲಿಸಿದರು.

ಬೆಣ್ಣೆ ನಿಯಂತ್ರಣದ ಬಗ್ಗೆ ಸರ್ಕಾರಿ ಯೋಜನೆ ಪಾರ್ಲಿಮೆಂಟ್‌ನಲ್ಲಿ ಪರಾಜಿತವಾದುದೇ ಈ ರಾಜೀನಾಮೆಗೆ ಕಾರಣ.

• **'ಕೇಂದ್ರದಿಂದ ಸಕಾಲದಲ್ಲಿ ಆಹಾರ ಸರಬರಾಜಾಗಲಿ'**

ಬೆಂಗಳೂರು, ಅ. 26– ಕೇಂದ್ರ ದಿಂದ ಬರಬೇಕಾದ ಆಹಾರ ಸಹಾಯ ಸಕಾಲಕ್ಕೆ ಒದಗಿದಲ್ಲಿ ಮೈಸೂರಿನ ಆಹಾರ ಪರಿಸ್ಥಿತಿ ಹತೋಟಿಯಲ್ಲಿ ಇರಲಿದೆ ಎಂದು ಮೈಸೂರಿನ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ನುಡಿದರು.

ಮುಂದುವರಿದು, ಈ ಸಾಲಿನ ಆಹಾರ ಸಂಗ್ರಹಣೆ ಕಾರ್ಯ ಈಗಾಗಲೇ ಮುಗಿದಿರುವುದರಿಂದ ಮುಂದಿನ ಕಟಾವಿನವರೆಗೆ ಅಂದಾಜುಗಳ ರೀತ್ಯಾ 29,000 ಟನ್ ಆಹಾರ ಕೊರತೆ ಎದುರಾಗಿದೆ ಎಂದು ತಿಳಿಸಿದರು.

ಭಾರತ ಸರ್ಕಾರ ನವೆಂಬರ್ ಮಾಹೆಗೆ 13,000 ಟನ್‌ಗಳನ್ನು ಮೈಸೂರಿಗೆ ಕೊಡುವುದಾಗಿಯೂ, ಡಿಸೆಂಬರ್‌ನಲ್ಲೂ ಕೇಂದ್ರ ಆಹಾರ ಒದಗಿಸುವ ನಿರೀಕ್ಷೆ ಇದೆ ಎಂದು ಕೆ.ಸಿ. ರೆಡ್ಡಿ ನುಡಿದರು.

• **ಟಿಬೆಟ್ ಸರ್ಕಾರಕ್ಕೆ ಇನ್ನೂ ಸುದ್ದಿ ದೊರೆತಿಲ್ಲ**

ಕಾಲಿಂಪೊಂಗ್, ಅ. 26– ಚೀಣೀ ಪಡೆಗಳು ಟಿಬೆಟ್ ಗಡಿ ಪ್ರವೇಶಿಸಿರುವ ಬಗ್ಗೆ ಪೂರ್ವ ಗಡಿಯಿಂದ ತಮಗೆ ಯಾವ ಸುದ್ದಿಯೂ ಬಂದಿಲ್ಲವೆಂದು ಟಿಬೆಟ್ ಸರ್ಕಾರಿ ವೃತ್ತಗಳವರು ತಿಳಿಸಿದರು.

ಬಿಹಾರ: ಅಗ್ನಿಪರೀಕ್ಷೆಯ ಕುದಿನೆಲ

ವಿಶ್ಲೇಷಣೆ

ಬಿ.ಎಸ್. ಅರುಣ್

> ಬಿಹಾರದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆ ಆ ರಾಜ್ಯದಲ್ಲಿನ ಇದುವರೆಗಿನ ಚುನಾವಣೆಗಳಲ್ಲೇ ಅತ್ಯಂತ ಸಂಕೀರ್ಣವಾದುದು. ಬಿಜೆಪಿ ಜನಪ್ರಿಯತೆ ಮತ್ತು ನಿತೀಶ್ ಅವರ ಭವಿಷ್ಯದ ಪರೀಕ್ಷೆಯಾಗಿರುವ ಈ ಹಣಾಹಣಿ, 'ಮಹಾಘಟಬಂಧನ್'ಗೆ ಅಗ್ನಿಪರೀಕ್ಷೆಯೂ ಹೌದು.

ಚುನಾವಣಾ ಆಯೋಗ ನಡೆಸಿದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕಾರಣದಿಂದ ಆಗಿರುವ ಮತದಾರರ ಪಟ್ಟಿಯಲ್ಲಿನ ಗೊಂದಲ, ಆಡಳಿತದಲ್ಲಿರುವ 'ಎನ್‌ಡಿಎ' ಮತ್ತು 'ಮಹಾಘಟ ಬಂಧನ್'ನಲ್ಲಿರುವ ಪಕ್ಷಗಳಲ್ಲಿನ ಸೀಟು ಹಂಚಿಕೆ ಜಟಾಪಟಿ, ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ ಅವರ ನೇತೃತ್ವದ 'ಜನ ಸುರಾಜ್' ಪಾರ್ಟಿ ನೀಡಬಹುದಾದ ಸ್ಪರ್ಧೆ – ಇವೆಲ್ಲದರ ಮಧ್ಯೆ ಉತ್ತರ ಭಾರತದ ಹಿಂದುಳಿದ ರಾಜ್ಯ ಬಿಹಾರ, ನವೆಂಬರ್ 6 ಹಾಗೂ 11ರಂದು ವಿಧಾನಸಭೆ ಚುನಾವಣೆ ಎದುರಿಸಲಿದೆ. ನವೆಂಬರ್ 14ರಂದು ಮತಗಳ ಎಣಿಕೆ ನಡೆಯಲಿದೆ. ಈ ಕದನ, ಬಿಹಾರ ಇದುವರೆಗೆ ಎದುರಿಸಿದ ಅತ್ಯಂತ ತೀವ್ರ ಸ್ಪರ್ಧೆಯ ಚುನಾವಣೆ ಎನ್ನಲಾಗಿದೆ.

ಭಾವನಾತ್ಮಕ ವಿಷಯಗಳ ಬಗ್ಗೆ ಬೇರಾವುದೇ ರಾಜ್ಯದ ಮತದಾರನಷ್ಟು ಪ್ರಭಾವಿತ ಆಗದಿರುವುದು ಬಿಹಾರದ ಮತದಾರನ ವಿಶೇಷ. ಉತ್ತರದ ಇತರ ರಾಜ್ಯಗಳಲ್ಲಿ ಜಯಭೇರಿ ಬಾರಿಸಿರುವ ಬಿಜೆಪಿ, ಬಿಹಾರದಲ್ಲಿ ಇಲ್ಲಿಯವರೆಗೆ ಬಹುಮತ ಗಳಿಸಲು ಸಾಧ್ಯವಾಗದೇ ಇರುವುದು ಬಹುಶಃ ಇದೇ ಕಾರಣಕ್ಕಿರಬಹುದು. ಅಧಿಕಾರದ ಗದ್ದುಗೆ ಹಿಡಿಯಲು ಇಲ್ಲಿ ಬಿಜೆಪಿಗೆ ಜನತಾ ದಳ (ಯುನೈಟೆಡ್) ಮತ್ತು ಇತರ ಪುಟ್ಟ ಪಕ್ಷಗಳ ಸಖ್ಯ ಅನಿವಾರ್ಯ. ಇದೇ ಕಾರಣಕ್ಕೆ ಎನ್‌ಡಿಎ ಅಥವಾ ಮಹಾಘಟಬಂಧನ್ ಮೈತ್ರಿಕೂಟದಲ್ಲಿ, ಎರಡು ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ– ಕಾಂಗ್ರೆಸ್‌ನ ಯಜಮಾನಿಕೆ ನಡೆಯುವುದಿಲ್ಲ. ಎರಡೂ ಬಣಗಳಲ್ಲಿ ಪ್ರಾದೇಶಿಕ ಪಕ್ಷಗಳದೇ ಪ್ರಾಬಲ್ಯ. ಈ ರಾಜ್ಯದಲ್ಲಿ ಪಕ್ಷವೊಂದು ಖರ್ಚು ಮಾಡುವ ಹಣದ ಪ್ರಮಾಣಕ್ಕಿಂತಲೂ ಮತದಾರನ ಸಂಪರ್ಕ ಹೊಂದಿರುವುದೇ ಹೆಚ್ಚು ಮುಖ್ಯವಾಗುತ್ತದೆ.

ಬರುವ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟದಲ್ಲಿ ಪ್ರಥಮ ಬಾರಿಗೆ ಸೀಟು ಹಂಚಿಕೆಯಲ್ಲಿ ಜೆಡಿಯುನಷ್ಟೇ ಬಿಜೆಪಿ ಸಮಪಾಲು ದೊರಕಿಸಿಕೊಂಡಿದೆ. ಇದಕ್ಕೆ ಮುಖ್ಯ ಕಾರಣ, 2020ರ ವಿಧಾನಸಭಾ ಚುನಾವಣೆಯಲ್ಲಿ ಜೆಡಿಯುಗಿಂತ ಬಿಜೆಪಿ ಹೆಚ್ಚಿನ ಸ್ಥಾನ ಗಳಿಸಿರುವುದು. ಸ್ಪರ್ಧಿಸಿದ್ದ 110 ಕ್ಷೇತ್ರಗಳಲ್ಲಿ ಬಿಜೆಪಿ 74 ಸೀಟು ಗೆದ್ದರೆ, ಜೆಡಿಯು 115 ಕ್ಷೇತ್ರಗಳಲ್ಲಿ 43ರಲ್ಲಷ್ಟೇ ಜಯಗಳಿಸಿತ್ತು. ಈ ಬಾರಿ ಎರಡೂ ಪಕ್ಷಗಳು ತಲಾ 101 ಸ್ಥಾನಗಳಲ್ಲಿ ಸ್ಪರ್ಧಿಸಿವೆ. ಕಳೆದ ಎರಡು ದಶಕಗಳಿಗೆ ಹೋಲಿಸಿದರೆ ಬಿಜೆಪಿ ಎಷ್ಟರಮಟ್ಟಿಗೆ ತನ್ನ ಬಲವನ್ನು ಹೆಚ್ಚಿಸಿಕೊಂಡಿದೆ ಎನ್ನುವುದನ್ನು ಈ ಹಂಚಿಕೆ ತಿಳಿಸುತ್ತದೆ. ಹಾಗೆಯೇ, ಜೆಡಿಯು ಕೂಡ ಬಿಜೆಪಿ ತನ್ನಷ್ಟೇ ಸಮ ಪಾಲುದಾರ ಎಂದು ಒಪ್ಪಿಕೊಂಡಿದೆ ಎಂದರ್ಥ. ಮೈತ್ರಿಕೂಟದ ಇತರ ಪಕ್ಷಗಳಾದ ಲೋಕಜನಶಕ್ತಿ ಪಾರ್ಟಿಗೆ 29, ಹಿಂದುಸ್ತಾನಿ ಆವಾಮ್ ಮೋರ್ಚಾ ಹಾಗೂ ರಾಷ್ಟ್ರೀಯ ಲೋಕ ಮೋರ್ಚಾಕ್ಕೆ ತಲಾ 6 ಸ್ಥಾನ ಕೊಡಲಾಗಿದೆ.

ಮಹಾಘಟಬಂಧನ್ ಗೊಂದಲದ ಗೂಡಾಗಿದೆ. ಮೊದಲನೇ ಹಂತದ ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾದ ನಂತರವೂ ಸೀಟು ಹಂಚಿಕೆಯ ತೀರ್ಮಾನವಾಗಿರಲಿಲ್ಲ. ಕೆಲವು ಕ್ಷೇತ್ರಗಳಲ್ಲಿ 'ಫ್ರೆಂಡ್ಲಿ ಫೈಟ್' ಇದೆ. ಆರ್‌ಜೆಡಿ 143, ಕಾಂಗ್ರೆಸ್ 61, ವಿಕಾಸಶೀಲ ಇನ್ಸಾನ್ ಪಾರ್ಟಿ 15 ಹಾಗೂ ಎಡ ಪಕ್ಷಗಳು 30 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿವೆ.

ಬಿಜೆಪಿ ನಾಯಕ ಅಮಿತ್ ಶಾ ತಮ್ಮ ಪಟ್ನಾ ಪ್ರವಾಸದಲ್ಲಿ, 'ಜೆಡಿಯುನ ನಿತೀಶ್ ಕುಮಾರ್ ಎನ್‌ಡಿಎ ಬಣದ ನಾಯಕತ್ವ ವಹಿಸುತ್ತಾರೆ' ಎಂದರೂ, ನಿತೀಶ್ ಅವರೇ ಮುಖ್ಯಮಂತ್ರಿಯಾಗುತ್ತಾರೆ ಎಂದು ಹೇಳಲಿಲ್ಲ. 'ಈ ಬಗ್ಗೆ ನಾನು ಹೇಗೆ ಮಾತನಾಡಲು ಆಗುತ್ತದೆ? ಮುಖ್ಯಮಂತ್ರಿಯನ್ನು ಶಾಸಕರು ಚುನಾಯಿಸಬೇಕಲ್ಲವೆ?' ಎಂದು ಪತ್ರಕರ್ತರ ಪ್ರಶ್ನೆಗೆ ಅವರು ಉತ್ತರಿಸಿದ್ದಾರೆ. ಈ ಉತ್ತರ ನಿತೀಶ್ ಅವರನ್ನು 5ನೇ ಬಾರಿಗೆ ಮುಖ್ಯಮಂತ್ರಿ ಮಾಡುವ ಬಗ್ಗೆ ಎನ್‌ಡಿಎ ಮೈತ್ರಿಕೂಟದಲ್ಲಿ ಒಮ್ಮತವಿಲ್ಲ ಎಂಬುವುದನ್ನು ಸೂಚಿಸುತ್ತದೆ. ಅವರ ಆರೋಗ್ಯ ಸರಿಯಿಲ್ಲವೆಂದೂ, ಮಾನಸಿಕ ಸಮತೋಲನ ಕಳೆದುಕೊಂಡಿದ್ದಾರೆಂದೂ ಹೇಳಲಾಗುತ್ತಿದೆ. ವಿರೋಧಿ ಬಣ ಮೊದಮೊದಲು ಇದನ್ನು ಅಪಹಾಸ್ಯ ಮಾಡಿದರೂ, ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರನ್ನು ತನ್ನ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಲು ಕಾಂಗ್ರೆಸ್ ಮತ್ತು ಸಿಪಿಐ (ಎಂ-ಎಲ್) ಹಿಂದೇಟು ಹಾಕುತ್ತಿದ್ದವು. ಕೊನೆಗೂ, ಮಿತ್ರಪಕ್ಷಗಳು ಆರ್‌ಜೆಡಿಗೆ ಮಣಿದು, ತೇಜಸ್ವಿ ನಾಯಕತ್ವಕ್ಕೆ ಮಣೆ ಹಾಕಿವೆ. ಅಕಸ್ಮಾತ್ ತೇಜಸ್ವಿ ಅವರನ್ನು ನಾಯಕನೆಂದು ಘೋಷಿಸಿದರೆ, ಅವರ ತಂದೆ–ತಾಯಿಯರಾದ ಲಾಲು ಪ್ರಸಾದ್–ರಾಬ್ರಿ ದೇವಿಯವರ 15 ವರ್ಷದ ಸರ್ಕಾರದಲ್ಲಿ ನಡೆದಂತಹ ಯಾದವ ಸಮುದಾಯದ ದರ್ಪ, ಯಾದವೇತರರ ಮೇಲಿನ ದಬ್ಬಾಳಿಕೆ, ಭ್ರಷ್ಟಾಚಾರ ಇವೆಲ್ಲಾ ಕಾರಣಗಳಿಂದಾಗಿ ಮುಂದುವರಿದ ಜಾತಿಗಳು, ಯಾದವೇತರ ಹಿಂದುಳಿದ ವರ್ಗಗಳು ಮತ್ತು ಪರಿಶಿಷ್ಟ ಜಾತಿಗಳು ಮಹಾಘಟಬಂಧನ್ ಮೈತ್ರಿಯನ್ನು ಬೆಂಬಲಿಸದಿರಬಹುದು ಎಂಬ ಭಯ ಮೈತ್ರಿಕೂಟಕ್ಕಿತ್ತು.

ಇನ್ನೊಂದೆಡೆ, ಎನ್‌ಡಿಎ ಗೆದ್ದು ನಿತೀಶ್‌ರನ್ನು ಮುಖ್ಯಮಂತ್ರಿ ಮಾಡದಿದ್ದರೆ ಅವರು ಮೈತ್ರಿಕೂಟ ಬಿಟ್ಟು, ಕಳೆದ ನಾಲ್ಕು ಬಾರಿ ಮಾಡಿದ ಹಾಗೆ ವಿರೋಧಿ ಬಣ ಸೇರಬಹುದೆಂಬ ಭಯವಿದೆ. ಎಲ್ಲಾ ನಕಾರಾತ್ಮಕ ಅಂಶಗಳ ಹೊರತಾಗಿಯೂ ನಿತೀಶ್ ಇನ್ನೂ ಜನಪ್ರಿಯತೆ ಉಳಿಸಿಕೊಂಡಿದ್ದಾರೆ ಎನ್ನಲಾಗುತ್ತಿದೆ. ಕಳೆದ 19 ವರ್ಷಗಳಲ್ಲಿ ಮುಖ್ಯಮಂತ್ರಿಯಾಗಿ ಮಾಡಿದ ಕೆಲವು ಒಳ್ಳೆಯ ಕಾರ್ಯಗಳು, ಯಾದವೇತರ ಹಿಂದುಳಿದ ವರ್ಗ (ಕುರ್ಮಿ–ಕೇವರಿ), ಅತಿ ಹಿಂದುಳಿದ ದಲಿತರು ಸೇರಿದಂತೆ ಮಹಿಳೆಯರ ಬೆಂಬಲ ನಿತೀಶ್ ಅವರಿಗಿದೆ. ಬಿಜೆಪಿಗೆ ದೊಡ್ಡ ಮೈನಸ್ ಪಾಯಿಂಟ್ ಎಂದರೆ, ಅದಕ್ಕೆ ರಾಜ್ಯದಲ್ಲಿ ಜನಪ್ರಿಯ ನಾಯಕರಿಲ್ಲದಿರುವುದು.

ಮಹಿಳೆಯರನ್ನು ಓಲೈಸಲು ಎನ್‌ಡಿಎ ಹಲವು ಯೋಜನೆಗಳನ್ನು ಘೋಷಿಸಿದೆ. ಕಳೆದೊಂದು ತಿಂಗಳಲ್ಲಿ ಮಹಿಳೆಯರಿಗೋಸ್ಕರ ಘೋಷಿಸಿದ ಯೋಜನೆಗಳು: 'ಮುಖ್ಯಮಂತ್ರಿ ಮಹಿಳಾ ರೋಜ್‌ಗಾರ್ ಯೋಜನೆ'ಯಡಿ 75 ಲಕ್ಷ ಮಹಿಳೆಯರ ಬ್ಯಾಂಕ್ ಖಾತೆಗೆ ತಲಾ ₹10 ಸಾವಿರ ವರ್ಗಾವಣೆ, ಸಾಮಾಜಿಕ ಭದ್ರತಾ ಯೋಜನೆ ಅಡಿ ಕೊಡುವ ಭತ್ಯೆ ₹400ರಿಂದ 1,000ಕ್ಕೆ ಹೆಚ್ಚಳ, ಅಂಗನವಾಡಿ ನೌಕರರಿಗೆ ಭತ್ಯೆ ಏರಿಕೆ, ನಿರುದ್ಯೋಗಿ ಯುವಜನರಿಗೆ ಮಾಸಿಕ ₹1,000, ಇವೆಲ್ಲವೂ ಮಹಿಳೆಯರನ್ನು ನಿತೀಶ್ ಕುಮಾರ್ ಕಡೆಗೆ ಸೆಳೆಯಲು ಸಹಾಯ ಮಾಡಲಿವೆ ಎಂದು ಹೇಳಲಾಗುತ್ತಿದೆ.

ಕಳೆದ ಎರಡು ದಶಕಗಳಿಂದ ಚಾಲ್ತಿಯಲ್ಲಿರುವ 'ಜೀವಿಕಾ' ಮಹಿಳಾ ಸ್ವಸಹಾಯ ಸಂಘಗಳು 1.5 ಕೋಟಿ ಕುಟುಂಬಗಳಿಗೆ ಸಹಾಯ ಮಾಡಿವೆಯೆಂದು ಹೇಳಲಾಗಿದೆ. ಕೆಲವು ವರ್ಷಗಳ ಹಿಂದೆ ಸೈಕಲ್ ಫಲಾನುಭವಿಗಳಾದ ಶಾಲಾ ಬಾಲಕಿಯರು ಈಗ ಮಹಿಳೆಯರಾಗಿ, ಅನೇಕ ಕುಟುಂಬಗಳಲ್ಲಿ ತೀರ್ಮಾನ ತೆಗೆದುಕೊಳ್ಳುವುದರಲ್ಲಿ ಸಹಾಯ ಮಾಡುತ್ತಾರೆ. ಪಂಚಾಯಿತಿಗಳಲ್ಲಿ ಶೇ 50 ಸ್ಥಾನ, ಪೊಲೀಸ್ ಸೇರಿ ಸರ್ಕಾರಿ ಹುದ್ದೆಗಳಲ್ಲಿ ಶೇ 35 ಹುದ್ದೆಗಳನ್ನು ನಿತೀಶ್ ಮಹಿಳೆಯರಿಗೆ ಮೀಸಲಿಟ್ಟಿದ್ದಾರೆ. ಇವೆಲ್ಲವನ್ನೂ ನೋಡಿದ ವಿರೋಧಿ ಬಣ ತಾನೂ ಜನಸಾಮಾನ್ಯರಿಗೆ ಯೋಜನೆಗಳನ್ನು ಘೋಷಿಸುವುದರಲ್ಲಿ ಪೈಪೋಟಿ ನಡೆಸಿದೆ.

ಚುನಾವಣಾ ಪ್ರಚಾರದಲ್ಲಿ ಜಾತಿ, ಅದರಲ್ಲೂ ಹಿಂದುಳಿದ ವರ್ಗಗಳು ಮತ್ತು ವಿಶೇಷ ಸಮಗ್ರ ಪರಿಷ್ಕರಣೆ, ಮಹಿಳೆಯರಿಗೆ ಕೊಟ್ಟ ಸವಲತ್ತು, 'ನುಸುಳುಕೋರರು' ಮುಖ್ಯ ವಿಷಯಗಳಾಗಿವೆ. ಪ್ರಶಾಂತ್ ಕಿಶೋರ್ ಅವರ ಪಕ್ಷದ ಸ್ಪರ್ಧೆ, ಅವರ ಪ್ರಚಾರದ ವಿಷಯಗಳು ಜನರ ಮಧ್ಯೆ ಚರ್ಚೆಗೆ ಬಂದಿವೆ. ಅವರು ಯಾವುದೇ ಬಣದ ಜೊತೆ ಹೊಂದಾಣಿಕೆ ಮಾಡಿಕೊಂಡಿಲ್ಲ. ಆಮ್ ಆದ್ಮಿ ಪಕ್ಷ ಪಂಜಾಬನ್ನು ಗೆದ್ದಂತೆ ಬಿಹಾರದಲ್ಲಿ ತಾನು ಜಯಿಸುತ್ತೇನೆ ಎಂದು ಹೇಳಿಕೊಂಡಿದ್ದಾರೆ. ಬಿಹಾರ, ಪಂಜಾಬ್‌ಗಿಂಥ ಭಿನ್ನವಾದರೂ, ಕಿಶೋರ್ ಮತ್ತು ಎಸ್‌ಐಆರ್ ಯಾವ ರೀತಿ ಪರಿಣಾಮ ಬೀರುತ್ತದೆಂದು ಹೇಳಲಾಗುವುದಿಲ್ಲ. ಎಸ್‌ಐಆರ್‌ನಿಂದ ಬಿಹಾರದ 7.4 ಕೋಟಿ ಮತದಾರರಲ್ಲಿ 65 ಲಕ್ಷ ಮತದಾರರನ್ನು ತೆಗೆಯಲಾಗುವುದೆಂದು ಚುನಾವಣಾ ಆಯೋಗ ಹೇಳಿತ್ತು; ಸುಪ್ರೀಂ ಕೋರ್ಟ್ ಮಧ್ಯಪ್ರವೇಶದ ನಂತರ, ಆಯೋಗ 21.5 ಲಕ್ಷ ಮತದಾರರನ್ನು ಸೇರಿಸಿದೆ ಮತ್ತು 3.7 ಲಕ್ಷ ಜನರನ್ನು ತೆಗೆದುಹಾಕಲಾಗಿದೆಯೆಂದು ಹೇಳಿದೆ.

2000 ಇಸವಿಯಿಂದ ಬಿಹಾರದಲ್ಲಿ ಯಾವುದೇ ಪಕ್ಷ ಶೇ 25ರಷ್ಟೂ ಮತ ಪಡೆದಿಲ್ಲ. ಕಳೆದ ಚುನಾವಣೆಯಲ್ಲಿ, ವಿಧಾನಸಭೆಯ ಒಟ್ಟು 243 ಸ್ಥಾನಗಳಲ್ಲಿ 75 ಸ್ಥಾನಗಳನ್ನು ಗೆದ್ದ ಆರ್‌ಜೆಡಿ ಶೇ 23.11ರಷ್ಟು ಮತ ಗಳಿಸಿತ್ತು. 70 ಸೀಟು ಗೆದ್ದ ಬಿಜೆಪಿ ಶೇ 19.46ರಷ್ಟು ಹಾಗೂ 43 ಸ್ಥಾನಗಳನ್ನು ಗೆದ್ದ ಜೆಡಿಯು ಶೇ 15.39ರಷ್ಟು ಮತ ಗಳಿಸಿತ್ತು. 19 ಸ್ಥಾನಗಳನ್ನು ಗೆದ್ದಿದ್ದ ಕಾಂಗ್ರೆಸ್‌ನ ಮತಗಳಿಕೆಯ ಪ್ರಮಾಣ ಶೇ 9.48. ಉಳಿದ ಮತ–ಸ್ಥಾನಗಳು ಕಮ್ಯುನಿಸ್ಟರು ಸೇರಿದಂತೆ ಚಿಕ್ಕ ಪಕ್ಷಗಳ ಪಾಲಾಗಿದ್ದವು. ಈ ಕಾರಣದಿಂದಾಗಿ, ಚಿಕ್ಕ ಪಕ್ಷಗಳೂ ಇಲ್ಲಿ ಮುಖ್ಯವಾಗುತ್ತವೆ. ಜಾತಿ ಆಧಾರಿತ ಚಿಕ್ಕ ಪಕ್ಷಗಳು ಸಣ್ಣ ಸಣ್ಣ ಜಾತಿಗಳ ಮೇಲೆ ಸಂಪೂರ್ಣ ಹಿಡಿತ ಹೊಂದಿವೆ. ಇದೇ ಕಾರಣಕ್ಕೆ ಮೀನುಗಾರರ ಸಮುದಾಯಕ್ಕೆ ಸೇರಿದ ಮುಖೇಶ್ ಸಹಾನಿಯವರನ್ನು ಉಪ ಮುಖ್ಯಮಂತ್ರಿ ಅಭ್ಯರ್ಥಿ ಎಂದು 'ಇಂಡಿಯಾ' ಘೋಷಿಸಿದೆ.

ಬಿಹಾರದಲ್ಲಿ ಮತದಾರ ಚಲಾಯಿಸುವ ಪ್ರತಿ ಮತಕ್ಕೂ ಮಹತ್ವವಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಹಾಘಟಬಂಧನ್ ವಿಜಯದ ಹೊಸ್ತಿಲಲ್ಲಿ ಎಡವಿತ್ತು. ಎರಡು ಬಣಗಳ ನಡುವಿನ ಅಂತರ 12 ಸೀಟುಗಳಾಗಿತ್ತು ಮತ್ತು ಕೇವಲ 11,150 ಮತಗಳಾಗಿದ್ದವು. 2020ರಲ್ಲಿ 52 ಸ್ಥಾನಗಳಲ್ಲಿ ಮತಗಳ ಅಂತರ 5,000ಕ್ಕೂ ಕಡಿಮೆ ಇತ್ತು. ಇದರಲ್ಲಿ ವಿರೋಧಿ ಬಣ 27 ಹಾಗೂ ಎನ್‌ಡಿಎ 24 ಗೆದ್ದಿತ್ತು. ಈ ಬಾರಿಯೂ ಇದೇ ಸ್ಥಾನಗಳಲ್ಲಿ ತೀವ್ರ ಹಣಾಹಣಿ ಇದ್ದು, ಎರಡೂ ಬಣಗಳ ಹಣೆಬರಹ ನಿರ್ಧರಿಸಬಹುದು.

(ಲೇಖಕ: ಹಿರಿಯ ಪತ್ರಕರ್ತ)

ವಾಚಕರ ವಾಣಿ

'ಎ' ಖಾತಾ: ಎಚ್‌ಡಿಕೆ ಹೋರಾಡಲಿ

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, 'ಎ' ಖಾತೆ ಮಾಡಿಸಿಕೊಳ್ಳಲು ಎರಡು ವರ್ಷ ಕಾಯುವಂತೆ ಬೆಂಗಳೂರಿನ ನಾಗರಿಕರಿಗೆ ಮನವಿ ಮಾಡಿದ್ದಾರೆ. ಈ ಸುದ್ದಿ ಓದಿ ನಗಬೇಕೋ ಅಳಬೇಕೋ ಗೊತ್ತಾಗಲಿಲ್ಲ. ಎರಡು ವರ್ಷದ ನಂತರ ತಾವೇ ಅಧಿಕಾರಕ್ಕೆ ಬರುತ್ತೇವೆ ಎನ್ನುವುದು ಅವರ ಮಾತಿನ ತರ್ಕ. ಹಾಗೆಂದು ಕಡಿಮೆ ದರದಲ್ಲಿ 'ಎ' ಖಾತೆ ಮಾಡಿಕೊಡುವುದಾಗಿ ಹೇಳುವುದು ಜನರ ಕಿವಿಯ ಮೇಲೆ ಹೂ ಇಡುವುದಷ್ಟೆ ಹೊರತು ಬೇರೇನೂ ಅಲ್ಲ. ಸರ್ಕಾರ ಪ್ರಕಟಿಸಿರುವ ಯೋಜನೆ ಉತ್ತಮವಾಗಿದ್ದರೂ ದುಬಾರಿ ಶುಲ್ಕ ಇತ್ಯಾದಿ ಕೆಲವು ನ್ಯೂನತೆ ಹೊಂದಿದೆ. ಕೇಂದ್ರ ಸಚಿವರಿಗೆ, ಜನಪರ ಕಾಳಜಿ ಇದ್ದರೆ ಸರ್ಕಾರದ ವಿರುದ್ಧ ಹೋರಾಟ ನಡೆಸಿ ಈ ನ್ಯೂನತೆ ಸರಿಪಡಿಸಬೇಕೇ ವಿನಾ ಈ ತರಹದ ಅತಾರ್ಕಿಕ ವಿಚಾರ ಹೇಳಿ ನಗೆಪಾಟಲಿಗೀಡಾಗುವುದು ಅವರಿಗೆ ಶೋಭೆ ತರುವುದಿಲ್ಲ.

ಪ್ರಮೋದ ನಾಯ್ಕ, ಬೆಂಗಳೂರು

ನ್ಯಾಯಾಂಗದ ಘನತೆಗೆ ಧಕ್ಕೆ ಆಗದಿರಲಿ

ನ್ಯಾಯಾಲಯ ಮತ್ತು ನ್ಯಾಯಾಧೀಶರ ಘನತೆಗೆ ಧಕ್ಕೆ ತರುವಂತೆ ರಾಜಾರೋಷವಾಗಿ ಹೇಳಿಕೆ ನೀಡುವವರ ವಿರುದ್ಧ ನ್ಯಾಯಾಲಯವು ಕಠಿಣ ಕ್ರಮ ಜರುಗಿಸಿ ತನ್ನ ಘನತೆಯನ್ನು ತಾನೇ ಕಾಪಾಡಿಕೊಳ್ಳಬೇಕಿದೆ. ಇಲ್ಲದಿದ್ದರೆ ನ್ಯಾಯಾಲಯ, ನ್ಯಾಯಾಂಗ ವ್ಯವಸ್ಥೆ ಮತ್ತು ಸಂವಿಧಾನಕ್ಕೆ ಉಳಿಗಾಲವಿಲ್ಲ.

ಪಿ.ಜೆ. ರಾಘವೇಂದ್ರ, ಮೈಸೂರು

ಮತದಾರ ಮಹಾಪ್ರಭು ಮೂಕಪ್ರೇಕ್ಷಕ

ಪ್ರಸ್ತುತ ಮುಖ್ಯಮಂತ್ರಿ ಗದ್ದುಗೆಯು ಚರ್ಚೆಯ ಕೇಂದ್ರವಾಗಿದೆ. ಸಿದ್ದರಾಮಯ್ಯ ಅವರೇ ಮುಂದಿನ ಎರಡೂವರೆ ವರ್ಷ ಸಿ.ಎಂ ಆಗಿ ಮುಂದುವರಿಯುತ್ತಾರೆ ಎನ್ನುವುದು ಅವರ ಬೆಂಬಲಿಗರ ಹೇಳಿಕೆ. ಅಧಿಕಾರ ಹಂಚಿಕೆ ಸೂತ್ರ ಒಪ್ಪಿದ್ದು, ಡಿಸಿಎಂ ಡಿ.ಕೆ. ಶಿವಕುಮಾರ್ ಅವರೇ ಮುಂದಿನ ಸಿ.ಎಂ ಆಗುತ್ತಾರೆ ಎಂದು ಅವರ ಹಿಂಬಾಲಕರು ಹೇಳುತ್ತಿದ್ದಾರೆ. ಇವರಿಬ್ಬರನ್ನೂ ಬಿಟ್ಟು ನಮಗೇನಾದರೂ ಸಿಹಿ ಸುದ್ದಿ ಸಿಗಲಿದೆಯೇ ಎನ್ನುವುದು ಸಚಿವ ಸಂಪುಟದಲ್ಲಿರುವ ಕೆಲವರ ನಿರೀಕ್ಷೆ- ನಂಬಿಕೆ! ಆದರೆ, ನಿತ್ಯವೂ ಈ ಸುದ್ದಿ ನೋಡುವ ರಾಜ್ಯದ ಮತದಾರರು ಮೂಕಪ್ರೇಕ್ಷಕರಾಗಿದ್ದಾರೆ.

ಶ್ರೀಧರ್ ಡಿ. ರಾಮಚಂದ್ರಪ್ಪ, ತುರುವನೂರು

ಮಾತೆ...

ದಿನವೂ ಹಾಡುತ್ತೇವೆ
ಕೇಳುತ್ತೇವೆ ಜಯ ಹೇ
ಕರ್ನಾಟಕ
ಮಾತೆ...
ಆಮೇಲೆ ಅವಶ್ಯಕತೆ
ಇಲ್ಲದಿದ್ದರೂ ಕೊಡುತ್ತೇವೆ
ಬೇರೆ ಭಾಷೆಗೆ
ಆದ್ಯತೆ

ವಿಜಯ ಮಹಾಂತೇಶ್, ಬಾಗಲಕೋಟೆ

ಗದ್ದಲದ ಗೂಡಾಗಿರುವ 'ಐಕ್ಯ ಮಂಟಪ'

ಭಕ್ತಿ ಭಂಡಾರಿ ಬಸವಣ್ಣನವರು ಐಕ್ಯರಾದ ಬಾಗಲಕೋಟೆ ಜಿಲ್ಲೆಯ ಕೂಡಲ ಸಂಗಮದಲ್ಲಿರುವ ಐಕ್ಯ ಮಂಟಪ ಗದ್ದಲದ ಗೂಡಾಗಿದೆ. ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದವರು ಮಂಟಪದ ಸುತ್ತ 'ಗದ್ದಲ ಮಾಡಬೇಡಿ; ಮೌನವಾಗಿರಿ' ಎಂಬ ಸಂದೇಶದ ನಾಮಫಲಕ ಅಳವಡಿಸಿದ್ದರೂ, ಕೆಲವು ಜನರು ಜೋರಾಗಿ ಕಿರುಚುವುದು, ಕೇಕೆ ಹಾಕುವುದನ್ನು ಮಾಡುತ್ತಾರೆ. ಇದರಿಂದ ಮೌನವಾಗಿ ಪ್ರಾರ್ಥನೆ, ಧ್ಯಾನ ಮಾಡುವ ಭಕ್ತರಿಗೆ ಕಿರಿಕಿರಿ ಉಂಟಾಗುತ್ತಿದೆ. ಮಂಟಪದ ಪಕ್ಕದಲ್ಲಿರುವ ನದಿಯಲ್ಲಿ ಬೋಟಿಂಗ್ ವ್ಯವಸ್ಥೆ ಇದೆ. ಇದರಲ್ಲಿ ಸಂಚರಿಸುವ ಪ್ರವಾಸಿಗರು ಕೇಕೆ ಹಾಕುವುದು ನಡೆಯುತ್ತಿದೆ. ಮಂಟಪದ ಪರಿಸರದಲ್ಲಿ ಸಾಕಷ್ಟು ಸಂಖ್ಯೆಯ ಭದ್ರತಾ ಸಿಬ್ಬಂದಿ ನೇಮಿಸಿ, ಕಿರಿಕಿರಿ ಉಂಟು ಮಾಡುವವರಿಗೆ ಎಚ್ಚರಿಕೆ ನೀಡಿ, ಶಾಂತ ಪರಿಸರವನ್ನು ಕಾಪಾಡಬೇಕಿದೆ.

ಸುರೇಶ ಅರಳಿಮರ, ಬಾದಾಮಿ

ಕಾಳಿಂಗ ಸರ್ಪದ ರಕ್ಷಣೆ ನಮ್ಮೆಲ್ಲರ ಹೊಣೆ

ಇತ್ತೀಚೆಗೆ ಸಂಶೋಧನೆಯ ಹೆಸರಿನಲ್ಲಿ ಕಾಳಿಂಗ ಸರ್ಪದ ಮೇಲೆ ನಡೆಯುತ್ತಿರುವ ದೌರ್ಜನ್ಯದ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗುತ್ತಿದೆ. ಕೆಲವರು ಈ ವಿಷಯದಿಂದ ಜನರ ಗಮನವನ್ನು ಬೇರೆಡೆಗೆ ತಿರುಗಿಸಲು ಹಿಂದೂ– ಮುಸ್ಲಿಂ, ಕ್ರೈಸ್ತ ಧರ್ಮದ ವಿಚಾರ ಬಳಸುತ್ತಿರುವುದು ದುರದೃಷ್ಟಕರ.

ಮಲೆನಾಡಿನಲ್ಲಿ ಎಲ್ಲ ಧರ್ಮದವರೂ ಒಗ್ಗಟ್ಟಿನಿಂದ ಬದುಕುತ್ತಾರೆ. ಅನೇಕರು ಹಾವು ಪ್ರೇಮಿಗಳು, ಹಾವು ಸಂರಕ್ಷಕರಿದ್ದಾರೆ. ಅವರಲ್ಲಿ ಮುಸ್ಲಿಂ, ಕ್ರೈಸ್ತರೂ ಇದ್ದಾರೆ. ಎಲ್ಲರೂ ಎಲ್ಲರ ನಂಬಿಕೆ, ಆಚರಣೆಯನ್ನು ಗೌರವಿಸುತ್ತಾರೆ. ಕಾಳಿಂಗವು ಧರ್ಮ, ಮತ, ಜಾತಿ ಮೀರಿ ಪ್ರಕೃತಿಯ ಅಮೂಲ್ಯ ರತ್ನ. ಅದನ್ನು ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ.

ನಂದನ ಕೆ.ಎನ್. ಕಡಾವಡಿ, ಶೃಂಗೇರಿ

ರಾಜಕೀಯ ಅಪಸವ್ಯ: ಪುಕ್ಕಟೆ ರಂಜನೆ

ಸಂಸದ ತೇಜಸ್ವಿ ಸೂರ್ಯ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯನವರ ನಡುವಿನ ವಾಕ್ಸಮರ ತಮಾಷೆಯಾಗಿದ್ದು, ಜನರಿಗೆ ಪುಕ್ಕಟೆ ಮನರಂಜನೆ ನೀಡಿದೆ. ಜನರ ಬೇಸರದ ಜೀವನದಲ್ಲಿ ಕೊಂಚ ಕಚಗುಳಿ ಇಟ್ಟಂತಾಗಿದೆ. 'ತೇಜಸ್ವಿ ಸೂರ್ಯ ಅಲ್ಲ; ಅಮಾವಾಸ್ಯೆ ಸೂರ್ಯ' ಎಂದು ಸಿದ್ದರಾಮಯ್ಯ ಹೇಳಿದರೆ; 'ಅಮಾವಾಸ್ಯೆ ಮತ್ತು ಹುಣ್ಣಿಮೆ ದಿನವೂ ಸೂರ್ಯ ಇರುತ್ತಾನೆ' ಎಂದು ಸಂಸದರು ಪ್ರತಿಕ್ರಿಯಿಸಿದ್ದಾರೆ. ಇಂತಹ ರಾಜಕೀಯ ಅಪಸವ್ಯಗಳನ್ನು ಕೇಳಿಸಿಕೊಂಡು ಕುಳಿತುಕೊಳ್ಳಲು ಮತದಾರರು ಮಾಡಿರುವ ಪಾಪವಾದರೂ ಏನು? ಇವರು ಮಾತಾಡುವ ಸೂರ್ಯ, ಚಂದ್ರ, ಹುಣ್ಣಿಮೆ, ಅಮಾವಾಸ್ಯೆ ಇವೆಲ್ಲಾ ಸೌರಮಂಡಲದ ವಿಷಯವಾಯಿತು. ರಾಜ್ಯದ ವಿಧಾನಸಭಾ ಕ್ಷೇತ್ರಗಳು ಮತ್ತು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಆಗಿರುವ ಅಭಿವೃದ್ಧಿ ಬಗ್ಗೆ ಇವರು ಮಾತನಾಡಬೇಕಲ್ಲವೆ?

ರವಿಕಿರಣ್ ಶೇಖರ್, ಬೆಂಗಳೂರು

ಚುರುಮುರಿ

ಮಾಲಿನ್ಯಕ್ಕಿಲ್ಲ ಮದ್ದು

• ಸುಮಂಗಲಾ

'ದೀಪಾವಳಿ ಆದಮ್ಯಾಲೆ ದಿಲ್ಲೀವಳಗೆ ವಾಯುಮಾಲಿನ್ಯ ಮಿತಿ ಮೀರೈತಂತೆ. ಕೆಲವು ಕಡಿಗಿ ಗಾಳಿ ಗುಣಮಟ್ಟ ಸೂಚ್ಯಂಕ 400 ದಾಟೈತಂತ.' ಬೆಕ್ಕಣ್ಣ ದೆಹಲಿಯ ಹವಾಮಾನ ವರದಿ ಓದಿತು.

'ಅಲ್ಲಿ ಪ್ರತೀ ವರ್ಷ ಈ ಟೈಮಿನಾಗೆ ಮಾಲಿನ್ಯದ ಗೋಳು ಇದ್ದಿದ್ದೇ. ಇಷ್ಟಾದ್ರೂ ಮಂದಿ ಪಟಾಕಿ ಹೊಡಿಯೂದೂ ಬಿಡಂಗಿಲ್ಲ' ಎಂದೆ.

'ದೀಪಾವಳಿ ದೊಡ್ಡಬ್ಬ. ಪಟಾಕಿ ಹೊಡಿಯೂದು ಹೆಂಗ ಬಿಡತಾರೆ? ನೀನು ಜಿಪುಣಿ, ನನಗೆ ಪಟಾಕಿ ಕೊಡಿಸಲಿಲ್ಲ ಅಂದರೆ ರಾಜಧಾನಿ ಮಂದೀನೂ ಪಟಾಕಿ ಹೊಡೆಯಬಾರದೇನು?' ಎಂದು ಬೆಕ್ಕಣ್ಣ ದುರುಗುಟ್ಟಿಕೊಂಡು ನೋಡುತ್ತಾ ಗುರುಗುಟ್ಟಿತು.

'ಮೋದಿಮಾಮಾರು ಪ್ರಧಾನಿಯಾಗಿ ಸಂಸತ್ತಿನೊಳಗೆ ಕುಂತು ಹನ್ನೊಂದು ವರ್ಷ ಆಯಿತು... ಇನ್ನಾ ತನಾ ಈ ಸಮಸ್ಯೆಗೆ ಎದಕ್ಕೆ ಪರಿಹಾರ ಸಿಕ್ಕಿಲ್ಲ?' ನಾನು ರಾಗವೆಳೆದೆ.

'ನೀ ಎಲ್ಲಿಂದೆಲ್ಲಿಗೋ ಸಂಬಂಧ ಕಲ್ಪಿಸಬ್ಯಾಡ. ಮೋದಿಮಾಮಾರು ಗಾಳಿ ಗುಣಮಟ್ಟ ಅಳೀತಾ ಕೂಡಬೇಕೇನು? ಪಂಜಾಬ್ ಕಡೆ ಹೊಲದಾಗೆ ಕೂಳೆ ಸುಡತಾರಲ್ಲ, ಅದರ ಹೊಗೆ ಬರತೈತಿ ದಿಲ್ಲಿಗೆ' ಬೆಕ್ಕಣ್ಣ ವಾದಿಸಿತು.

'ಹರಿಯಾಣದಾಗೆ ಕೂಳೆ ಸುಡಂಗಿಲ್ಲೇನು? ಅಲ್ಲಿಯ ಗಾಳಿ ದಿಲ್ಲಿಗೆ ಸೋಕಂಗಿಲ್ಲೇನು?' ನಾನು ಕಿಚಾಯಿಸಿದೆ.

'ಹೋಗಲಿ ಬಿಡು... ನಮಗ್ಯಾಕೆ ದಿಲ್ಲಿ ಸುದ್ದಿ? ನಮ್ಮ ಬೆಂಗಳೂರಿನಾಗೆ ಈ ಸಲ ದೀಪಾವಳಿ ನಂತರ ವಾಯುಮಾಲಿನ್ಯ ಕಡಿಮೆ ಆಗ್ಯೈತಂತ. ಅದಕ್ಕೆ ಖುಷಿ ಪಡೂಣು' ಎಂದು ಮಾತು ಬದಲಿಸಿತು.

'ಮಂದಿ ಹಸಿರು ಪಟಾಕಿ ಹಚ್ಯಾರೆ. ಲಾಲ್‌ಬಾಗ್, ಕಬ್ಬನ್‌ಪಾರ್ಕ್ ಇಂಥಾ ಕಡಿಗೆ ಮರಗಳು ಅದಾವು ಅಂತ ನಮ್ಮಲ್ಲಿ ಮಾಲಿನ್ಯ ಕಡಿಮೆಯಾಗ್ಯೈತೆ' ಎಂದೆ ನಾನು.

'ಅಲ್ಲಿಯ ಮರಗಳೂ ಮಾಯವಾಗತಾವೆ! ಹೊಸದಾಗಿ ಮಾಡೋ ಸುರಂಗ ರಸ್ತೆಗೆ ಲಾಲ್‌ಬಾಗಿನ ಆರು ಎಕರೆ ಬಲಿಯಾಗತೈತಿ. ಯಾರ್‍ಯಾರ ಜೇಬುಗಳು ಎಷ್ಟು ತುಂಬತಾವೋ ಗೊತ್ತಿಲ್ಲ, ಮರಗಳಂತೂ ಮಾಯವಾಗತಾವೆ. ನೀವು ಶ್ರೀಸಾಮಾನ್ಯರು ನೋಡಿಕೋತ ಕುಂದರತೀರಿ' ಎಂದು ಬೆಕ್ಕಣ್ಣ ನನ್ನ ಮೂತಿಗೆ ತಿವಿಯಿತು.

ಸಂಗತ

ಸುಧಾರಣೆ ಹೆಸರಲ್ಲಿ ಸುರಕ್ಷತೆಯೊಂದಿಗೆ ಆಟ

ಪಿ.ಎಫ್ ಹಾಗೂ ಎನ್‌ಪಿಎಸ್‌ನಲ್ಲಿ ಆಗುತ್ತಿರುವ ಬದಲಾವಣೆಗಳು ಸರ್ಕಾರವು ತನ್ನ ಹೊಣೆಗಾರಿಕೆಯಿಂದ ಹಿಂದೆ ಸರಿಯುತ್ತಿರುವುದರ ಸ್ಪಷ್ಟ ಸೂಚನೆಯಾಗಿದೆ.

• ವಿಜಯ್ ಜೋಷಿ

ಉದ್ಯೋಗಿಗಳ ಭವಿಷ್ಯ ನಿಧಿ ಸಂಘಟನೆ (ಇಪಿಎಫ್‌ಒ) ಹಾಗೂ ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು (ಎನ್‌ಪಿಎಸ್) ನಿರ್ವಹಿಸುವ 'ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ'ವು (ಪಿಎಫ್‌ಆರ್‌ಡಿಎ) 'ಸುಧಾರಣೆ'ಗಳ ಹೆಸರಿನಲ್ಲಿ ಕೆಲವು ಕ್ರಮಗಳನ್ನು ಜಾರಿಗೆ ತರಲು ಮುಂದಾಗಿದೆ.

ಮೊದಲನೆಯದು, ಪಿ.ಎಫ್ ನಿಧಿಯಲ್ಲಿ ಇರುವ ಮೊತ್ತ ಹಿಂಪಡೆಯಲು ಹೆಚ್ಚಿನ ಅವಕಾಶಗಳನ್ನು ಕಲ್ಪಿಸುವುದು, ಹಿಂಪಡೆಯಲು ಹೆಚ್ಚು ಮೊತ್ತ ಸಿಗುವಂತೆ ಮಾಡುವುದು ಹಾಗೂ ಹಿಂಪಡೆಯುವ ವ್ಯಕ್ತಿಗೆ ಕಡಿಮೆ ಪ್ರಶ್ನೆಗಳನ್ನು ಕೇಳಿ ಹಣ ಹಿಂಪಡೆಯುವ ಪ್ರಕ್ರಿಯೆಯು ಸುಲಭವಾಗುವಂತೆ ಮಾಡುವುದು. ಪಿ.ಎಫ್ ಚಂದಾದಾರರು ತಮ್ಮ ಖಾತೆಯಲ್ಲಿ ಕನಿಷ್ಠ ಶೇ 25ರಷ್ಟು ಮೊತ್ತವನ್ನು ಕಾಯ್ದುಕೊಳ್ಳಬೇಕು. ಇದು ಅವರಿಗೆ ನಿವೃತ್ತಿಯ ಸಂದರ್ಭದಲ್ಲಿ ಇಡುಗಂಟಾಗಿ ಸಿಗುತ್ತದೆ, ನಿವೃತ್ತಿಯವರೆಗೆ ಹೆಚ್ಚಿನ ಪ್ರಮಾಣದ ಬಡ್ಡಿ (ಈಗ ಶೇ 8.25ರಷ್ಟು) ತಂದುಕೊಡುತ್ತಿರುತ್ತದೆ. ಇನ್ನುಳಿದ 'ಅಷ್ಟೂ ಮೊತ್ತವನ್ನು' ಹಿಂದಕ್ಕೆ ಪಡೆದುಕೊಳ್ಳಲು ಪಿ.ಎಫ್ ಚಂದಾದಾರರಿಗೆ ಅವಕಾಶ ಇರಲಿದೆ. ಇಷ್ಟೇ ಅಲ್ಲ, ಇನ್ನು ಮುಂದೆ 12 ತಿಂಗಳು ಕೆಲಸ ಮಾಡಿದ ನಂತರದಲ್ಲಿ ಪಿ.ಎಫ್ ಖಾತೆಯಿಂದ ಭಾಗಶಃ ಮೊತ್ತವನ್ನು ಪಡೆದುಕೊಳ್ಳಲು ಅವಕಾಶ ಸಿಗಲಿದೆ.

ಇನ್ನೊಂದಿಷ್ಟು 'ಸುಧಾರಣೆ'ಗಳು ಪಿಎಫ್‌ಆರ್‌ಡಿಎ ಕಡೆಯಿಂದ ಎನ್‌ಪಿಎಸ್ ವ್ಯವಸ್ಥೆಯಲ್ಲಿ ಆಗಲಿವೆ. ಈ ಸುಧಾರಣೆಗಳ ಪ್ರಕಾರ, ಎನ್‌ಪಿಎಸ್‌ನಲ್ಲಿ ಹೂಡಿಕೆ ಮಾಡುವವರಿಗೆ ಈಕ್ವಿಟಿ ಮೇಲೆ ಶೇ 100ರಷ್ಟು ಹಣ ತೊಡಗಿಸಲು ಅವಕಾಶ ಸಿಗಲಿದೆ. ಇದುವರೆಗೆ ಈಕ್ವಿಟಿಗಳ ಮೇಲಿನ ಹೂಡಿಕೆಗೆ ಶೇ 75ರ ಮಿತಿಯನ್ನು ವಿಧಿಸಲಾಗಿತ್ತು. ಈ ಮಿತಿಯನ್ನು ತೆಗೆಯುವುದರಿಂದ ಯುವಜನರಿಗೆ, ಹೂಡಿಕೆಗೆ ಹೆಚ್ಚು ಕಾಲಾವಕಾಶ ಇರುವವರಿಗೆ, ಹೆಚ್ಚಿನ ಮೊತ್ತವನ್ನು ಷೇರುಗಳಲ್ಲಿ ತೊಡಗಿಸಿ ಹೆಚ್ಚಿನ ಲಾಭ ಪಡೆಯಲು ಅವಕಾಶ ಕಲ್ಪಿಸಿದಂತೆ ಆಗುತ್ತದೆ. ಆದರೆ, ಈ 'ಸುಧಾರಣೆ'ಗಳಲ್ಲಿ ಇನ್ನೊಂದು ಅಂಶ ಇದೆ. ಅದು, ಎನ್‌ಪಿಎಸ್ ಯೋಜನೆಯ ಅವಧಿಯನ್ನು ಪೂರ್ಣಗೊಳಿಸಿ, ಅದರಿಂದ ಹೊರಬರುವಾಗ ಸಿಗುವ ಮೊತ್ತದಲ್ಲಿ ಶೇ 20ರಷ್ಟನ್ನು ಮಾತ್ರ ಆ್ಯನ್ಯುಟಿ ಯೋಜನೆಗಳಲ್ಲಿ ತೊಡಗಿಸಿದರೆ ಸಾಕು ಎಂದು ಹೇಳುತ್ತದೆ. ಈಗ ಇರುವ ನಿಯಮಗಳ ಪ್ರಕಾರ, ಎನ್‌ಪಿಎಸ್ ಯೋಜನೆಯ ಅವಧಿ ಪೂರ್ಣಗೊಂಡ ನಂತರದಲ್ಲಿ ಸಿಗುವ ಮೊತ್ತದಲ್ಲಿ ಶೇ 40ರಷ್ಟನ್ನು ಆ್ಯನ್ಯುಟಿ ಯೋಜನೆಯಲ್ಲಿ ಕಡ್ಡಾಯವಾಗಿ ತೊಡಗಿಸಬೇಕು. ಆ್ಯನ್ಯುಟಿ ಯೋಜನೆಯಲ್ಲಿ ಇನ್ನೂ ಹೆಚ್ಚು ಮೊತ್ತ ತೊಡಗಿಸಲು ಅಡ್ಡಿಯಿಲ್ಲ. ಆದರೆ, ಶೇ 40ರಷ್ಟು ಕನಿಷ್ಠ ಪ್ರಮಾಣ. ಆ್ಯನ್ಯುಟಿ ಯೋಜನೆಗಳಲ್ಲಿ ಹೆಚ್ಚು ಮೊತ್ತ ತೊಡಗಿಸಿದಂತೆಲ್ಲ ಪಿಂಚಣಿಯ ರೂಪದಲ್ಲಿ ಸಿಗುವ ಮೊತ್ತವೂ ಹೆಚ್ಚು, ಕಡಿಮೆ ಹಣ ತೊಡಗಿಸಿದರೆ ಪಿಂಚಣಿಯಾಗಿ ಸಿಗುವ ಮೊತ್ತ ಕಡಿಮೆ.

ಇಪಿಎಫ್‌ಒಗೆ ಸಂಬಂಧಿಸಿದ ಕ್ರಮಗಳು ಜಾರಿಗೆ ಬರಲು ಅಣಿಯಾಗಿವೆ. ಎನ್‌ಪಿಎಸ್‌ನಲ್ಲಿ ತರಲು ಉದ್ದೇಶಿಸಿರುವ ಬದಲಾವಣೆಗಳ ವಿಚಾರವಾಗಿ ಕರಡು ಅಧಿಸೂಚನೆ ಮಾತ್ರ ಪ್ರಕಟವಾಗಿದೆ. ಆದರೆ, ಈ ಎರಡೂ ಕ್ರಮಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಸರ್ಕಾರವು ತನ್ನ ಹೊಣೆಗಾರಿಕೆಯಿಂದ ಹಿಂದೆ ಸರಿಯುತ್ತಿದೆ ಹಾಗೂ ಇದನ್ನು 'ಸುಧಾರಣೆ' ಎಂದು ಬಿಂಬಿಸಲು ಪ್ರಯತ್ನಿಸುತ್ತಿದೆ ಅನ್ನಿಸುತ್ತದೆ.

ಪಿ.ಎಫ್ ಹಾಗೂ ಎನ್‌ಪಿಎಸ್ ಯೋಜನೆಗಳು ಇರುವುದು ನಿವೃತ್ತಿಯ ನಂತರದಲ್ಲಿ ವ್ಯಕ್ತಿಯು ಘನತೆಯ ಬದುಕು ನಡೆಸಲು ಅಗತ್ಯವಾದ ಮೊತ್ತವನ್ನು ಒಗ್ಗೂಡಿಸುವ ನೆರವು ನೀಡಲು. ಅವು ಬೇಕಾದಾಗ ಹಣ ಹಿಂಪಡೆಯಲು ಅವಕಾಶ ನೀಡುವ ಉಳಿತಾಯ ಖಾತೆಗಳಲ್ಲ. ಇಪಿಎಸ್–95 (ನೌಕರರ ಪಿಂಚಣಿ ಯೋಜನೆ) ಹೊರತುಪಡಿಸಿ ಬೇರೆ ಯಾವುದೇ ಖಾತರಿ ಪಿಂಚಣಿಯ ಸೌಲಭ್ಯವು ಖಾಸಗಿ ವಲಯದ ನೌಕರರಿಗೆ ಇಲ್ಲ. ಪಿ.ಎಫ್ ಹಾಗೂ ಎನ್‌ಪಿಎಸ್ ಮೂಲಕ ಸಿಗುವ ಇಡುಗಂಟು ಸಂಧ್ಯಾಕಾಲದಲ್ಲಿ ನೆರವಿಗೆ ಬರಬೇಕು. ಹೀಗಿರುವಾಗ, ಈ ಎರಡು ಹೂಡಿಕೆ/ಉಳಿತಾಯ ಯೋಜನೆಗಳಲ್ಲಿನ ಹಣವನ್ನು ಹೆಚ್ಚಿನ ಪ್ರಮಾಣದಲ್ಲಿ ಹಿಂಪಡೆಯಲು ಅವಕಾಶ ನೀಡಿದರೆ, ಸಂಧ್ಯಾಕಾಲದಲ್ಲಿ ಅವರು ಯಾವ ಯೋಜನೆಯ ಆಶ್ರಯ ಪಡೆಯಬೇಕು?

ಜನ ತಮ್ಮ ಪಿ.ಎಫ್ ಹಾಗೂ ಎನ್‌ಪಿಎಸ್ ಖಾತೆಗಳಲ್ಲಿನ ಹಣವನ್ನು, ಅಲ್ಲಿಯೇ ಹೆಚ್ಚಿನ ಅವಧಿಗೆ ತೊಡಗಿಸಿ, ನಿವೃತ್ತಿಯ ನಂತರದಲ್ಲಿ ಅವುಗಳನ್ನು ನೆಚ್ಚಿಕೊಳ್ಳುವ ವ್ಯವಸ್ಥೆಯನ್ನು ಸರ್ಕಾರ ರೂಪಿಸಿದರೆ ಅದು 'ಸುಧಾರಣೆ' ಆಗಬಹುದೇ ವಿನಾ, ಈಗಿನ ಕ್ರಮಗಳು ಹಿಮ್ಮುಖ ಚಲನೆಯಂತೆ ಕಾಣುತ್ತಿವೆ. ನಿವೃತ್ತಿಯವರೆಗಿನ ವಿವಿಧ ಅಗತ್ಯಗಳಿಗೆ ಜನರು ಬೇರೆ ಹೂಡಿಕೆ ಉತ್ಪನ್ನಗಳಲ್ಲಿ ಹಣ ತೊಡಗಿಸುವಂತೆ ಸರ್ಕಾರವೇ ಉತ್ತೇಜಿಸುವುದು ಹೆಚ್ಚು ವಿವೇಕದ ನಡೆಯಾಗಬಹುದು.

ಆದಾಯ ತೆರಿಗೆ ಲೆಕ್ಕಹಾಕಲು ಹೊಸ ತೆರಿಗೆ ಪದ್ಧತಿಯನ್ನು ಜಾರಿಗೆ ತಂದ ಕೇಂದ್ರ ಸರ್ಕಾರವು, ಹೊಸ ಪದ್ಧತಿಯಲ್ಲಿ ಹೂಡಿಕೆಗಳಿಗೂ ತೆರಿಗೆ ವಿನಾಯಿತಿಗಳಿಗೂ ಯಾವುದೇ ಸಂಬಂಧವಿಲ್ಲ ಎಂದು ಹೇಳಿತು. ಇದು ಉಳಿತಾಯ/ಹೂಡಿಕೆಗಳನ್ನು ನಿರುತ್ತೇಜಿಸುವ ಕ್ರಮ. ಸರ್ಕಾರವು ಈ ನೀತಿಯನ್ನು ಬಿಟ್ಟು, ಈಕ್ವಿಟಿ ಆಧಾರಿತ ಹೂಡಿಕೆ ಸೇರಿದಂತೆ, ವಿವಿಧ ಬಗೆಯ ಹೂಡಿಕೆಗಳನ್ನು ಉತ್ತೇಜಿಸುವ ಕ್ರಮಕ್ಕೆ ಮತ್ತೆ ಮುಂದಾಗಬೇಕು. ಆಗ ದೇಶದ ಬಂಡವಾಳ ಮಾರುಕಟ್ಟೆಗಳಿಗೆ ಇನ್ನಷ್ಟು ಹಣ ಸಿಗುತ್ತದೆ; ಜನರಿಗೆ ಮುಪ್ಪಿನ ಕಾಲಕ್ಕೆ ಒಂದು ರಕ್ಷಾಕವಚವನ್ನು ಕಟ್ಟಿಕೊಳ್ಳಲು ಅನುವಾಗುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅದಾನಿ ಸಮೂಹದಲ್ಲಿ ಎಲ್‌ಐಸಿ ಹೂಡಿಕೆ

‘ದಿ ವಾಷಿಂಗ್ಟನ್ ಪೋಸ್ಟ್’ ವರದಿಯಲ್ಲೇನಿದೆ?

ಉದ್ಯಮಿ ಗೌತಮ್ ಅದಾನಿ ಮಾಲೀಕತ್ವದ ವಿವಿಧ ಕಂಪನಿಗಳಲ್ಲಿ ಸರ್ಕಾರಿ ಸ್ವಾಮ್ಯದ ಎಲ್‌ಐಸಿಯ ಹಣವನ್ನು ಹೂಡುವಂತೆ ಮಾಡುವ ಮೂಲಕ ಕೇಂದ್ರ ಸರ್ಕಾರವು ಕಷ್ಟಕಾಲದಲ್ಲಿ ಅವರಿಗೆ ನೆರವಾಗಿದೆ ಎಂದು ‘ದಿ ವಾಷಿಂಗ್ಟನ್ ಪೋಸ್ಟ್’ ವರದಿ ಮಾಡಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಆಪ್ತಸ್ನೇಹಿತ ಅದಾನಿ ಅವರ ಸಾಲವು ಹೆಚ್ಚಾಗಿದ್ದು, ಅವರಿಗೆ ಜಾಗತಿಕ ಮಟ್ಟದಲ್ಲಿ ಸಾಲ ದೊರೆಯುತ್ತಿಲ್ಲ. ಅದಾನಿ ಸಮೂಹವು ಸಂಕಷ್ಟದಲ್ಲಿರುವಾಗಲೇ ಅದರ ವಿವಿಧ ಕಂಪನಿಗಳಲ್ಲಿ ₹33,000 ಸಾವಿರ ಕೋಟಿ ಮೊತ್ತವನ್ನು ಹೂಡಲು ಎಲ್‌ಐಸಿ ನಿರ್ಧರಿಸಿದೆ; ಕೇಂದ್ರದ ಹಣಕಾಸು ಇಲಾಖೆಯ ಅಧಿಕಾರಿಗಳ ಸಲಹೆಯಂತೆ ಈ ಹೂಡಿಕೆ ಮಾಡುತ್ತಿದೆ ಎಂದು ಅಮೆರಿಕದ ಪತ್ರಿಕೆಯ ತನಿಖಾ ವರದಿ ಉಲ್ಲೇಖಿಸಿದೆ. ಈ ಆರೋಪಗಳನ್ನು ಎಲ್‌ಐಸಿ ನಿರಾಕರಿಸಿದೆ

ಪ್ರಜಾವಾಣಿ ವಾರ್ತೆ

ಪ್ರಧಾನಿ ನರೇಂದ್ರ ಮೋದಿ ಅವರ ಆಪ್ತಸ್ನೇಹಿತ ಉದ್ಯಮಿ ಗೌತಮ್ ಅದಾನಿ ಅವರ ಸಮೂಹದಲ್ಲಿ ಸರ್ಕಾರಿ ಸ್ವಾಮ್ಯದ ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) ಬೃಹತ್ ಮೊತ್ತವನ್ನು ಹೂಡಿಕೆ ಮಾಡಲು ತೀರ್ಮಾನಿಸಿದ್ದು, ಈ ನಿರ್ಧಾರದ ಹಿಂದೆ ಕೇಂದ್ರ ಸರ್ಕಾರದ ಪಾತ್ರ ಇದೆ ಎಂದು ‘ದಿ ವಾಷಿಂಗ್ಟನ್ ಪೋಸ್ಟ್’ ವರದಿ ಮಾಡಿದೆ. ಎಂಥ ಸಂದರ್ಭದಲ್ಲಿ ಎಲ್‌ಐಸಿ ಹೂಡಿಕೆ ಮಾಡಿದೆ ಎನ್ನುವುದನ್ನು ವರದಿ ವಿವರವಾಗಿ ಉಲ್ಲೇಖಿಸಿದೆ.

ಭಾರತದಲ್ಲಿ ಗಣಿಗಳು, ವಿಮಾನ ನಿಲ್ದಾಣಗಳು, ಬಂದರುಗಳು ಮತ್ತು ಹಸಿರು ಇಂಧನ ಯೋಜನೆಗಳನ್ನು ಒಳಗೊಂಡಂತೆ ಬೃಹತ್ ಸಾಮ್ರಾಜ್ಯದ ಒಡೆಯರಾಗಿರುವ ಗೌತಮ್ ಅದಾನಿ ಅವರ ಸಾಲವು ಹೆಚ್ಚಾಗುತ್ತಲೇ ಹೋಗಿದ್ದು, ಅವರು ಪಾವತಿ ಮಾಡಬೇಕಿದ್ದ ಬಿಲ್‌ಗಳ ಬಾಕಿ ಮೊತ್ತವು ಏರುತ್ತಿದೆ. ಭಾರತದ ಶ್ರೀಮಂತರ ಪೈಕಿ ಎರಡನೇ ಸ್ಥಾನದಲ್ಲಿರುವ ಗೌತಮ್ ಅದಾನಿ ಅವರು ₹7.90 ಲಕ್ಷ ಕೋಟಿ ಮೌಲ್ಯದ ಸಂಪತ್ತಿನ ಒಡೆಯರಾಗಿದ್ದಾರೆ. ಕಳೆದ ವರ್ಷ ಅವರ ವಿರುದ್ಧ ಅಮೆರಿಕದಲ್ಲಿ ಭ್ರಷ್ಟಾಚಾರ ಮತ್ತು ವಂಚನೆಯ ಆರೋಪಗಳು ಕೇಳಿಬಂದಿದ್ದವು. ಅಮೆರಿಕ ಮತ್ತು ಯುರೋಪಿನ ಬ್ಯಾಂಕ್‌ಗಳು ಅವರಿಗೆ ಸಾಲ ನೀಡಲು ಹಿಂದೇಟು ಹಾಕಿದ್ದವು ಎಂದು ವರದಿ ಹೇಳಿದೆ.

ವರದಿಯ ಪ್ರಕಾರ, ಅದಾನಿ ಅವರಿಗೆ ನೆರವಾಗುವ ದಿಸೆಯಲ್ಲಿ ಕೇಂದ್ರ ಸರ್ಕಾರವು ತನ್ನದೇ ಯೋಜನೆಯೊಂದನ್ನು ರೂಪಿಸಿತು. ಕೇಂದ್ರ ಸರ್ಕಾರದ ಅಧೀನದಲ್ಲಿರುವ, ದೇಶದ ಬಡವರು ಮತ್ತು ಗ್ರಾಮೀಣ ಪ್ರದೇಶದ ಜನರಿಗೆ ಜೀವ ವಿಮೆ ಕಲ್ಪಿಸುವ ಎಲ್‌ಐಸಿಯಿಂದ 390 ಕೋಟಿ ಡಾಲರ್ (₹34,500 ಕೋಟಿ–ಪ್ರತಿ ಡಾಲರ್‌ಗೆ ಈಗ ಇರುವ ರೂಪಾಯಿ ಮೌಲ್ಯದ ಪ್ರಕಾರ) ಹೂಡಿಕೆ ಮಾಡುವ ಸಂಬಂಧ ಇದೇ ಮೇ ತಿಂಗಳಲ್ಲಿ ಅಧಿಕಾರಿಗಳು ಪ್ರಸ್ತಾವ ಸಿದ್ಧಪಡಿಸಿದರು.

ಅದೇ ಸಂದರ್ಭದಲ್ಲಿ, ಅದಾನಿ ಪೋರ್ಟ್ಸ್ ಕಂಪನಿಯು ಹಾಲಿ ಇರುವ ಸಾಲವನ್ನು ಮರುಹೊಂದಾಣಿಕೆ ಮಾಡಲು 58.5 ಕೋಟಿ ಡಾಲರ್ (₹5,137 ಕೋಟಿ) ಹೊಸ ಸಾಲವನ್ನು ಮಾಡಬೇಕಾದ ತುರ್ತಿಗೆ ಸಿಲುಕಿತ್ತು. ಆ ಇಡೀ ಮೊತ್ತವನ್ನು ಒಂದು ಮೂಲವೇ (ಎಲ್‌ಐಸಿ) ಒದಗಿಸಿದೆ ಎಂದು ಮೇ 30ರಂದು ಕಂಪನಿ ಘೋಷಿಸಿತ್ತು. ಇದು, ದೇಶದ ಪ್ರಮುಖ ಉದ್ಯಮಿಯಾದ ಮತ್ತು ಅತ್ಯುತ್ತಮ ರಾಜಕೀಯ ಸಂಪರ್ಕಗಳನ್ನು ಹೊಂದಿರುವ ಅದಾನಿ ಸಮೂಹಕ್ಕೆ ಜನರ ತೆರಿಗೆ ಹಣವನ್ನು ವರ್ಗಾಯಿಸುವ ದೊಡ್ಡ ಯೋಜನೆಯ ಸಣ್ಣ ಭಾಗ ಮಾತ್ರವಾಗಿತ್ತು. ಮೋದಿ ಸರ್ಕಾರದಲ್ಲಿ ಅದಾನಿ ಅವರು ಹೊಂದಿರುವ ಪ್ರಭಾವವನ್ನು ಇದು ತೋರಿಸುತ್ತದೆ ಎಂದು ವರದಿ ಹೇಳಿದೆ.

ದಿ ವಾಷಿಂಗ್ಟನ್ ಪೋಸ್ಟ್ ವೆಬ್‌ಸೈಟ್‌ನಲ್ಲಿ ಪ್ರಕಟವಾದ ವರದಿ

ಎಲ್‌ಐಸಿಯ ಮತ್ತು ಕೇಂದ್ರ ಹಣಕಾಸು ಸಚಿವಾಲಯದ ಅಧೀನದಲ್ಲಿರುವ ಹಣಕಾಸು ಸೇವೆಗಳ ಇಲಾಖೆಯ (ಡಿಎಫ್‌ಎಸ್) ಆಂತರಿಕ ದಾಖಲೆಗಳ ಆಧಾರದಲ್ಲಿ, ಅವುಗಳಿಗೆ ಸಂಬಂಧಿಸಿದ ಮಾಜಿ ಮತ್ತು ಹಾಲಿ ಅಧಿಕಾರಿಗಳನ್ನು ಸಂದರ್ಶಿಸಿ ಹಾಗೂ ಅದಾನಿ ಸಮೂಹದ ಹಣಕಾಸಿನ ಬಗ್ಗೆ ಮಾಹಿತಿ ಇರುವ ಭಾರತದ ಮೂವರು ಬ್ಯಾಂಕ್ ಅಧಿಕಾರಿಗಳನ್ನು ಮಾತನಾಡಿಸಿ ವರದಿ ತಯಾರಿಸಿದ್ದಾಗಿ ‘ದಿ ವಾಷಿಂಗ್ಟನ್ ಪೋಸ್ಟ್’ ತಿಳಿಸಿದೆ.

ಡಿಎಫ್‌ಎಸ್‌ನ ಅಧಿಕಾರಿಗಳು, ಎಲ್‌ಐಸಿ ಮತ್ತು ಸರ್ಕಾರದ ಧನಸಹಾಯದಿಂದ ನಡೆಯುವ ನೀತಿ ಆಯೋಗದ ಜೊತೆಗೂಡಿ ಈ ಹೂಡಿಕೆ ಯೋಜನೆಯನ್ನು ರೂಪಿಸಿರುವುದು ದಾಖಲೆಗಳಿಂದ ತಿಳಿದುಬಂದಿದೆ. ಪ್ರಸ್ತಾವಕ್ಕೆ ಹಣಕಾಸು ಸಚಿವಾಲಯವು ಒಪ್ಪಿಗೆ ನೀಡಿದೆ ಎಂದು ಈ ವಿದ್ಯಮಾನದ ಬಗ್ಗೆ ಅರಿವಿರುವ ಇಬ್ಬರು ಅಧಿಕಾರಿಗಳು ತಿಳಿಸಿರುವುದಾಗಿ ವರದಿ ಹೇಳಿದೆ.

ಕಳೆದ 12 ತಿಂಗಳಲ್ಲಿ (ಜೂನ್ ಅಂತ್ಯದವರೆಗೆ) ಅದಾನಿ ಸಮೂಹದ ಒಟ್ಟಾರೆ ಸಾಲ ಪ್ರಮಾಣವು ಶೇ 20ರಷ್ಟು ಹೆಚ್ಚಾಗಿದೆ ಎನ್ನುವುದು ಕಂಪನಿಯ 2025–26ರ ಲೆಕ್ಕಪತ್ರಗಳಿಂದ ತಿಳಿಯುತ್ತದೆ. ಇಂಥ ಸ್ಥಿತಿಯಲ್ಲಿ, ‘ಅದಾನಿ ಸಮೂಹದಲ್ಲಿ ವಿಶ್ವಾಸ ಇಡುವುದು ಮತ್ತು ಇತರ ಹೂಡಿಕೆದಾರರನ್ನು ಉತ್ತೇಜಿಸುವುದು’ ಯೋಜನೆಯ ಮುಖ್ಯ ಉದ್ದೇಶವಾಗಿತ್ತು; ಅವರು ‘ದೂರದೃಷ್ಟಿ ಇರುವ ಉದ್ಯಮಿ, ಸವಾಲಿನ ಸಂದರ್ಭಗಳಲ್ಲಿ ಸಮರ್ಥವಾಗಿ ಎದುರಿಸಿ ಯಶಸ್ಸು ಕಂಡವರು’ ಎಂದು ಡಿಎಫ್‌ಎಸ್‌ನ ದಾಖಲೆಯಲ್ಲಿ ಉಲ್ಲೇಖಿಸಲಾಗಿದೆ.

ಸುಳ್ಳು ಮತ್ತು ದಾರಿ ತಪ್ಪಿಸುವ ಮಾಹಿತಿ ನೀಡಿ ಅಮೆರಿಕದ ಹೂಡಿಕೆದಾರರನ್ನು ಸೆಳೆಯಲು ಅದಾನಿ ಪ್ರಯತ್ನಿಸಿದ್ದಾರೆ ಎಂದು ಅಲ್ಲಿನ ನ್ಯಾಯಾಂಗ ಇಲಾಖೆ ಕಳೆದ ವರ್ಷ ಆರೋಪಿಸಿತ್ತು. ಅದೇ ದಿನ, ಅಮೆರಿಕ ಷೇರುಪೇಟೆ ಮತ್ತು ವಿನಿಮಯ ಆಯೋಗವು (ಎಸ್‌ಇಸಿ) ಅದಾನಿ ಅವರು ಷೇರುಪೇಟೆಯ ನಿಮಯಗಳನ್ನು ಉಲ್ಲಂಘಿಸಿದ್ದಾರೆ ಎಂದು ಪ್ರಕರಣ ದಾಖಲಿಸಿತ್ತು. ಅದಾನಿ ಸಮೂಹವು ಷೇರು ಮೌಲ್ಯವನ್ನು ಕೃತಕವಾಗಿ ಬದಲಾಯಿಸಿದೆ ಮತ್ತು ಹಣಕಾಸು ಅವ್ಯವಹಾರ ನಡೆಸಿದೆ ಎಂದು 2023ರ ಜನವರಿಯಲ್ಲಿ ಹಿಂಡೆನ್‌ಬರ್ಗ್ ಸಂಸ್ಥೆಯು ಆರೋಪಿಸಿತ್ತು.

ಎಲ್‌ಐಸಿಯು ಈ ಹಿಂದೆಯೇ ಅದಾನಿ ಒಡೆತನದ ಕಂಪನಿಗಳಲ್ಲಿ ಷೇರುಗಳನ್ನು ಖರೀದಿಸಿತ್ತು. ಅದಾನಿ ಸಮೂಹದ ವಿರುದ್ಧ ಇಷ್ಟೆಲ್ಲ ಆರೋಪಗಳು ಕೇಳಿಬಂದ ನಂತರವೂ ಅವರ ವಿವಿಧ ಕಂಪನಿಗಳಲ್ಲಿ 340 ಕೋಟಿ ಡಾಲರ್ (₹30 ಸಾವಿರ ಕೋಟಿ) ಮೊತ್ತವನ್ನು ಕಾರ್ಪೊರೇಟ್ ಬಾಂಡ್‌ಗಳ ರೂಪದಲ್ಲಿ ಮತ್ತು 50.7 ಕೋಟಿ ಡಾಲರ್ (₹4,500 ಕೋಟಿ) ಅನ್ನು ಹೆಚ್ಚುವರಿಯಾಗಿ ಹೂಡಿಕೆ ಮಾಡಲು ಹಣಕಾಸು ಸಚಿವಾಲಯದ ಅಧಿಕಾರಿಗಳು ಎಲ್‌ಐಸಿಗೆ ಸಲಹೆ ನೀಡಿದ್ದಾರೆ. ಆದರೆ, ಅದಾನಿ ಪೋರ್ಟ್ಸ್‌ನಲ್ಲಿ ಹೂಡಿಕೆ ಮಾಡಿ ನಾಲ್ಕು ತಿಂಗಳಾಗಿದ್ದು, ಈ ಅವಧಿಯಲ್ಲಿ ಎಷ್ಟು ಹೂಡಿಕೆ ಮಾಡಿದ್ದಾರೆ ಎನ್ನುವ ವಿವರಗಳು ಲಭ್ಯವಿಲ್ಲ ಎಂದು ವರದಿ ಉಲ್ಲೇಖಿಸಿದೆ.

‘ಅಪಾಯಕಾರಿ’ ಹೂಡಿಕೆ

ಅದಾನಿ ಸಮೂಹ ಎದುರಿಸುತ್ತಿರುವ ವಿವಿಧ ಬಿಕ್ಕಟ್ಟುಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೂಡಿಕೆಯನ್ನು ಆಕರ್ಷಿಸುವ ಅದರ ಸಾಮರ್ಥ್ಯವನ್ನು ಕುಂದುವಂತೆ ಮಾಡಿವೆ. ಅಮೆರಿಕದಲ್ಲಿ ನಡೆಯುತ್ತಿರುವ ತನಿಖೆಯಿಂದಾಗಿ ಅಮೆರಿಕ ಮತ್ತು ಪಶ್ಚಿಮ ರಾಷ್ಟ್ರಗಳ ಪ್ರಮುಖ ಬ್ಯಾಂಕುಗಳು ಸಮೂಹದಲ್ಲಿ ಹೂಡಿಕೆ ಮಾಡುವುದರಿಂದ ಆಗುವ ಅಪಾಯದ ಬಗ್ಗೆ ಆತಂಕ ಹೊಂದಿವೆ ಎಂದು ಈ ಬಗ್ಗೆ ಮಾಹಿತಿ ಹೊಂದಿರುವ ಮೂವರು ಬ್ಯಾಂಕ್ ಅಧಿಕಾರಿಗಳು ಹೇಳಿದ್ದಾರೆ ಮತ್ತು ರಾಯಿಟರ್ಸ್‌ನ ವರದಿಯೊಂದು ಹೇಳಿದೆ ಎಂದು ‘ವಾಷಿಂಗ್ಟನ್ ಪೋಸ್ಟ್’ ತಿಳಿಸಿದೆ.

ಅಮೆರಿಕದ ನ್ಯಾಯಾಂಗ ಇಲಾಖೆ ನಡೆಸುತ್ತಿರುವ ತನಿಖೆಗಿಂತಲೂ ಅಮೆರಿಕದ ಷೇರುಪೇಟೆ ಮತ್ತು ವಿನಿಮಯ ಆಯೋಗ (ಎಸ್‌ಇಸಿ) ನಡೆಸುತ್ತಿರುವ ತನಿಖೆ ಹೆಚ್ಚು ಕಳವಳಕಾರಿಯಾದುದು. ಒಂದು ವೇಳೆ ಆರೋಪ ಸಾಬೀತಾದಾರೆ ಅಮೆರಿಕದ ಡಾಲರ್ ಮಾರುಕಟ್ಟೆಯಲ್ಲಿ ಹೂಡಿಕೆ ಆಕರ್ಷಿಸಲು ಅದಾನಿ ಸಮೂಹಕ್ಕೆ ಸಾಧ್ಯವಾಗಲಾರದು. ಹೀಗಾದರೆ, ಅದು ಸಮೂಹದ ಹಣಕಾಸು ಭವಿಷ್ಯದ ಮೇಲೆ ತೀವ್ರ ಪರಿಣಾಮ ಬೀರಲಿದೆ ಎಂಬ ಬ್ಯಾಂಕ್ ಅಧಿಕಾರಿಯೊಬ್ಬರ ಹೇಳಿಕೆಯನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಪ್ರಸ್ತಾವಿತ ಹೂಡಿಕೆಯಲ್ಲಿರುವ ಅಪಾಯಗಳ ಬಗ್ಗೆಯೂ ಹಣಕಾಸು ಸೇವೆಗಳ ಇಲಾಖೆಯ ದಾಖಲೆಯಲ್ಲಿ ಪ್ರಸ್ತಾಪಿಸಲಾಗಿದೆ. ‘ಅದಾನಿ ಕಂಪನಿಗಳ ಷೇರುಗಳು ಆಗಾಗ ವಿವಾದಕ್ಕೆಗುರಿಯಾಗುತ್ತಿದ್ದು ಅಲ್ಪ ಅವಧಿಯಲ್ಲಿ ಷೇರುಗಳ ಬೆಲೆಯಲ್ಲಿ ಏರಿಳಿತ ಕಂಡುಬರುತ್ತಿರುತ್ತದೆ’ ಎಂದು ದಾಖಲೆಯೊಂದರಲ್ಲಿ ಹೇಳಲಾಗಿದೆ. 2023ರ ಹಿಂಡೆನ್‌ಬರ್ಗ್ ವರದಿಯ ನಂತರ ಎಲ್‌ಐಸಿಯು ₹46 ಸಾವಿರ ಕೋಟಿಯಷ್ಟು ಗಳಿಕೆಯನ್ನು ಕಳೆದುಕೊಂಡಿತ್ತು. 2023ರ ಫೆಬ್ರುವರಿಯಲ್ಲಿ ಅದಾನಿ ಕಂಪನಿಗಳಲ್ಲಿ ಎಲ್‌ಐಸಿಯ ಹೂಡಿಕೆಯು ₹25 ಸಾವಿರ ಕೋಟಿಗೆ ಕುಸಿದಿತ್ತು. 2024ರ ಮಾರ್ಚ್ ವೇಳೆಗೆ ಎಲ್‌ಐಸಿ ಹೂಡಿಕೆ ಮೌಲ್ಯ ₹57 ಸಾವಿರ ಕೋಟಿಗೆ ಏರಿದೆ.

ಸಿಗದ ಪ್ರತಿಕ್ರಿಯೆ

ಹಲವು ಬಾರಿ ಕೇಳಿದ ನಂತರವೂ ಎಲ್‌ಐಸಿ, ಹಣಕಾಸು ಸೇವೆಗಳ ಇಲಾಖೆ (ಡಿಎಫ್‌ಎಸ್), ಪ್ರಧಾನಿ ಕಚೇರಿ ಪ್ರತಿಕ್ರಿಯೆ ನೀಡಲಿಲ್ಲ ಎಂದು ವಾಷಿಂಗ್ಟನ್ ಪೋಸ್ಟ್ ಹೇಳಿದೆ.

2023ರ ಹಿಂಡೆನ್‌ಬರ್ಗ್ ವರದಿಗೆ ಸಂಬಂಧಿಸಿದಂತೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ನಡೆಸುತ್ತಿರುವ ತನಿಖೆಯ ಬಗ್ಗೆ ಪ್ರಸ್ತಾಪಿಸಿರುವ ವರದಿಯು, ಎರಡು ಆರೋಪಗಳನ್ನು ಸೆಬಿ ಅಲ್ಲಗಳೆದಿದೆ. ಉಳಿದ ಆರೋಪಗಳ ಕುರಿತ ತನಿಖೆ ಬಾಕಿ ಇದೆ ಎಂದು ಮೂಲಗಳು ಮತ್ತು ರಾಯಿಟರ್ಸ್‌ನ ಕಳೆದ ತಿಂಗಳ ವರದಿಯನ್ನು ಉಲ್ಲೇಖಿಸಿದೆ. ಈ ಬಗ್ಗೆ ಕೇಳಿದ ಪ್ರಶ್ನೆಗೆ ಸೆಬಿ ಪ್ರತಿಕ್ರಿಯಿಸಿಲ್ಲ ಎಂದು ಪತ್ರಿಕೆ ಹೇಳಿದೆ.

ಹಾಗಿದ್ದರೂ, ಆಗಿರುವ ನಷ್ಟ ಪೂರ್ಣ ಪ್ರಮಾಣದಲ್ಲಿ ಭರ್ತಿಯಾಗಿಲ್ಲ’ ಎಂದು ದಾಖಲೆಯಲ್ಲಿ ಹೇಳಿರುವುದನ್ನು ವರದಿ ಉಲ್ಲೇಖಿಸಿದೆ.

ಇಸ್ರೇಲ್‌ನ ಹೈಫಾ ಬಂದರಿನಲ್ಲಿ ಅದಾನಿ ಸಮೂಹ ದೊಡ್ಡ ಪಾಲು ಹೊಂದಿದೆ. ಯೆಮನ್‌ನ ಹುಥಿ ಬಂಡುಕೋರರು ಈ ಬಂದರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವ ಬೆದರಿಕೆ ಹಾಕುತ್ತಿದ್ದು, ಹೂಡಿಕೆದಾರರು ಸಮೂಹದಲ್ಲಿ ಹಣ ಹೂಡುವುದಕ್ಕೆ ಯೋಚನೆ ಮಾಡುವಂತೆ ಮಾಡಿದೆ ಎಂದು ಅಧಿಕಾರಿಗಳು ದಾಖಲೆಯಲ್ಲಿ ಅಭಿಪ್ರಾಯಪಟ್ಟಿರುವುದನ್ನೂ ದಿ ವಾಷಿಂಗ್ಟನ್ ಪೋಸ್ಟ್ ವಿವರಿಸಿದೆ.

ರಾಜಕೀಯವಾಗಿ ಬರಬಹುದಾದ ವಿರೋಧವು ಇನ್ನೊಂದು ಪ್ರಮುಖ ಅಂಶ. ದೇಶದ ಪ್ರಮುಖ ವಿರೋಧ ಪಕ್ಷ ಕಾಂಗ್ರೆಸ್ ಮತ್ತು ಸಿಪಿಎಂ, ಎಲ್‌ಐಸಿಯು ಅದಾನಿ ಸಮೂಹದಲ್ಲಿ ಬಂಡವಾಳ ಹೂಡುತ್ತಿರುವುದನ್ನು ಸಾರ್ವಜನಿಕರ ಹಣದ ದುರ್ಬಳಕೆ ಎಂದು ಕರೆದಿವೆ ಎಂದು ದಾಖಲೆಯಲ್ಲಿ ಅಧಿಕಾರಿಗಳು ಉಲ್ಲೇಖಿಸಿದ್ದಾರೆ ಎಂದೂ ವರದಿ ಹೇಳಿದೆ.

ಮೋದಿ, ಅದಾನಿ ಮತ್ತು ವಿವಾದ

ಅದಾನಿ ಸಮೂಹವು 1991ರಿಂದ ನಡೆದು ಬಂದ ಹಾದಿ ಮತ್ತು ಅದನ್ನು ಸುತ್ತುವರಿದಿರುವ ವಿವಾದಗಳಿಗೆ ಸಂಬಂಧಿಸಿದ ವಿವರಗಳನ್ನು ವರದಿ ಒಳಗೊಂಡಿದೆ.

ಸಮೂಹದ ಮುಖ್ಯಸ್ಥ ಗೌತಮ್ ಅದಾನಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ನಡುವಿನ ಒಡನಾಟದ ಬಗ್ಗೆಯೂ ಪ್ರಸ್ತಾಪಿಸಲಾಗಿದೆ. 2014ರ ಲೋಕಸಭಾ ಚುನಾವಣೆಯಲ್ಲಿ ಮೋದಿ ಅವರು ಬಿಜೆಪಿಯ ಪ್ರಧಾನಿ ಅಭ್ಯರ್ಥಿಯಾಗಿ ಘೋಷಣೆಯಾದ ಬಳಿಕ ಪ್ರಚಾರಕ್ಕಾಗಿ ಅದಾನಿ ಅವರ ವಿಮಾನ ಬಳಸಿದ್ದನ್ನೂ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಪ್ರಧಾನಿ ಅವರ ಆಧುನಿಕ ವೂ ಜಾಗತಿಕವಾಗಿ ಹೆಚ್ಚು ಸ್ಪರ್ಧಾತ್ಮಕವೂ ಆದ ಭಾರತದ ಪರಿಕಲ್ಪನೆಯಲ್ಲಿ ಅದಾನಿ ಸಮೂಹ ಕೇಂದ್ರ ಸ್ಥಾನ ಪಡೆಯಿತು ಎಂದೂ ಅದು ಹೇಳಿದೆ.

2023ರ ಜನವರಿಯಲ್ಲಿ ಅಮೆರಿಕದ ಶಾರ್ಟ್ ಸೆಲ್ಲಿಂಗ್, ಹೂಡಿಕೆ ಮತ್ತು ಸಂಶೋಧನಾ ಸಂಸ್ಥೆ ‘ಹಿಂಡೆನ್‌ಬರ್ಗ್ ರಿಸರ್ಚ್’ ಪ್ರಕಟಿಸಿದ್ದ ವರದಿಯ (ಈ ಸಂಸ್ಥೆ ಈಗ ಮುಚ್ಚಿದೆ) ವಿವಾದ ಮತ್ತು ಕಳೆದ ವರ್ಷದ ಅಮೆರಿಕದಲ್ಲಿ ಹೂಡಿಕೆ ಸಂಗ್ರಹಿಸುವುದಕ್ಕಾಗಿ ತಪ್ಪು ಮಾಹಿತಿ ನೀಡಿರುವುದು ಮತ್ತು ಭಾರತದ ಅಧಿಕಾರಿಗಳಿಗೆ ಲಂಚ ನೀಡಿರುವ ಆರೋಪದ ವಿವಾದಗಳ ಬಗ್ಗೆಯೂ ವಾಷಿಂಗ್ಟನ್ ಪೋಸ್ಟ್ ವಿಸ್ತೃತವಾಗಿ ವಿವರಿಸಿದೆ.

ಅದಾನಿ ಸಮೂಹ ಹೇಳಿದ್ದೇನು?

‘ಎಲ್‌ಐಸಿ ಹೂಡಿಕೆಯ ಹಿಂದೆ ಸರ್ಕಾರದ ನಿರ್ದೇಶನವಿದೆ ಎಂಬ ಆರೋಪವನ್ನು ನಾವು ಸ್ಪಷ್ಟವಾಗಿ ನಿರಾಕರಿಸುತ್ತಿದ್ದೇವೆ’ ಎಂದು ಅದಾನಿ ಸಮೂಹವು ಆರೋಪಗಳಿಗೆ ಪ್ರತಿಕ್ರಿಯಿಸಿದೆ.

‘ಎಲ್‌ಐಸಿಯು ಹಲವು ಕಾರ್ಪೊರೇಟ್ ಸಮೂಹಗಳಲ್ಲಿ ಹೂಡಿಕೆ ಮಾಡುತ್ತಿದೆ. ಅದಾನಿ ಸಮೂಹಕ್ಕೆ ವಿಶೇಷ ಒತ್ತು ನೀಡಲಾಗುತ್ತಿದೆ ಎಂಬುದು ದಾರಿತಪ್ಪಿಸುವಂತಹದ್ದು. ನಮ್ಮ ಕಂಪನಿಗಳಲ್ಲಿ ಮಾಡಿದ ಹೂಡಿಕೆಯಿಂದ ಎಲ್‌ಐಸಿ ಹೆಚ್ಚು ಹಣವನ್ನು ಗಳಿಸಿದೆ. ರಾಜಕೀಯ ನೆರವಿನ ಪ್ರತಿಪಾದನೆಗಳು ಆಧಾರರಹಿತವಾದವು. ಮೋದಿ ಅವರು ಪ್ರಧಾನಿಯಾಗುವುದಕ್ಕೂ ಮೊದಲೇ ಕಂಪನಿ ಅಭಿವೃದ್ಧಿ ಕಂಡಿದೆ’ ಎಂದು ಸಮೂಹ ಹೇಳಿರುವುದನ್ನು ವರದಿ ಉಲ್ಲೇಖಿಸಿದೆ.

‘2024ರ ನವೆಂಬರ್‌ನಿಂದ ನಮ್ಮ ಕಂಪನಿಗಳು ಜಾಗತಿಕ ಮತ್ತು ದೇಶೀಯ ಸಾಲಪತ್ರ ಮಾರುಕಟ್ಟೆಗಳಿಂದ ₹61 ಸಾವಿರ ಕೋಟಿ ಸಂಗ್ರಹಿಸಿವೆ. ಸಮೂಹವು ಆರ್ಥಿಕವಾಗಿ ಸದೃಢವಾಗಿದೆ. ಸಮೂಹದ ಆರ್ಥಿಕ ಸ್ಥಿತಿಗತಿ ಕುರಿತಂತೆ ಇರುವ ಅಭಿಪ್ರಾಯಗಳು ಸುಳ್ಳು ಮತ್ತು ದಾರಿ ತಪ್ಪಿಸುವಂತಹವು’ ಎಂದು ಅದಾನಿ ಸಮೂಹ ಹೇಳಿರುವುದಾಗಿಯೂ ಪತ್ರಿಕೆ ತಿಳಿಸಿದೆ.

ರಾಷ್ಟ್ರೀಯ

ಆಸಿಯಾನ್–ಭಾರತ ಪಾಲುದಾರಿಕೆ
‘2026: ಕಡಲ ಸಹಕಾರ ವರ್ಷ ಘೋಷಣೆ’

ನವದೆಹಲಿ (ಪಿಟಿಐ): ಆಸಿಯಾನ್ ಮತ್ತು ಭಾರತ ನಡುವಿನ ಸಮಗ್ರ ಪಾಲುದಾರಿಕೆಯು ಜಾಗತಿಕ ಸ್ಥಿರತೆ ಹಾಗೂ ಅಭಿವೃದ್ಧಿಗೆ ಪ್ರಬಲ ಅಡಿಪಾಯವಾಗಲಿದೆ. ಹೀಗಾಗಿ 2026 ಅನ್ನು ‘ಆಸಿಯಾನ್–ಭಾರತ ಕಡಲ ಸಹಕಾರ ವರ್ಷ’ ಎಂಬುದಾಗಿ ಘೋಷಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದ್ದಾರೆ.

ಸಾಗರ ಸುರಕ್ಷತೆ ಹಾಗೂ ‘ನೀಲಿ ಆರ್ಥಿಕತೆ’ ಕ್ಷೇತ್ರಕ್ಕೆ ಸಂಬಂಧಿಸಿ ಆಸಿಯಾನ್ ಸದಸ್ಯ ರಾಷ್ಟ್ರಗಳ ನಡುವೆ ಸಹಕಾರ ಕೂಡ ಹೆಚ್ಚುತ್ತಿದೆ. ಈ ಎಲ್ಲ ಕಾರಣಗಳಿಂದ ಈ ಘೋಷಣೆ ಮಾಡಲಾಗುತ್ತದೆ ಎಂದು ವಿವರಿಸಿದರು. ಮಲೇಷ್ಯಾದ ಕ್ವಾಲಾಲಂಪುರದಲ್ಲಿ ಆರಂಭವಾದ ಮೂರು ದಿನಗಳ ಆಸಿಯಾನ್ ಶೃಂಗಸಭೆಯನ್ನು ವರ್ಚುವಲ್ ಮೂಲಕ ಉದ್ದೇಶಿಸಿ ಅವರು ಮಾತನಾಡಿದರು.

‘ವಿಶ್ವದ ಹಲವೆಡೆ ಈಗ ಅನಿಶ್ಚಿತ ಸ್ಥಿತಿ ಇದೆ. ಈ ಪರಿಸ್ಥಿತಿಯಲ್ಲಿಯೂ ಭಾರತ ಮತ್ತು ಆಸಿಯಾನ್ ನಡುವಿನ ಪಾಲುದಾರಿಕೆಯಲ್ಲಿ ಗಮನಾರ್ಹ ಪ್ರಗತಿ ಸಾಧಿಸಲಾಗಿದೆ’ ಎಂದರು.

> **ಹಿಂದೂಮಹಾಸಾಗರ–ಪೆಸಿಫಿಕ್ ಪ್ರದೇಶದ ವಿದ್ಯಮಾನಗಳಿಗೆ ಸಂಬಂಧಿಸಿ ಆಸಿಯಾನ್ ಪ್ರಮುಖ ಪಾತ್ರವಹಿಸಬೇಕು ಎಂಬ ವಿಚಾರವನ್ನು ಭಾರತ ಯಾವಾಗಲೂ ಬೆಂಬಲಿಸುತ್ತಾ ಬಂದಿದೆ**
> **ನರೇಂದ್ರ ಮೋದಿ,** ಪ್ರಧಾನಿ

‘ಶಿಕ್ಷಣ, ಪ್ರವಾಸ, ವಿಜ್ಞಾನ ಮತ್ತು ತಂತ್ರಜ್ಞಾನ, ಆರೋಗ್ಯ, ಹಸಿರು ಇಂಧನ, ಸೈಬರ್ ಭದ್ರತೆ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ಆಸಿಯಾನ್ ಸದಸ್ಯ ರಾಷ್ಟ್ರಗಳ ಮಧ್ಯೆ ಸಹಕಾರ ಹೆಚ್ಚುತ್ತಿದೆ. ಸದಸ್ಯ ರಾಷ್ಟ್ರಗಳ ಜನರ ನಡುವಿನ ಸಂಬಂಧ ಬಲಪಡಿಸುವುದು, ಸಾಂಸ್ಕೃತಿಕ ಪರಂಪರೆ ಸಂರಕ್ಷಣೆ ಕಾರ್ಯವನ್ನು ಮುಂದುವರಿಸಲಾಗುವುದು’ ಎಂದು ಮೋದಿ ಹೇಳಿದರು.

‘ಅಪ್ಪುಗೆ ರಾಜತಾಂತ್ರಿಕತೆ ಫಲಿಸದಿದ್ದರೂ ಅಚ್ಚರಿ ಇಲ್ಲ’

ನವದೆಹಲಿ (ಪಿಟಿಐ): ‘ಭಾರತವು ರಷ್ಯಾದಿಂದ ಕಚ್ಚಾತೈಲ ಖರೀದಿಸುವುದನ್ನು ನಿಲ್ಲಿಸಲಿದೆ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪುನರುಚ್ಚರಿಸಿದ್ದನ್ನು ಉಲ್ಲೇಖಿಸಿ, ಕಾಂಗ್ರೆಸ್ ಪಕ್ಷ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭಾನುವಾರ ಕುಟುಕಿದೆ.

‘ಕ್ವಾಲಾಲಂಪುರದಲ್ಲಿ ನಡೆಯುತ್ತಿರುವ ಆಸಿಯಾನ್ ಶೃಂಗಸಭೆಯಲ್ಲಿ ಮೋದಿ ಅವರ ‘ಅಪ್ಪುಗೆ ರಾಜತಾಂತ್ರಿಕತೆ’ ಫಲ ನೀಡದಿದ್ದರೂ ಅಚ್ಚರಿ ಇಲ್ಲ’ ಎಂದು ಹೇಳಿದೆ.

ಈ ಶೃಂಗಸಭೆಯಲ್ಲಿ ಪಾಲ್ಗೊಳ್ಳುವುದಕ್ಕಾಗಿ ಕ್ವಾಲಾಲಂಪುರಕ್ಕೆ ಪ್ರಯಾಣಿಸುವ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ್ದ ಟ್ರಂಪ್, ‘ರಷ್ಯಾದಿಂದ ಕಚ್ಚಾತೈಲ ಖರೀದಿಸುವುದನ್ನು ಭಾರತ ಸಂಪೂರ್ಣವಾಗಿ ನಿಲ್ಲಿಸಲಿದೆ’ ಎಂದು ಹೇಳಿದ್ದರು. ಈಗ ಇದೇ ವಿಚಾರ ಮುಂದಿಟ್ಟುಕೊಂಡು ಕಾಂಗ್ರೆಸ್ ಪಕ್ಷ ಮೋದಿ ವಿರುದ್ಧ ಚಾಟಿ ಬೀಸಿದೆ.

ಕೇರಳಕ್ಕೆ ಮರಳಿದ ಎಸ್‌ಐಟಿ

ಪತ್ತನಂತಿಟ್ಟ (ಪಿಟಿಐ): ಶಬರಿಮಲೆ ದೇವಸ್ಥಾನದ ಚಿನ್ನ ಕಳವು ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು (ಎಸ್‌ಐಟಿ) ಕರ್ನಾಟಕ ಹಾಗೂ ತಮಿಳುನಾಡಿನಲ್ಲಿ ಸಾಕ್ಷ್ಯಾಧಾರಗಳ ಸಂಗ್ರಹ ಕಾರ್ಯವನ್ನು ಪೂರ್ಣಗೊಳಿಸಿ ಕೇರಳಕ್ಕೆ ಭಾನುವಾರ ಹಿಂತಿರುಗಿದೆ.

ಪ್ರಕರಣದ ಪ್ರಮುಖ ಆರೋಪಿ ಉಣ್ಣಿಕೃಷ್ಣನ್ ಪೋಟಿ ಅವರನ್ನು ಕರ್ನಾಟಕದ ಬಳ್ಳಾರಿ, ಬೆಂಗಳೂರು ಹಾಗೂ ತಮಿಳುನಾಡಿನ ಚೆನ್ನೈಗೆ ಕರೆದೊಯ್ಯಲಾಗಿತ್ತು. ಎಸ್‌ಐಟಿ ಅಧಿಕಾರಿಗಳು ಹಾಗೂ ಪೋಟಿ ಅವರು ತಿರುವನಂತಪುರದ ಅಪರಾಧ ವಿಭಾಗದ ಕಚೇರಿಗೆ ವಾಪಸ್ ಆಗಿದ್ದಾರೆ.

ಶುಕ್ರವಾರ ಎಸ್‌ಐಟಿ ಅಧಿಕಾರಿಗಳು ಬಳ್ಳಾರಿಗೆ ಭೇಟಿ ನೀಡಿ, ಆಭರಣ ಮಳಿಗೆ ಮಾಲೀಕ ಗೋವರ್ಧನ್ ಬಳಿ ದಾಖಲೆಗಳನ್ನು ಪರಿಶೀಲಿಸಿದ್ದರು. ಇವರು ಗರ್ಭಗುಡಿ ಬಾಗಿಲಿನ ಚೌಕಟ್ಟುಗಳಿಗೆ ಚಿನ್ನಲೇಪನಕ್ಕಾಗಿ ಹಣಕಾಸು ಒದಗಿಸಿದ್ದರು. ಆದರೆ, ಇದನ್ನು ಪೋಟಿ ಅವರ ಹೆಸರಿನಲ್ಲಿ ಪ್ರಾಯೋಜಿಸಲಾಗಿತ್ತು. ಬೆಂಗಳೂರಿನ ಶ್ರೀರಾಂಪುರದಲ್ಲಿರುವ ಪೋಟಿ ನಿವಾಸ ಹಾಗೂ 2019ರಲ್ಲಿ ದ್ವಾರಪಾಲಕ ಮೂರ್ತಿಗಳಿಂದ ಚಿನ್ನಲೇಪಿತ ಕವಚವನ್ನು ಬೇರ್ಪಡಿಸಿ ಹೊಸದಾಗಿ ಚಿನ್ನಲೇಪನ ಮಾಡಿದ್ದ ಚೆನ್ನೈನ ಸ್ಮಾರ್ಟ್ ಕ್ರಿಯೇಷನ್ ಕಚೇರಿಯಲ್ಲಿ ಎಸ್‌ಐಟಿ ಅಧಿಕಾರಿಗಳು ಏಕಕಾಲದಲ್ಲಿ ಶೋಧ ನಡೆಸಿದ್ದರು.

‘ಶೋಧದ ವೇಳೆ ವಶಪಡಿಸಿಕೊಂಡ ದಾಖಲೆಗಳನ್ನು ನ್ಯಾಯಾಲಯಕ್ಕೆ ಶೀಘ್ರದಲ್ಲೇ ಸಲ್ಲಿಸಲಾಗುವುದು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪದಬಂಧ 6205
ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಮಾತು ಕೊಡುವುದು (3)
4.ಮೂರು ಮಾತ್ರೆಗಳ ಕಾಲವನ್ನು ಹೊಂದಿರುವ ಅಕ್ಷರ (2)
6.ಈ ಪರಿ ನಡೆದ ಲಗ್ನ (4)
7.ಕಾಲಕ್ಕೆ ಸರಿಯಾದುದು (4)
10.ದಂಪತಿಗಳು ಹಬ್ಬಿಸಿದ ಗಾಳಿ ಸುದ್ದಿ! (3)
11.ಎಲ್ಲರೂ ಕೂಡಿ ಒಟ್ಟಾಗಿ ಹಾಡುವುದು (5)
12.ಮಾದ ಎಸಗಿದ ತಪ್ಪು! (3)
14.ಗಾಣವುಳ್ಳ ಧನಿಕ ತಿರುಗಿದ್ದಾನೆ (4)
17.ವನದಲ್ಲಿ ಕಾಣುತ್ತಿರುವ ಬೆಳವಣಿಗೆ (4)
18.ನೂರು ಸಾವಿರವಿದು (2)
19.ಶುನಕ ಮೂಸುತ್ತಿರುವ ಬಳ್ಳುಳ್ಳಿ! (3)

ಮೇಲಿಂದ ಕೆಳಕ್ಕೆ
1.ಅಪ್ಪನ ಈ ರೂಪ ಬಹಳ ವಿರಳ! (4)
2.ಪಾಯಸ ನೆಕ್ಕುತ್ತಿರುವ ಕಾಗೆ! (3)
3.ಇದು ಅಸಲಿಯಂತೂ ಅಲ್ಲವೇ ಅಲ್ಲ! (3)
5.ನಡುವೆ ಗರ ತಿರುಗಿಸಿದರೆ ವರ್ಗ ಕಾಣುತ್ತಿದೆಯಲ್ಲ! (4)
8.ಸಮಯವನ್ನು ವ್ಯರ್ಥವಾಗಿ ಕಳೆಯುವುದು (5)
9.ವನದ ಬಗ್ಗೆ ಬರೆದ ಪದ್ಯ (3)
11.ಬೆಲೆಯಿಟ್ಟು ನೀಡಿದ ಸಲುಗೆ (3)
12.ಮಾಡಿದ ಕೆಲಸಕ್ಕಾಗಿ ದೊರೆತ ಲಾಭ (4)
13.ತುಸುವೆ ಬೀರಿದ ಮಂದಹಾಸ (4)
15.ಈತ ಹಳ್ಳಿಯವನು (3)
16.ವನದ ಕೊನೆಗೆ ಮಾಡಿದ ಯಜ್ಞ (3)



6204ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸುಕನಾಸಿ 3.ಪಶ್ಚಾತ್ತಾಪ
5.ರಗಡು 6.ಹಣವಂತ
8.ತಭೂ 9.ಲೋಪ
10.ಮಿತವ್ಯಯ 13.ನಗಾರಿ
16.ಕಡುಕೋಪ 17.ಮಕರಂದ

ಮೇಲಿಂದ ಕೆಳಕ್ಕೆ:
1.ಸುಗ್ಗಿ 2.ನಾರಂಗ
3.ಪರಿಮಾಣ 4.ಪಶ್ಚಿಮ
5.ರಣಭೂಮಿ 6.ಹರೆಯ
7.ತಲೋದರಿ 11.ವ್ಯರ್ಥಾಲಾಪ
12.ದಶಕ 14.ಗಾಯಕ
15.ಪಾದ

ಸುಡೊಕು 6589

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

9	2			5		8	4	
			3		9			1
	4	3		1				7
	3	2		9		7		6
			1		2		9	
7	9			3		2	1	
3	1		9		5		7	
				8		1	6	9
	6	9			1		3	

6588 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ಈಡೇರದ ‘ಕತ್ತೆ ಕನಸು’

ನುಡಿ ಬೆಳಗು



ದಾದಾಪೀರ್ ನವಿಲೇಹಾಳ್

ಸುಂದರವಾದ ಉದ್ಯಾನಗಳೂ ಕೊಳಚೆ ಪ್ರದೇಶಗಳೂ ಸಮಾನವಾಗಿದ್ದ ಈ ಊರನ್ನು ಗಾರ್ದಭ ನಗರಿ ಎಂದು ಕರೆಯುತ್ತಿದ್ದರು. ಎರಡು ಕತ್ತೆಗಳು ಇಲ್ಲಿನ ಉದ್ಯಾನವೊಂದರ ವಿರುದ್ಧ ದಿಕ್ಕಿನಲ್ಲಿ ಮೇಯುತ್ತಿದ್ದವು. ಅದರಲ್ಲಿ ಒಂದು ಕುದುರೆಯ ಹಾಗೆ ಮಜಬೂತಾಗಿತ್ತು. ಅದರ ಬೆನ್ನು ಕೈಯಿಟ್ಟರೆ ಜಾರುವಷ್ಟು ನುಣುಪಾಗಿತ್ತು. ಇನ್ನೊಂದು ತೀರಾ ಬಡವಾಗಿತ್ತು. ಅದರ ಮೈತುಂಬ ಗಾಯಗಳಾಗಿದ್ದವು. ಬೆನ್ನು ಮೇಲಿನ ಚರ್ಮ ಕಿತ್ತು ಕೀವು ರಕ್ತ ಸೋರುತ್ತಿತ್ತು. ಕಾಗೆಗಳು ಹಾರಿ ಬಂದು ಅದರ ಮೈಮೇಲೆ ಕುಳಿತು ಕುಕ್ಕಿ ತಿನ್ನುತ್ತಿದ್ದವು. ಈ ಯಾವುದರ ಪರಿವೆಯೂ ಇಲ್ಲದಂತೆ ಅದು ತಲೆತಗ್ಗಿಸಿ ಮೇಯುತ್ತಿತ್ತು.

ಕುದುರೆಯಂತಿದ್ದ ಕತ್ತೆ ಮೇಯುತ್ತಾ ಮೇಯುತ್ತಾ ಗಾಯ ತುಂಬಿದ ಕತ್ತೆಯ ಹತ್ತಿರ ಬಂದು ‘ಇದೇನಿದು? ಮೈತುಂಬಾ ಗಾಯ ಏನಾಯ್ತು’ ಅಂತ ಕೇಳುತ್ತದೆ. ‘ನನ್ನ ಯಜಮಾನ ದೊಣ್ಣೆಯಿಂದ ದಿನಾ ಹೊಡೆಯುತ್ತಾನೆ. ಬಯ್ಯುತ್ತಾನೆ. ಹೊಟ್ಟೆ ತುಂಬಾ ಊಟ ಹಾಕುವುದಿಲ್ಲ’ ಎನ್ನುತ್ತದೆ. ‘ನೀನು ನಿಜವಾಗಲೂ ಕತ್ತೆ. ಅಷ್ಟೆಲ್ಲಾ ಹಿಂಸೆ ಅವಮಾನ ಸಹಿಸಿಕೊಂಡು ಅಲ್ಲೇ ಯಾಕಿದ್ದೀಯ? ನನ್ನ ಯಜಮಾನ ಒಳ್ಳೆಯವನು. ನಾನು ಎಷ್ಟು ಚೆನ್ನಾಗಿದ್ದೇನೆ ನೋಡು, ನನ್ನ ಜೊತೆ ಬಂದುಬಿಡು’ ಎಂದು ಕರೆಯುತ್ತದೆ. ‘ಇಲ್ಲ, ನಾನು ಬರುವುದಿಲ್ಲ. ನನ್ನ ಯಜಮಾನನಿಗೆ ಅಪ್ಸರೆಯಂತಹ ಮಗಳಿದ್ದಾಳೆ. ಅವಳ ಮೇಲೆ ಕೋಪ ಬಂದಾಗಲೆಲ್ಲಾ ಆತ ನಿನ್ನನ್ನು ಕತ್ತೆಗೆ ಕೊಟ್ಟು ಮದುವೆ ಮಾಡುತ್ತೇನೆ ಎನ್ನುತ್ತಿರುತ್ತಾನೆ. ನಾನು ಅದಕ್ಕಾಗಿ ಕಾಯುತ್ತಿದ್ದೇನೆ’ ಎನ್ನುತ್ತದೆ.

ಹೀಗೆಯೇ ಸಲ್ಲದ ನಿರೀಕ್ಷೆಗಳನ್ನು ಇಟ್ಟುಕೊಂಡು ಪಡಬಾರದ ಕಷ್ಟನಿಷ್ಠುರಗಳನ್ನು ಅನುಭವಿಸುತ್ತಿರುವ ಮನುಷ್ಯರ ಕಥೆಯಿದು. ಕೆಲವರಿಗೆ ಸುಖ ಎಂಬುದು ಬಲು ದೂರದಲ್ಲಿರುತ್ತದೆ. ಎಷ್ಟೇ ಕಷ್ಟ, ಅಡ್ಡಿ ಆತಂಕಗಳು ಎದುರಾಗಲಿ ಅದನ್ನು ಪಡೆದೇ ತೀರಬೇಕು ಎನ್ನುವ ಹುಚ್ಚು ಸಂಕಲ್ಪ ಹೊಂದಿರುತ್ತಾರೆ. ಸುಖ ಎನ್ನುವುದು ತನ್ನ ಕಾಲಬುಡದಲ್ಲಿ ಬಿದ್ದಿದ್ದರೂ ಕಾಣಲಾಗದ ಕುರುಡು ಇವರಿಗೆ. ಇಂಥವರನ್ನು ಕಂಡೇ ‘ಕೊಟ್ಟ ಕುದುರೆಯನೇರಲರಿಯದೆ ಮತ್ತೊಂದ ಬಯಸುವವನು ವೀರನೂ ಅಲ್ಲ ಧೀರನೂ ಅಲ್ಲ’ ಎಂದಿರಬೇಕು. ಹೇಗೆ, ಎಲ್ಲಿ ಹುಟ್ಟಬೇಕು ಮತ್ತು ಸಾಯಬೇಕು ಎಂಬುದು ಯಾರ ಆಯ್ಕೆಯೂ ಅಲ್ಲ. ಆದರೆ ಯಾರೊಂದಿಗೆ ಹೇಗೆ ಎಲ್ಲಿ ಬದುಕಬೇಕು ಎನ್ನುವುದು ಖಂಡಿತಾ ನಮ್ಮ ಆಯ್ಕೆಗೆ ಬಿಟ್ಟಿದ್ದು.

ದುಡಿದು ತಿನ್ನುವ ಶಕ್ತಿ -ಆಸಕ್ತಿ ಹೊಂದಿದ ಎಲ್ಲರಿಗೂ ಇಲ್ಲಿ ಕೆಲಸವೂ ಇದೆ, ಅನ್ನವೂ ಇದೆ. ಇರುವ ಪರಿಮಿತಿಗಳಲ್ಲಿ ನೆಮ್ಮದಿಯ ಬದುಕನ್ನು ರೂಪಿಸಿಕೊಳ್ಳುವುದು ಎಲ್ಲರಿಗೂ ಸಾಧ್ಯವಿದೆ. ಹಾಗಾಗಿ ಅಸಂಬದ್ಧ ಆಸೆಗಳನ್ನು ತುಂಬಿಕೊಂಡು ಚಡಪಡಿಸುತ್ತಾ ಕೂರುವುದು ಜಾಣತನವಲ್ಲ. ಕನಸು ಕಾಣುವುದು, ಕಂಡ ಕನಸನ್ನು ನನಸು ಮಾಡಿಕೊಳ್ಳಲು ಪ್ರಯತ್ನಿಸುವುದು ಒಳ್ಳೆಯದೇ. ಆದರೆ ಸಾಧುವಲ್ಲದ ಬಯಕೆಗಳನ್ನಿಟ್ಟುಕೊಂಡು ಹಿಂಸೆ ಅವಮಾನವನ್ನು ಸಹಿಸಿಕೊಳ್ಳುವುದಿದೆಯಲ್ಲಾ, ಅದು ಮೂರ್ಖತನ. ಎಷ್ಟು ಹಾಳಾದರೂ, ಎಷ್ಟು ಜೀವ ಸವೆಸಿದರೂ ಹತ್ತಾರು ವರ್ಷಗಳಿಂದ ಜೀವವಿರೋಧಿ ದುಷ್ಟ ಕಾರ್ಯಗಳಲ್ಲಿ ತೊಡಗಿರುವ ಸಂಘ- ಸಂಸ್ಥೆ, ಜನ-ಜಾಗ, ಪಂಥ-ಪಾರ್ಟಿಗಳನ್ನು ಬಿಟ್ಟು ಬರಲು ತಯಾರಿಲ್ಲದ ಮನಃಸ್ಥಿತಿ ನಿಯತ್ತಿನದಲ್ಲ. ಅದು ಬೌದ್ಧಿಕ ದಾರಿದ್ರ್ಯದ ಪರಮಾವಧಿ. ನಿತ್ಯದ ಹಂಗು. ಬೌದ್ಧಿಕ ಗುಲಾಮಗಿರಿಯೇ ಭೌತಿಕ ಜೀತಗಾರಿಕೆಯ ಮೂಲ.

ನೋವು, ಅವಮಾನ ರೂಢಿಯಲ್ಲಿರುವ ಜೀತಗಾರಿಕೆ ತೊರೆದು ಬದುಕಿದರೆ ಅದು ಸ್ವಾತಂತ್ರ್ಯದ ಮೊದಲ ಹೆಜ್ಜೆ, ಅಲ್ಲಿಂದಲೇ ಅವಮಾನಿಸುವವರ ಅವನತಿ ಆರಂಭ. ಕಿರುಕುಳದ ಜಾಗದಿಂದ ಹೊರಬರುವುದೇ ಅವರಿಗೆ ಕೊಡುವ ಶಿಕ್ಷೆ. ಹಂಗಿನರಮನೆಗಿಂತ ವಿಂಗಡದ ಗುಡಿ ಲೇಸು, ಭಂಗಪಟ್ಟುಂಬ ಬಿಸಿ ಅನ್ನಕ್ಕಿಂತ ತಂಗುಳವೆ ಲೇಸು ಎನ್ನುವುದು ಮಾನವ ಘನತೆಗೆ ಕೊಟ್ಟ ವ್ಯಾಖ್ಯಾನ. ಬಾಳೆಗೆ ಒಂದೇ ಗೊನೆ. ಮನುಷ್ಯನಿಗೆ ಒಂದೇ ಬಾಳುವೆ. ಸುಖದುಃಖಗಳು ಬಂದಂತೆ ಬದುಕುವುದೇ ಬಾಳುವೆಗೆ ಸೊಗಸು.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

27 ಅಕ್ಟೋಬರ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಪಂಚಮಿ ಗಂ.6-05 **ನಕ್ಷತ್ರ:** ಮೂಲ ಗಂ.13-28 **ಯೋಗ:** ಅತಿಗಂಡ ಗಂ 7-27 ಕರಣ: ಬಾಲವ ಗಂ. 6-05 ತುಲಾ ಮಾಸದ 10 ನೇ ದಿನ. ಮಳೆ ನಕ್ಷತ್ರ : ಸ್ವಾತಿ 1 ನೇ ಪಾದ. **ರಾಹುಕಾಲ :** ಬೆಳಿಗ್ಗೆ 07-30 09-00 , **ಸೂರ್ಯೋದಯ :** 06-27 **ಸೂರ್ಯಾಸ್ತ :** 06-02, ಮುಸ್ಲಿಂ ದಿನಾಂಕ : 04 ಜುಮಾದುಲ್ಲಾವಲ್ , **ದಿನ ವಿಶೇಷ :** ಕಾರ್ತಿಕ ಸೋಮವಾರ , **ಅದೃಷ್ಟ ಸಂಖ್ಯೆ :** 2, 8

ಮೇಷ: ವಿದ್ಯಾರ್ಥಿಗಳ ಮುಂದೆ ಪಾಠ ಮಾಡಲು ತೆರಳಿ ವಿಷಯಗಳು ಅದಲು ಬದಲು ಮಾಡಿಕೊಳ್ಳುವ ಸಾಧ್ಯತೆ ಇದೆ. ಪೂರ್ವತಯಾರಿ ಅಗತ್ಯ. ಮನೆಯಲ್ಲಿ ನಡೆಯುವ ಶುಭ ಸಮಾರಂಭಕ್ಕೆ ಪಿತೃ ಸಮಾನರಿಂದ ಆಶೀರ್ವಾದ ಸಿಗುವುದು.

ವೃಷಭ: ಮಕ್ಕಳ ಸರ್ವತೋಮುಖ ಚಟುವಟಿಕೆ ಮತ್ತು ವಿದ್ಯಾಭ್ಯಾಸ ಉತ್ತಮವಾಗಿದ್ದು, ಕುಟುಂಬದಲ್ಲಿ ಸುಖ-ಶಾಂತಿ ತುಂಬಿರುತ್ತವೆ. ದಾಂಪತ್ಯದಲ್ಲಿ ಹೊಂದಾಣಿಕೆಯಿಂದ ಜೀವನ ಹಸನವಾಗಲಿದೆ.

ಮಿಥುನ: ವಸ್ತ್ರ ವಿನ್ಯಾಸ ಸಲಹೆಗಾರರಿಗೆ ಪ್ರತಿಷ್ಠಿತ ಗಾರ್ಮೆಂಟ್ ಸಂಸ್ಥೆಯೊಂದರಲ್ಲಿ ಉದ್ಯೋಗ ಸಿಗುವ ಕುರುಹುಗಳು ಸಿಗುತ್ತವೆ. ಸಲಹೆ ಸೂಚನೆಗಳನ್ನು ಮೇಲಧಿಕಾರಿಗಳು ವ್ಯತ್ಯಾಸವಿಲ್ಲದೆ ಜಾರಿಗೆ ತಂದದ್ದಕ್ಕೆ ಸಂತೋಷವಾಗಲಿದೆ.

ಕರ್ಕಾಟಕ: ಮನರಂಜನೆಗಾಗಿ ದುಂದುವೆಚ್ಚ ಮಾಡಿ ಮುಂದಿನ ದಿನಗಳಲ್ಲಿ ಕೊರಗುವಂತೆ ಮಾಡಿಕೊಳ್ಳದಿರಿ. ಭೂಮಿ ಅಥವಾ ವಾಹನ ಖರೀದಿಯಲ್ಲಿ ಮೋಸ ಹೋಗುವ ಸಾಧ್ಯತೆ ಇದ್ದು, ಎಚ್ಚರವಿರಲಿ.

ಸಿಂಹ: ಸ್ನೇಹಪರ ಸ್ವಭಾವದಿಂದಾಗಿ ಕಾರ್ಯಕ್ಷೇತ್ರದಲ್ಲಿ ವೈಯಕ್ತಿಕ ಸ್ಥಾನಮಾನಗಳು ಲಭಿಸಲಿವೆ. ಎಲ್ಲವನ್ನು ಮಾಡಬಲ್ಲೆನೆಂಬ ಹುಮ್ಮಸ್ಸು ಅನುಭವದಿಂದ ಬಂದಿದೆ. ಸುಲಭವಾಗಿ ಕೆಲಸ ಪೂರೈಸುವಿರಿ.

ಕನ್ಯಾ: ದೈವಾನುಗ್ರಹ ನಿಮ್ಮ ಪಾಲಿಗೆ ಸಂಪೂರ್ಣವಿದ್ದು ತೊಂದರೆಗಳನ್ನು ನಿವಾರಿಸಿ ವೃತ್ತಿರಂಗದಲ್ಲಿ ಉತ್ತಮ ರೀತಿಯಲ್ಲಿ ಮುಂದುವರಿಯಲು ಪೂರಕ. ಉದ್ಯೋಗ, ವ್ಯವಹಾರದಲ್ಲಿ ಪ್ರಗತಿ ಇರುವುದು.

ತುಲಾ: ಕುಟುಂಬದ ಸದಸ್ಯರಲ್ಲಿ ಆದಷ್ಟು ತಾಳ್ಮೆ-ಸಮಾಧಾನದಿಂದ ವರ್ತಿಸಬೇಕಾದೀತು. ಹೊಸ ಕಾರ್ಯಗಳ ಚಾಲನೆಗೆ ಸೂಕ್ತ ಸಮಯವಲ್ಲ. ಅವಿವಾಹಿತರಿಗೆ ಕಂಕಣ ಬಲ ಕೂಡಿ ಬರುವ ಯೋಗವಿದೆ.

ವೃಶ್ಚಿಕ: ಉದ್ಯೋಗ-ವ್ಯವಹಾರಗಳಲ್ಲಿ ತೊಂದರೆ ಕಂಡುಬರಬಹುದು. ಜಾಗ್ರತೆಯಿಂದಿರಿ. ಕೋರ್ಟು-ಕಚೇರಿ ಕಾರ್ಯಭಾಗದಲ್ಲಿ ಯಶಸ್ಸು ಪಡೆಯುವಲ್ಲಿ ತೊಡಕು ಇರಲಿದೆ. ಗಣಪತಿಯ ಆರಾಧನೆಯಿಂದ ವಿಘ್ನ ನಿವಾರಣೆ.

ಧನು: ಅತಿಯಾಗಿ ಪ್ರೀತಿಸುವ ಹಾಗೂ ಆದರಿಸುವ ಜನರೊಂದಿಗೆ ಕಾಲ ಕಳೆಯಲು ಸಕಾಲ. ವ್ಯಾಪಾರದ ವಿಚಾರದಲ್ಲಿ ಬದಲಾವಣೆ ಇದ್ದಲ್ಲಿ, ಅವರೊಂದಿಗೆ ಗಂಭೀರ ಚರ್ಚೆ ನಡೆಸಿ, ತೀರ್ಮಾನಕ್ಕೆ ಬನ್ನಿರಿ.

ಮಕರ: ಸರ್ಕಾರಿ ಉದ್ಯೋಗ ಅಥವಾ ಕೆಲಸಗಳು ನೆರವೇರಲಿವೆ. ಅಧ್ಯಾಪಕ ವರ್ಗದವರಿಗೆ ವಿದ್ಯಾರ್ಥಿಗಳ ಮೇಲುಗೈಯಿಂದ ಸಂತೋಷ ಹಾಗೂ ಗೌರವ ಸಿಗುವುದು. ಮುಂದಾಲೋಚನೆ ಇಲ್ಲದೇ ಭರವಸೆಯನ್ನೂ ನೀಡಬೇಡಿ.

ಕುಂಭ: ಅವಕಾಶದ ಜೊತೆಯಲ್ಲಿ ಅದೃಷ್ಟವೂ ಪಾಲಿಗಿದೆ. ಯಾವುದೇ ಕೆಲಸ ಮಾಡುವ ಮುನ್ನ ಅದರ ಫಲಾಫಲಗಳನ್ನು ಅರಿತು ಕಠಿಣ ಪರಿಶ್ರಮದಿಂದ ಕಾರ್ಯನಿರ್ವಹಿಸಿದಲ್ಲಿ ಕಹಿಯ ಸನ್ನಿವೇಶಗಳು ಸಹಜ ಸ್ಥಿತಿಗೆ ಮರಳಲಿವೆ.

ಮೀನ: ಬಂಗಾರದ ಮೇಲಿನ ಹೂಡಿಕೆ ವಿಚಾರಗಳು ಮಹತ್ವ ಪಡೆಯುವುದು. ಸಮಾಜದಲ್ಲಿ ಹೆಸರು ಲಭಿಸುವುದರ ಜತೆಗೆ ಬೇಡಿಕೆ ಹೆಚ್ಚಾಗಲಿದೆ. ಕಾಲಿನ ನೋವು ನಿವಾರಣೆಗೆ ವ್ಯಾಯಾಮ, ತೈಲ ಲೇಪನ ನೆರವಾಗಲಿದೆ.

ಗುಂಡಣ್ಣ



ಮದ್ಯ ಮಾರಾಟ ಶೇ 20ರಷ್ಟು ಏರಿಕೆ ನಿರೀಕ್ಷೆ: ಉದ್ಯಮ

ಕ್ರಿಸ್ಮಸ್, ಹೊಸ ವರ್ಷದ ವೇಳೆ ಮಾರಾಟ ಹೆಚ್ಚುವ ಅಂದಾಜು

ನವದೆಹಲಿ (ಪಿಟಿಐ): ಹಬ್ಬಗಳ ಸಂದರ್ಭದಲ್ಲಿ ಎರಡು ಅಂಕಿಗಳ ಬೆಳವಣಿಗೆಯನ್ನು ಕಂಡಿದ್ದ ಮದ್ಯ ಉದ್ಯಮವು ಅಕ್ಟೋಬರ್–ಡಿಸೆಂಬರ್ ಅವಧಿಯಲ್ಲಿ ಶೇಕಡ 20ರಷ್ಟು ಬೆಳವಣಿಗೆ ಸಾಧಿಸುವ ನಿರೀಕ್ಷೆಯನ್ನು ಹೊಂದಿದೆ. ಪ್ರೀಮಿಯಂ ವರ್ಗದ ಮದ್ಯಕ್ಕೆ ಉತ್ತಮ ಬೇಡಿಕೆ ಇರುವುದು ಈ ಬೆಳವಣಿಗೆ ಸಾಧಿಸಲು ನೆರವಾಗುತ್ತದೆ ಎಂಬುದು ಉದ್ಯಮದ ನಂಬಿಕೆ.

ಒಂದೂವರೆ ತಿಂಗಳ ಹಬ್ಬಗಳ ಋತುವಿನಲ್ಲಿ ಮದ್ಯ ಉದ್ಯಮವು ವಿಸ್ಕಿ, ರಮ್, ವೊಡ್ಕಾ, ಜಿನ್, ಟಕಿಲಾ ಮಾರಾಟದಲ್ಲಿ ಹೆಚ್ಚಳ ದಾಖಲಿಸಿದೆ. ಈ ಬಾರಿಯ ಹಬ್ಬಗಳ ಋತುವಿನಲ್ಲಿ ಪ್ರೀಮಿಯಂ ವರ್ಗದ ಮದ್ಯ ಮಾರಾಟದಲ್ಲಿ, ಎರಡು ಹಾಗೂ ಮೂರನೆಯ ಹಂತಗಳಲ್ಲಿ ಮಾರುಕಟ್ಟೆಗಳಲ್ಲಿ ಮಾರಾಟ ಏರಿಕೆ ಆಗಿದೆ. ದೊಡ್ಡ ಮಾರುಕಟ್ಟೆಗಳಲ್ಲಿಯೂ ಮಾರಾಟ ಪ್ರಮಾಣವು ಏರಿಕೆ ಕಂಡಿದೆ.

'ಗ್ರಾಹಕರು ಪ್ರೀಮಿಯಂ ವರ್ಗದ ಮದ್ಯವನ್ನು ಹೆಚ್ಚಾಗಿ ಬಯಸುತ್ತಿದ್ದಾರೆ ಎಂಬುದನ್ನು ಈ ಬಾರಿ ಹಬ್ಬಗಳ ಸಂದರ್ಭದಲ್ಲಿನ ಮಾರಾಟವು ಮತ್ತೊಮ್ಮೆ ಹೇಳಿದೆ' ಎಂದು ರ್‍ಯಾಡಿಕೊ ಖೇತಾನ್ ಕಂಪನಿಯ ಸಿಒಒ ಅಮರ್ ಸಿಂಗ್ ಹೇಳಿದ್ದಾರೆ.

ಗ್ರಾಹಕರು ವೆಚ್ಚ ಮಾಡುವುದು ಹೆಚ್ಚಾಗುತ್ತಿರುವುದು, ಜನರ ಕೈಯಲ್ಲಿ ಖರ್ಚಿಗೆ ಹೆಚ್ಚು ಹಣ ಉಳಿಯುತ್ತಿರುವುದು ಮತ್ತು ಯುವ ಗ್ರಾಹಕರ ಸಮೂಹವು ಇರುವ ಕಾರಣದಿಂದಾಗಿ ಕ್ರಿಸ್ಮಸ್ ಹಾಗೂ ಹೊಸ ವರ್ಷದ ಸಂದರ್ಭದಲ್ಲಿಯೂ ಮದ್ಯ ಮಾರಾಟದಲ್ಲಿ ಹೆಚ್ಚಳವು ಚೆನ್ನಾಗಿ ಇರಲಿದೆ ಎಂದು ಉದ್ಯಮವು ಭಾವಿಸಿದೆ.

ಅಕ್ಟೋಬರ್– ಡಿಸೆಂಬರ್ ಅವಧಿಯಲ್ಲಿ ಮದ್ಯ ಮಾರಾಟವು ಶೇ 20ರವರೆಗೆ ಹೆಚ್ಚಳ ಕಾಣಬಹುದು ಎಂದು ಭಾರತೀಯ ಮದ್ಯ ತಯಾರಿಕಾ ಕಂಪನಿಗಳ ಒಕ್ಕೂಟದ (ಸಿಐಎಬಿಸಿ) ಮಹಾನಿರ್ದೇಶಕ ಅನಂತ ಎಸ್. ಅಯ್ಯರ್ ಹೇಳಿದ್ದಾರೆ. ಮುಂಗಾರು ಮಳೆ ಚೆನ್ನಾಗಿ ಆಗಿರುವುದು ಹಾಗೂ ಆರ್ಥಿಕ ಮುನ್ನೋಟ ಉತ್ತಮವಾಗಿರುವುದು ಮಾರಾಟ ಹೆಚ್ಚಲು ಕಾರಣವಾಗಲಿವೆ ಎಂದು ಅವರು ಭಾವಿಸಿದ್ದಾರೆ.

ಜಿಎಸ್‌ಟಿ ದರವನ್ನು ಇಳಿಕೆ ಮಾಡಿದ ಪರಿಣಾಮವಾಗಿ ಗ್ರಾಹಕರ ಕೈಯಲ್ಲಿ ತುಸು ಹೆಚ್ಚು ಹಣ ಉಳಿಯುತ್ತಿದೆ. ಇದರಿಂದಾಗಿ ಮಾರುಕಟ್ಟೆಯಲ್ಲಿ ವಿವಿಧ ಉತ್ಪನ್ನಗಳ ಖರೀದಿ ಹೆಚ್ಚಾಗಿದೆ. ಈ ನಡುವೆ ಮದ್ಯ ಮಾರಾಟ ಕೂಡ ಜಾಸ್ತಿ ಆಗಿದೆ ಎಂದು ಇಂಟರ್‌ನ್ಯಾಷನಲ್ ಸ್ಪಿರಿಟ್ಸ್ ಆ್ಯಂಡ್ ವೈನ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಐಎಸ್‌ಡಬ್ಲ್ಯುಎಐ) ಹೇಳಿದೆ.

ಬ್ಯಾಂಕ್ ಖಾತೆಗೆ 4 ಜನ ನಾಮನಿರ್ದೇಶನ

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

ಹಳೆಯ ಮತ್ತು ಹೊಸ ವ್ಯವಸ್ಥೆಯ ನಡುವಿನ ಹೋಲಿಕೆ

ವಿವರಗಳು	ಹಳೆಯ ವ್ಯವಸ್ಥೆ	ಹೊಸ ವ್ಯವಸ್ಥೆ (2025ರ ನವೆಂಬರ್ 1ರಿಂದ)
ನಾಮನಿರ್ದೇಶಿತರ ಸಂಖ್ಯೆ	1-2 ಮಾತ್ರ	ಗರಿಷ್ಠ 4 ಜನ ನಾಮನಿರ್ದೇಶಿತರು
ನಾಮನಿರ್ದೇಶನ ಮಾದರಿ	ಏಕಮಾತ್ರ	ಶೇಕಡಾವಾರು ಅಥವಾ ಕ್ರಮಬದ್ಧ
ಸಂಪರ್ಕ ವಿವರಗಳು	ಐಚ್ಛಿಕ	ಮೊಬೈಲ್ ಮತ್ತು ಇ–ಮೇಲ್ ಕಡ್ಡಾಯ
ದಾವೆ ಪರಿಹಾರ	ಸಂಕೀರ್ಣ, ನಿಧಾನ	ವೇಗ ಮತ್ತು ಏಕರೂಪ
ವ್ಯಾಪ್ತಿ	ಠೇವಣಿ ಖಾತೆಗಳು ಮಾತ್ರ	ಠೇವಣಿ, ಲಾಕರ್, ಇತರ ಸುರಕ್ಷಾ ಖಾತೆಗಳು

ನಿಮ್ಮ ತಂದೆಯೋ, ತಾಯಿಯೋ, ತಾತನೋ, ಅಜ್ಜಿಯೋ ಕುಟುಂಬದವರಿಗೆ ತಿಳಿಸದೆ ಬ್ಯಾಂಕ್ ಖಾತೆ ಆರಂಭಿಸಿರುತ್ತಾರೆ. ಅದಕ್ಕೆ ನಾಮನಿರ್ದೇಶನ ಮಾಡಿರುವುದಿಲ್ಲ. ಕೊನೆಗೆ, ಅವರ ಕಾಲದ ನಂತರ ಆ ಬ್ಯಾಂಕ್ ಖಾತೆಯಲ್ಲಿರುವ ಹಣದ ಬಗ್ಗೆ ಕುಟುಂಬದವರಿಗೆ ಮಾಹಿತಿ ಇರುವುದಿಲ್ಲ. ಆ ಖಾತೆಯಲ್ಲಿನ ಹಣವನ್ನು ಯಾರಿಗೆ ನೀಡಬೇಕು ಎಂದು ಬ್ಯಾಂಕ್‌ನವರಿಗೂ ಸ್ಪಷ್ಟತೆ ಇರುವುದಿಲ್ಲ. ಹೌದು, 2025ರ ಜೂನ್‌ವರೆಗೆ ಲಭ್ಯವಿರುವ ಅಂಕಿ–ಅಂಶದ ಪ್ರಕಾರ ಹೀಗೆ, ವಾರಸುದಾರರಿಲ್ಲದ ಸುಮಾರು ₹67 ಸಾವಿರ ಕೋಟಿಯಷ್ಟು ಮೊತ್ತವು ಬ್ಯಾಂಕ್‌ಗಳಲ್ಲಿ ಇದೆ. ಈ ಪೈಕಿ ₹58,330.26 ಕೋಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ಇದ್ದರೆ, ಇನ್ನುಳಿದ ಸುಮಾರು ₹8,773.72 ಕೋಟಿ ಖಾಸಗಿ ಬ್ಯಾಂಕ್‌ಗಳಲ್ಲಿದೆ. ಇಂತಹ ಸಮಸ್ಯೆಗಳನ್ನು ಸರಿಪಡಿಸುವುದೂ ಸೇರಿದಂತೆ, ಬ್ಯಾಂಕಿಂಗ್ ವಲಯದಲ್ಲಿ ಗ್ರಾಹಕ ಸ್ನೇಹಿ ನಿಯಮಗಳನ್ನು ಜಾರಿಗೆ ತರಲು ಹಣಕಾಸು ಸಚಿವಾಲಯ ತೀರ್ಮಾನಿಸಿದೆ.

ನವೆಂಬರ್ 1ರಿಂದ ಬ್ಯಾಂಕಿಂಗ್ ನಿಯಮಗಳಲ್ಲಿ ಈ ಬದಲಾವಣೆಗಳು ಜಾರಿಗೆ ಬರುತ್ತಿವೆ. ಗ್ರಾಹಕರ ಬ್ಯಾಂಕ್ ಖಾತೆಗಳು, ಲಾಕರ್‌ಗಳು ಹಾಗೂ ಠೇವಣಿ ಸೇವೆಗಳನ್ನು ನಿರ್ವಹಿಸುವ ವಿಧಾನದಲ್ಲಿ ಸುಧಾರಣೆಗಳನ್ನು ತರಲಾಗುತ್ತಿದೆ. ಹಣದ ಹಕ್ಕು ಹಸ್ತಾಂತರ ಪ್ರಕ್ರಿಯೆಯನ್ನು ಸರಳಗೊಳಿಸುವುದು, ವಾದ-ವಿವಾದಗಳನ್ನು ತಗ್ಗಿಸುವುದು ಮತ್ತು ದಾವೆ ಪರಿಹಾರವನ್ನು ವೇಗವಾಗಿ ಮತ್ತು ಪಾರದರ್ಶಕವಾಗಿ ಮಾಡುವುದು ಇದರ ಉದ್ದೇಶ. ಬ್ಯಾಂಕಿಂಗ್ ಕಾನೂನು (ತಿದ್ದುಪಡಿ) ಕಾಯ್ದೆ–2025ರ ಅಡಿಯಲ್ಲಿ ಹಾಗೂ ಹಣಕಾಸು ಸಚಿವಾಲಯವು ಅಧಿಸೂಚನೆಯನ್ನು ಪ್ರಕಟಿಸುವುದರೊಂದಿಗೆ, ಈ ಬದಲಾವಣೆಗಳು ಅನುಷ್ಠಾನಗೊಳ್ಳಲಿವೆ. ಗ್ರಾಹಕರಿಗೆ ಈ ಬ್ಯಾಂಕಿಂಗ್ ಕಾಯ್ದೆಯಿಂದ ಸಿಗುವ ಅನುಕೂಲವೇನು ತಿಳಿಯೋಣ.

ಏನಿದು ಹೊಸ ನಿಯಮ?: ಕೇಂದ್ರ ಸರ್ಕಾರ ಬ್ಯಾಂಕಿಂಗ್ ಕಾನೂನು (ತಿದ್ದುಪಡಿ) ಕಾಯ್ದೆ–2025ರ 10, 11, 12 ಮತ್ತು 13ನೇ ಸೆಕ್ಷನ್ನುಗಳನ್ನು ಜಾರಿಗೆ ತಂದಿದೆ. ಈ ಸೆಕ್ಷನ್‌ಗಳು ಎಲ್ಲಾ ಬ್ಯಾಂಕ್‌ಗಳಿಗೆ ಅನ್ವಯವಾಗುವಂತೆ ನಾಮನಿರ್ದೇಶನ, ದಾವೆ ನಿವಾರಣೆ, ಭದ್ರತಾ ಮೊತ್ತ ಸಂಗ್ರಹ ಮತ್ತು ಲಾಕರ್ ಕಾರ್ಯಾಚರಣೆಗಳಿಗೆ ಸಂಬಂಧಿಸಿದ ಹೊಸ ನಿಯಮಗಳನ್ನು ಒಳಗೊಂಡಿವೆ.

ಹೊಸ ನಿಯಮಗಳ ಮುಖ್ಯ ಅಂಶಗಳು

ಪ್ರತಿ ಖಾತೆಗೆ ಗರಿಷ್ಠ ನಾಲ್ಕು ನಾಮನಿರ್ದೇಶನ: ಗ್ರಾಹಕರು ತಮ್ಮ ಉಳಿತಾಯ ಖಾತೆ, ನಿಶ್ಚಿತ ಠೇವಣಿ, ಲಾಕರ್ ಸೇರಿದಂತೆ ಎಲ್ಲಾ ಠೇವಣಿ ಸೇವೆಗಳಿಗೆ ನಾಲ್ಕು ಜನರನ್ನು ನಾಮನಿರ್ದೇಶನ (ನಾಮಿನಿ) ಮಾಡಬಹುದು. ನಾಮನಿರ್ದೇಶಿತರಿಗೆ ಹಂಚಿಕೆಯನ್ನು ಶೇಕಡಾವಾರು (ಉದಾ: ಪತ್ನಿಗೆ ಶೇ 50, ಮಗನಿಗೆ ಶೇ 30, ಸಹೋದರನಿಗೆ ಶೇ 20) ಆಧಾರದಲ್ಲಿ ಮಾಡಬಹುದು. ಅಥವಾ ಅನುವಂಶಿಕ ಕ್ರಮದಲ್ಲಿ ಕೂಡ ನೀಡಬಹುದು. ಅಂದರೆ ಮೊದಲ ನಾಮನಿರ್ದೇಶಿತ ಲಭ್ಯವಿಲ್ಲದಿದ್ದರೆ ಮುಂದಿನವರಿಗೆ ಹಕ್ಕು ಬರುತ್ತದೆ. ಈ ಬದಲಾವಣೆ ವಿವಾದಗಳನ್ನು ತಪ್ಪಿಸಲು ಮತ್ತು ಆಸ್ತಿ ವರ್ಗಾವಣೆ ವೇಗವಾಗಿ ನಡೆಯಲು ಸಹಕಾರಿಯಾಗುತ್ತದೆ.

ನಾಮನಿರ್ದೇಶಿತರ ಸಂಪರ್ಕ ವಿವರ ಕಡ್ಡಾಯ: ಪ್ರತಿ ನಾಮನಿರ್ದೇಶಿತರ ಮೊಬೈಲ್ ಸಂಖ್ಯೆ ಮತ್ತು ಇ-ಮೇಲ್ ಐ.ಡಿ ಈಗ ಬ್ಯಾಂಕ್ ದಾಖಲೆಗಳಲ್ಲಿ ಕಡ್ಡಾಯವಾಗಲಿದೆ. ಇದು ಖಾತೆದಾರರ ನಿಧನದ ನಂತರ ವೇಗವಾದ ಪರಿಶೀಲನೆ ಮತ್ತು ಸಂಪರ್ಕಕ್ಕೆ ನೆರವಾಗುತ್ತದೆ.

ಎಲ್ಲಾ ಬ್ಯಾಂಕ್‌ಗಳಿಗೆ ಏಕೀಕೃತ ನಿಯಮ: ಈ ನಿಯಮಗಳು ಸರ್ಕಾರಿ, ಖಾಸಗಿ, ಸಹಕಾರ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಿಗೂ ಅನ್ವಯಿಸುತ್ತವೆ. ಆರ್‌ಬಿಐ ಈಗ ಎಲ್ಲಾ ಬ್ಯಾಂಕ್‌ಗಳಲ್ಲಿ ಏಕರೂಪದ ದಾವೆ ಪ್ರಕ್ರಿಯೆಯನ್ನು ಜಾರಿಗೆ ತರುತ್ತಿದೆ.

ಸರಳೀಕೃತ ದಾವೆ ಪರಿಹಾರ ಪ್ರಕ್ರಿಯೆ: ನಾಮನಿರ್ದೇಶಿತರು ಅಥವಾ ಕಾನೂನಾತ್ಮಕ ವಾರಸುದಾರರು ನಿಧನದ ನಂತರ ಖಾತೆಯ ಮೊತ್ತ ಅಥವಾ ಲಾಕರ್‌ನ ವಸ್ತುಗಳನ್ನು ವೇಗವಾಗಿ ಪಡೆಯಬಹುದು. ಭಾರತೀಯ ರಿಸರ್ವ್ ಬ್ಯಾಂಕ್ ಶೀಘ್ರದಲ್ಲೇ ಬ್ಯಾಂಕಿಂಗ್ ಕಂಪನಿಗಳ (ನಾಮನಿರ್ದೇಶನ) ನಿಯಮಗಳು–2025ರ ಅಡಿಯಲ್ಲಿ ಪ್ರಕ್ರಿಯೆಯ ಮಾದರಿ ಪ್ರಕಟಿಸಲಿದೆ. ಹೊಸ ನಿಯಮವು ಠೇವಣಿ, ಲಾಕರ್‌ಗಳಿಗೆ ಅನ್ವಯವಾಗಲಿದ್ದು, ಎಲ್ಲದಕ್ಕೂ ಏಕರೂಪದ ಪ್ರಕ್ರಿಯೆ ಜಾರಿಗೆ ಬರಲಿದೆ.

ಏಕೆ ಈ ಬದಲಾವಣೆ ಮುಖ್ಯ?: ಈ ಬದಲಾವಣೆಯಿಂದ ಲಕ್ಷಾಂತರ ಭಾರತೀಯ ಕುಟುಂಬಗಳಿಗೆ ಹಣಕಾಸಿನ ಭದ್ರತೆ ಮತ್ತು ಮನಃಶಾಂತಿ ದೊರೆಯಲಿದೆ. ನಿಧನದ ನಂತರ ಬ್ಯಾಂಕ್‌ನಲ್ಲಿರುವ ಠೇವಣಿಗಳು ಕಾನೂನು ಪ್ರಕ್ರಿಯೆಯಲ್ಲಿ 'ಸಿಕ್ಕಿಹಾಕಿಕೊಳ್ಳುವ' ಅಪಾಯ ಕಡಿಮೆಯಾಗುತ್ತದೆ. ಸಣ್ಣದಾಗಿ ಕಾಣುವ ಈ ಬದಲಾವಣೆ, ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಪಾರದರ್ಶಕತೆ, ವಿಶ್ವಾಸ ಮತ್ತು ಸುಗಮ ಸೇವೆಗೆ ದೊಡ್ಡ ಹೆಜ್ಜೆಯಾಗಿದೆ.

ಚಟಿಕೆ ಸುದ್ದಿ

ಲೂವ್ರಾ ಮ್ಯೂಸಿಯಂ ದರೋಡೆ: ಇಬ್ಬರು ಶಂಕಿತರ ಬಂಧನ

ಪ್ಯಾರಿಸ್ (ರಾಯಿಟರ್ಸ್): ಇಲ್ಲಿನ ವಿಶ್ವವಿಖ್ಯಾತ ಲೂವ್ರಾ ಮ್ಯೂಸಿಯಂನಲ್ಲಿನ ಅತ್ಯಮೂಲ್ಯ ವಸ್ತುಗಳನ್ನು ದರೋಡೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿ ಇಬ್ಬರು ಶಂಕಿತರನ್ನು ಬಂಧಿಸಲಾಗಿದೆ.

ಶಂಕಿತರಲ್ಲಿ ಒಬ್ಬರು ದೇಶ ಬಿಟ್ಟು ಹೋಗುತ್ತಿದ್ದಾಗ, ವಿಮಾನ ನಿಲ್ದಾಣದಲ್ಲಿ ಅವರನ್ನು ಬಂಧಿಸಲಾಗಿದೆ ಎಂದು ಪ್ಯಾರಿಸ್ ಪ್ರಾಸಿಕ್ಯೂಟರ್ ತಿಳಿಸಿದ್ದಾರೆ.

ಲೂವ್ರಾ ಮ್ಯೂಸಿಯಂನ ಮಹಡಿಯ ಕಿಟಕಿಗಳನ್ನು ಒಡೆದು ಅಕ್ಟೋಬರ್ 19ರಂದು ಒಳನುಸುಳಿದ್ದ ದರೋಡೆಕೋರರು, ಮೂರನೇ ನೆಪೋಲಿಯನ್ ಪತ್ನಿಯ ಕಿರೀಟ, ಆಭರಣಗಳು ಸೇರಿದಂತೆ 102 ಮಿಲಿಯನ್ ಡಾಲರ್ (₹895 ಕೋಟಿ) ಮೌಲ್ಯದ ಎಂಟು ವಸ್ತುಗಳನ್ನು ದರೋಡೆ ಮಾಡಿದ್ದರು.

4.45 ಲಕ್ಷ ಪ್ರಯಾಣಿಕ ವಾಹನಗಳ ರಫ್ತು

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ ದೇಶದ ಪ್ರಯಾಣಿಕ ವಾಹನಗಳ ರಫ್ತು ಪ್ರಮಾಣ ಶೇ 18ರಷ್ಟು ಏರಿಕೆ ಆಗಿದೆ ಎಂದು ಭಾರತೀಯ ಆಟೊಮೊಬೈಲ್ ತಯಾರಕರ ಒಕ್ಕೂಟದ (ಎಸ್‌ಐಎಎಂ) ಅಂಕಿ– ಅಂಶಗಳು ಹೇಳಿವೆ.

ಮಾರುತಿ ಸುಜುಕಿ ಕಂಪನಿಯ 2 ಲಕ್ಷಕ್ಕೂ ಅಧಿಕ ವಾಹನಗಳು ರಫ್ತಾಗಿವೆ. ಕಳೆದ ಆರ್ಥಿಕ ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ 3,76,679 ವಾಹನಗಳು ರಫ್ತಾಗಿದ್ದವು. ಈ ವರ್ಷದ ಇದೇ ಅವಧಿಯಲ್ಲಿ 4,45,884 ವಾಹನಗಳು ರಫ್ತಾಗಿವೆ.

ಕಾರುಗಳ ರಫ್ತಿನಲ್ಲಿ ಶೇ 12ರಷ್ಟು ಏರಿಕೆಯಾಗಿದ್ದು, 2,29,281 ವಾಹನಗಳು ರಫ್ತಾಗಿವೆ. ಯುಟಿಲಿಟಿ ವಾಹನಗಳ ರಫ್ತು ಶೇ 26ರಷ್ಟು ಹೆಚ್ಚಾಗಿದ್ದು, 2,11,373 ವಾಹನಗಳು ರಫ್ತಾಗಿವೆ. 5,230 ವ್ಯಾನ್‌ಗಳು ರಫ್ತಾಗಿದ್ದು, ಕಳೆದ ಏಪ್ರಿಲ್–ಸೆಪ್ಟೆಂಬರ್ ಅವಧಿಗೆ ಹೋಲಿಸಿದರೆ ಶೇ 36.5ರಷ್ಟು ಏರಿಕೆ ಆಗಿದೆ.

ಮಾರುತಿ ಸುಜುಕಿ ಕಂಪನಿಯ ವಾಹನಗಳ ರಫ್ತು ಶೇ 40ರಷ್ಟು ಜಿಗಿತವಾಗಿದ್ದು, 2,05,763 ವಾಹನಗಳು ಮಾರಾಟವಾಗಿವೆ. ಕಳೆದ ವರ್ಷದ ಇದೇ ಅವಧಿಯಲ್ಲಿ 1,47,063 ವಾಹನಗಳು ಮಾರಾಟವಾಗಿದ್ದವು. ಹುಂಡೈ ಮೋಟರ್ ಇಂಡಿಯಾ 99,540 (ಶೇ 17), ನಿಸ್ಸಾನ್ ಮೋಟರ್ ಇಂಡಿಯಾ 37,605, ಫೋಕ್ಸ್‌ವ್ಯಾಗನ್ ಇಂಡಿಯಾ 28,011, ಟೊಯೋಟ ಕಿರ್ಲೋಸ್ಕರ್ ಮೋಟರ್ 18,880, ಕಿಯಾ ಇಂಡಿಯಾ 13,666 ಮತ್ತು ಹೋಂಡಾ ಕಾರ್ಸ್ ಇಂಡಿಯಾದ 13,243 ವಾಹನಗಳು ರಫ್ತಾಗಿವೆ ಎಂದು ತಿಳಿಸಿದೆ.

ಪ್ರಮುಖವಾಗಿ ಪಶ್ಚಿಮ ಏಷ್ಯಾ ಮತ್ತು ಲ್ಯಾಟಿನ್ ಅಮೆರಿಕ ಸೇರಿದಂತೆ ಜಾಗತಿಕ ಮಾರುಕಟ್ಟೆಯಲ್ಲಿ ಸ್ಥಿರವಾದ ಬೇಡಿಕೆಯಿಂದ ಪ್ರಯಾಣಿಕ ವಾಹನಗಳ ರಫ್ತು ಬೆಳವಣಿಗೆ ಕಂಡಿದೆ.

ಹೆಚ್ಚುವರಿ ಸುಂಕದಿಂದ ಅಮೆರಿಕಕ್ಕೆ ಸೆಪ್ಟೆಂಬರ್‌ನಲ್ಲಿ ರಫ್ತು ಕಡಿಮೆಯಾಗಿದೆ. ಕೊರಿಯಾ, ಯುಎಇ ಸೇರಿದಂತೆ 24 ರಾಷ್ಟ್ರಗಳಿಗೆ ದೇಶದ ರಫ್ತು ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಸದೃಢವಾಗಿದೆ ಎಂದು ತಿಳಿಸಿದೆ.

ಎಲ್‌ಐಸಿಯ ನಂತರದಲ್ಲಿ ಅಥೀನ್ ಇನ್ಶೂರೆನ್ಸ್‌ನಿಂದ ಎಂಐಎಎಲ್‌ನಲ್ಲಿ ಹೂಡಿಕೆ

ಅಮೆರಿಕದ ಕಂಪನಿಗಳಿಂದ 'ಅದಾನಿ'ಯಲ್ಲಿ ಹೂಡಿಕೆ

ನವದೆಹಲಿ (ಪಿಟಿಐ): ಅದಾನಿ ಸಮೂಹದ ಪ್ರಮುಖ ಕಂಪನಿಗಳಲ್ಲಿ ಜಾಗತಿಕ ಮಟ್ಟದ ಕೆಲವು ವಿಮಾ ಕಂಪನಿಗಳು ದೊಡ್ಡ ಮೊತ್ತ ಹೂಡಿಕೆ ಮಾಡಿವೆ ಎಂಬುದನ್ನು ಈಚಿನ ಕೆಲವು ಅಂಕಿ–ಅಂಶಗಳು ಹೇಳುತ್ತಿವೆ. ಅದಾನಿ ಸಮೂಹದಲ್ಲಿ ಎಲ್‌ಐಸಿ ಹೂಡಿಕೆಯು ವಿವಾದಕ್ಕೆ ತಿರುಗಿರುವ ಸಂದರ್ಭದಲ್ಲಿ ಈ ಹೂಡಿಕೆಗಳ ಕುರಿತ ಮಾಹಿತಿ ಮಹತ್ವ ಪಡೆದಿದೆ.

ಅದಾನಿ ಪೋರ್ಟ್ಸ್ ಆ್ಯಂಡ್ ಎಸ್‌ಇಜೆಡ್ ಕಂಪನಿಯಲ್ಲಿ ಎಲ್‌ಐಸಿಯು ಈ ವರ್ಷದ ಜೂನ್‌ನಲ್ಲಿ ₹5 ಸಾವಿರ

ಕೋಟಿ ಹೂಡಿಕೆ ಮಾಡಿದ ನಂತರದಲ್ಲಿ ಅದಾನಿ ಸಮೂಹದ ಮುಂಬೈ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್‌ನ (ಎಂಐಎಎಲ್) ಸಾಲಪತ್ರಗಳಲ್ಲಿ ಅಮೆರಿಕ ಮೂಲದ ಅಥೀನ್ ಇನ್ಶೂರೆನ್ಸ್ ಕಂಪನಿಯ ನೇತೃತ್ವದಲ್ಲಿ ಜಾಗತಿಕ ಮಟ್ಟದ ವಿವಿಧ ವಿಮಾ ಕಂಪನಿಗಳು ₹6,650 ಕೋಟಿ ತೊಡಗಿಸಿವೆ.

ಡಿಬಿಎಸ್ ಬ್ಯಾಂಕ್, ಡಿ.ಜೆಡ್. ಬ್ಯಾಂಕ್, ರಾಬೊಬ್ಯಾಂಕ್ ಸೇರಿ ಜಾಗತಿಕ ಮಟ್ಟದ ಕೆಲವು ಬ್ಯಾಂಕ್‌ಗಳಿಂದ ಅದಾನಿ ಗ್ರೀನ್ ಎನರ್ಜಿ ಕಂಪನಿಯು ₹2,195 ಕೋಟಿ ಸಂಗ್ರಹಿಸಿದೆ.

ಎಸ್‌ ಆ್ಯಂಡ್ ಪಿ ಗ್ಲೋಬಲ್ ರೇಟಿಂಗ್ಸ್ ಸಂಸ್ಥೆ ಆಗಸ್ಟ್‌ನಲ್ಲಿ ಸಿದ್ಧಪಡಿಸಿರುವ ವರದಿಯೊಂದರ ಪ್ರಕಾರ ಈ ವರ್ಷದ ಮೊದಲಾರ್ಧದಲ್ಲಿ ಅದಾನಿ ಪೋರ್ಟ್ಸ್ ಆ್ಯಂಡ್ ಎಸ್‌ಇಜೆಡ್, ಅದಾನಿ ಗ್ರೀನ್ ಎನರ್ಜಿ, ಅದಾನಿ ಎಂಟರ್‌ಪ್ರೈಸಸ್, ಅದಾನಿ ಎನರ್ಜಿ ಸಲ್ಯೂಷನ್ಸ್ ಕಂಪನಿಗಳು ಒಟ್ಟಾಗಿ ₹87 ಸಾವಿರ ಕೋಟಿಗಿಂತ ಹೆಚ್ಚಿನ ಮೊತ್ತದ ಸಾಲ ಸೌಲಭ್ಯಕ್ಕೆ ಸಹಿ ಹಾಕಿವೆ.

ಅದಾನಿ ಸಮೂಹದಲ್ಲಿ ಹೂಡಿಕೆ ಮಾಡಲು ಜಾಗತಿಕ ಮಟ್ಟದ ಹೂಡಿಕೆದಾರರು ಹಿಂದೇಟು ಹಾಕುತ್ತಿದ್ದ ಸಂದರ್ಭದಲ್ಲಿ ಎಲ್‌ಐಸಿಯು ಸಮೂಹದಲ್ಲಿ ಹೂಡಿಕೆ ಮಾಡುವಂತೆ ಸರ್ಕಾರಿ ಅಧಿಕಾರಿಗಳು ಪ್ರಭಾವ ಬೀರಿದ್ದರು ಎಂದು ಅಮೆರಿಕದ 'ದಿ ವಾಷಿಂಗ್ಟನ್ ಪೋಸ್ಟ್'ನ ವರದಿಯೊಂದು ಆರೋಪಿಸಿದೆ. ಆದರೆ, ಎಲ್‌ಐಸಿಯ ಹೂಡಿಕೆ ನಿರ್ಧಾರಗಳಲ್ಲಿ ಕೇಂದ್ರ ಸರ್ಕಾರವು ಯಾವತ್ತೂ ಮಧ್ಯಪ್ರವೇಶ ಮಾಡಿಲ್ಲ ಎಂದು ಎಲ್‌ಐಸಿ ಮಾಜಿ ಅಧ್ಯಕ್ಷ ಸಿದ್ಧಾರ್ಥ ಮೊಹಂತಿ ಹೇಳಿದ್ದಾರೆ.

'ವಾಷಿಂಗ್ಟನ್ ಪೋಸ್ಟ್ ಪತ್ರಿಕೆಯು ಹಣಕಾಸಿನ ವಿಚಾರದ ಬಗ್ಗೆ ಬರೆಯುವುದು ಜೆಫ್ ಬೆಜಾಸ್ ಮತ್ತು ನಾನು ತಲೆತುಂಬ ಕೂದಲು ಹೊಂದುವುದು ಹೇಗೆಂಬುದರ ಬಗ್ಗೆ ಬರೆಯುವಂತೆ ಇದೆ' ಎಂದು ಅದಾನಿ ಸಮೂಹದ ಮುಖ್ಯ ಹಣಕಾಸು ಅಧಿಕಾರಿ ಜುಗೇಶಿಂದರ್ ಸಿಂಗ್ ವ್ಯಂಗ್ಯವಾಡಿದ್ದಾರೆ. ಸಿಂಗ್ ಮತ್ತು ಬೆಜಾಸ್ ಅವರು ಬೊಕ್ಕತಲೆಯವರು.

'ಬ್ಯೂರ್‌ವೆಸ್ಟ್‌ನಿಕ್' ಕ್ಷಿಪಣಿ ಪರೀಕ್ಷೆ ಯಶಸ್ವಿ: ಪುಟಿನ್

ಮಾಸ್ಕೊ (ಪಿಟಿಐ): ಅಣ್ವಸ್ತ್ರ ಸಜ್ಜಿತ ಶಕ್ತಿಶಾಲಿ 'ಬ್ಯೂರ್‌ವೆಸ್ಟ್‌ನಿಕ್' ಕ್ರೂಸ್ ಕ್ಷಿಪಣಿ ಪರೀಕ್ಷೆಯನ್ನು ಯಶಸ್ವಿಯಾಗಿ ನೆರವೇರಿಸಲಾಗಿದೆ ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಹೇಳಿದ್ದಾರೆ.

ಈ ಕ್ಷಿಪಣಿ ನಿಯೋಜನೆಗೆ ಅಗತ್ಯವಿರುವ ಮೂಲಸೌಕರ್ಯ ಅಭಿವೃದ್ಧಿಪಡಿಸುವಂತೆ ಸಶಸ್ತ್ರ ಪಡೆಗಳಿಗೆ ಅವರು ಆದೇಶಿಸಿದ್ದಾರೆ.

ಈ ಕ್ಷಿಪಣಿ ಕಾರ್ಯಾಚರಣೆ ವ್ಯಾಪ್ತಿಗೆ ಮಿತಿ ಇಲ್ಲ. ಇದು ಅಣ್ವಸ್ತ್ರ ಸಿಡಿತಲೆಗಳನ್ನು ಹೊತ್ತೊಯ್ಯುವುದು ಮಾತ್ರವಲ್ಲದೇ, ಅಣುಶಕ್ತಿಯಿಂದಲೇ ಕಾರ್ಯ ನಿರ್ವಹಿಸುವುದು ವಿಶೇಷ.

ಕ್ಷಿಪಣಿ ಪರೀಕ್ಷೆ ಬಳಿಕ ಸೇನಾ ಸಿಬ್ಬಂದಿ ಮುಖ್ಯಸ್ಥ ಹಾಗೂ ಸೇನೆಯ ಇತರ ಅಧಿಕಾರಿಗಳ ಜೊತೆ ವರ್ಚುವಲ್ ಆಗಿ ಪುಟಿನ್ ಸಭೆ ನಡೆಸಿದರು.

"ಬ್ಯೂರ್‌ವೆಸ್ಟ್‌ನಿಕ್' ಬಹಳ ಶಕ್ತಿಶಾಲಿ ಕ್ರೂಸ್ ಕ್ಷಿಪಣಿಯಾಗಿದ್ದು, ಪರೀಕ್ಷಾರ್ಥ ಪ್ರಯೋಗಗಳ ವೇಳೆ ನಿರಂತರವಾಗಿ 15 ಗಂಟೆ ಹಾರಾಟ ನಡೆಸಿ ತನ್ನ ಸಾಮರ್ಥ್ಯ ಸಾಬೀತುಪಡಿಸಿದೆ. 14 ಸಾವಿರ ಕಿ.ಮೀ.ನಷ್ಟು ದೂರ ಕ್ರಮಿಸಿದೆ' ಎಂದು ಪುಟಿನ್ ಹೇಳಿದರು.

ಭೇಟಿ: ಇದಕ್ಕೂ ಮುನ್ನ, ಉಕ್ರೇನ್ ವಿರುದ್ಧ ನಡೆಯುತ್ತಿರುವ ಮಿಲಿಟರಿ ಕಾರ್ಯಾಚರಣೆಗಳ ಮೇಲ್ವಿಚಾರಣೆ ನಡೆಸುತ್ತಿರುವ ಚೀಫ್ ಜನರಲ್ ಸ್ಟಾಫ್ ಜನರಲ್ ವಲೇರಿ ಗೆರಾಸಿಮೋವ್ ಅವರನ್ನು ಭೇಟಿ ಮಾಡಿದ ಪುಟಿನ್, ಕಾರ್ಯಾಚರಣೆ ಕುರಿತು ಚರ್ಚಿಸಿದರು. 'ಉಕ್ರೇನ್‌ನ 10 ಸಾವಿರಕ್ಕೂ ಅಧಿಕ ಸೈನಿಕರನ್ನು ನಮ್ಮ ಪಡೆಗಳು ಸುತ್ತುವರಿದಿವೆ' ಎಂದು ಗೆರಾಸಿಮೋವ್ ಈ ವೇಳೆ ವಿವರಿಸಿದರು.

ಮಾರ್ಚ್ ವೇಳೆಗೆ 3,500 ಹುದ್ದೆ ಭರ್ತಿ: ಎಸ್‌ಬಿಐ

ನವದೆಹಲಿ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಮುಂದಿನ ಐದು ತಿಂಗಳೊಳಗೆ ಸುಮಾರು 3,500 ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಯೋಜಿಸಿದೆ.

ಜೂನ್ ತಿಂಗಳಿನಲ್ಲಿ 505 ಪ್ರೊಬೇಷನರಿ ಅಧಿಕಾರಿಗಳನ್ನು ನೇಮಕಾತಿ ಮಾಡಿಕೊಳ್ಳಲಾಗಿತ್ತು. ಈಗ ಇಷ್ಟೇ ಸಂಖ್ಯೆಯ ಹುದ್ದೆಗಳಿಗೆ ಮತ್ತೆ ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದ್ದು, ಅರ್ಜಿಗಳನ್ನು ಸ್ವೀಕರಿಸಲಾಗಿದೆ.

ದೇಶದಾದ್ಯಂತ ಬ್ಯಾಂಕ್‌ನ ಕಾರ್ಯಾಚರಣೆಯನ್ನು ಹೆಚ್ಚಿಸಲು ಮತ್ತು ಗ್ರಾಹಕರಿಗೆ ಉತ್ತಮ ಸೇವೆ ನೀಡಲು ಈ ನೇಮಕಾತಿ ಮಾಡಿ ಕೊಳ್ಳ-

ಲಾಗುತ್ತಿದೆ ಎಂದು ಬ್ಯಾಂಕ್‌ನ ಉಪ ವ್ಯವಸ್ಥಾಪಕ ನಿರ್ದೇಶಕ (ಮಾನವ ಸಂಪನ್ಮೂಲ ವಿಭಾಗ) ಮತ್ತು ಮುಖ್ಯ ಅಭಿವೃದ್ಧಿ ಅಧಿಕಾರಿ (ಸಿಡಿಒ) ಕಿಶೋರ್ ಕುಮಾರ್ ಪೋಲುದಾಸು ಹೇಳಿದ್ದಾರೆ.

ಈಗಾಗಲೇ 541 ಪ್ರೊಬೇಷನರಿ ಅಧಿಕಾರಿಗಳ ಹುದ್ದೆಗೆ ಅರ್ಜಿ ಸ್ವೀಕರಿಸಲಾಗಿದೆ. ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ.

ಇದೀಗ ಹೆಚ್ಚುವರಿಯಾಗಿ ವಲಯ ಆಧಾರಿತ ಅಧಿಕಾರಿಗಳ ಅಂದಾಜು 3 ಸಾವಿರ ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲು ನಿರ್ಧರಿಸಿದ್ದು, ಪ್ರಸಕ್ತ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಈ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದು ಹೇಳಿದ್ದಾರೆ.

ಎಸ್‌ಬಿಐ ಅಧ್ಯಕ್ಷ ಸಿ.ಎಸ್. ಸೆಟ್ಟಿ ಅವರು ಬ್ಯಾಂಕ್ 18 ಸಾವಿರ ಹುದ್ದೆಗಳನ್ನು ಭರ್ತಿ ಮಾಡಲಿದೆ ಎಂದು ಈ ವರ್ಷದ ಆರಂಭದಲ್ಲಿ ಹೇಳಿದ್ದರು. ಬಳಿಕ 13,500 ಕಿರಿಯ ಸಹಾಯಕ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿತ್ತು. ಇದೀಗ ಪ್ರೊಬೇಷನರಿ ಅಧಿಕಾರಿಗಳು ಮತ್ತು ಇತರೆ ಅಧಿಕಾರಿಗಳನ್ನು ನೇಮಿಸಿಕೊಳ್ಳಲು ಮುಂದಾಗಿದೆ.

ಭಾರತ ಜತೆಗಿನ ಸಂಬಂಧಕ್ಕೆ ಧಕ್ಕೆ ತಂದು ಪಾಕ್ ಸ್ನೇಹ ಇಲ್ಲ: ರುಬಿಯೊ

ವಾಷಿಂಗ್ಟನ್ (ಪಿಟಿಐ): 'ಪಾಕಿಸ್ತಾನ ಜೊತೆಗಿನ ಪಾಲುದಾರಿಕೆಯನ್ನು ಮತ್ತಷ್ಟು ಹೆಚ್ಚಿಸಲು ಅಮೆರಿಕ ಬಯಸುತ್ತದೆ. ಆದರೆ, ಭಾರತದೊಂದಿಗೆ ಹೊಂದಿರುವ ಐತಿಹಾಸಿಕ ಮತ್ತು ಮಹತ್ವದ ಸಂಬಂಧಕ್ಕೆ ಧಕ್ಕೆ ತಂದುಕೊಂಡು ಇಂತಹ ಬಾಂಧವ್ಯಕ್ಕೆ ನಾವು ಮುಂದಾಗುವುದಿಲ್ಲ' ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಹೇಳಿದ್ದಾರೆ.

ಮಾರ್ಕೊ ರುಬಿಯೊ

ಆಸಿಯಾನ್ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ತೆರಳುವ ಮುನ್ನ, ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಈ ವಿಚಾರದಲ್ಲಿ ಭಾರತದ ಆತಂಕ ಸಹಜವಾದುದು. ಆದರೆ, ಅಮೆರಿಕ ಬೇರೆ ಬೇರೆ ದೇಶಗಳೊಂದಿಗೆ ದ್ವಿಪಕ್ಷೀಯ ಸಂಬಂಧ ಹೊಂದಿರಬೇಕಾಗುತ್ತದೆ ಎಂಬುದನ್ನು ಭಾರತ ಅರ್ಥ ಮಾಡಿಕೊಳ್ಳಬೇಕು. ಅದೇ ರೀತಿ ಪಾಕಿಸ್ತಾನದೊಂದಿಗಿನ ರಕ್ಷಣಾ ಸಂಬಂಧ ವೃದ್ಧಿಗೆ ನಾವು ಅವಕಾಶ ಹೊಂದಿದ್ದೇವೆ' ಎಂದು ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ರಾಜತಾಂತ್ರಿಕತೆ ಹಾಗೂ ಅದಕ್ಕೆ ಸಂಬಂಧಿಸಿದಂತಹ ವಿಚಾರಗಳಲ್ಲಿ ಭಾರತೀಯರು ಪ್ರಬುದ್ಧರು ಎಂಬುದು ನನ್ನ ಭಾವನೆ. ನಾವು ಸಂಬಂಧ ಹೊಂದಿರದಂತಹ ದೇಶಗಳೊಂದಿಗೆ ಭಾರತ ದ್ವಿಪಕ್ಷೀಯ ಬಾಂಧವ್ಯ ಹೊಂದಿದೆ. ಹೀಗಾಗಿ ಇವೆಲ್ಲಾ ತರ್ಕಬದ್ಧ ಹಾಗೂ ಪ್ರಬುದ್ಧತೆಯಿಂದ ಕೂಡಿದ ವಿದೇಶಾಂಗ ನೀತಿಯ ಭಾಗ' ಎಂದೂ ರುಬಿಯೊ ಹೇಳಿದರು.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು: 100 ಕ್ಕೆ ₹585; 12 ಕ್ಕೆ ₹80
ಮೈಸೂರು: 100 ಕ್ಕೆ ₹585

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹265-619
ದ್ವಿತಳಿ (ಬಿ.ವಿ) ₹385-796

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಕಂಪನಿಗಳಿಗೆ ಬೇಕಾಗಿದ್ದಾರೆ. ಟಯೋಟಾ, TVS, ಹಿಮಾಲಯಾ, ಬ್ರಿಟಾನಿಯಾಗಳಿಗೆ SSLC, PUC, Degree, ITI, Diplomaದವರು. 18,000/- ದಿಂದ 86,000/- .(ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035075571

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ. 'ಕೊರಿಯರ್ ಸೌಲಭ್ಯವಿದೆ. 8884777503, 8884777502.

ಪ್ರವಾಸ

Travel

ಹೆಸರಾಂತ ವಿಷ್ಣನ್ ಟ್ರಾವೆಲ್ಸ್ ಏಜೆನ್ಸಿ ಇಂದ ವಿಮಾನ/ಎಸಿ ಬಸ್ಸಿನಲ್ಲಿ 05.11.2025 ದ್ವಾರಕಾ ಸೋಮನಾಥ್ ನಾಗೇಶ್ವರ ಮಹಾಕಾಳೇಶ್ವರ ಓಂಕಾರೇಶ್ವರ, 14.11.2025 ಕಾಶಿ, ಅಯೋಧ್ಯ ಅಲಹಾಬಾದ್ ಬುದ್ಧಗಯಾ, 22.12.2025 ರಾಮೇಶ್ವರ ಮಧುರೈ, ಕನ್ಯಾಕುಮಾರಿ ನವಗ್ರಹಗಳು, 25.12.2025 ಶಿರಡಿ ಪಂಡರಾಪುರದ ತ್ರ್ಯಂಬಕೇಶ್ವರ ಕೊಲ್ಹಾಪುರ. 26574131 8431888138 8317446683 9686708171

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

'ಭಾರತದ ಕಾಫಿ ವಿಶ್ವ ಪ್ರಸಿದ್ಧ'

ಮನದ ಮಾತಿನಲ್ಲಿ ಕರ್ನಾಟಕದ ಕಾಫಿ ಉಲ್ಲೇಖಿಸಿದ ಪ್ರಧಾನಿ

ನವದೆಹಲಿ (ಪಿಟಿಐ): 'ಕರ್ನಾಟಕ ಸೇರಿದಂತೆ ದೇಶದ ವಿವಿಧ ರಾಜ್ಯಗಳಲ್ಲಿ ಬೆಳೆಯುವ ಕಾಫಿ ವಿಶ್ವದಲ್ಲಿ ಪ್ರಸಿದ್ಧವಾಗುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಹೇಳಿದ್ದಾರೆ.

ಮನದ ಮಾತು

ಮನದ ಮಾತು 127ನೇ ಆವೃತ್ತಿಯಲ್ಲಿ ಮಾತನಾಡಿದ ಅವರು, 'ಕರ್ನಾಟಕ, ತಮಿಳುನಾಡು ಮತ್ತು ಕೇರಳದಲ್ಲಿ ಬೆಳೆಯುತ್ತಿರುವ ಕಾಫಿ ಹೆಚ್ಚು ಜನಪ್ರಿಯತೆ ಪಡೆಯುತ್ತಿದೆ. ಇದು ಭಾರತದ ಕಾಫಿಯನ್ನು ಜಗತ್ತಿನಾದ್ಯಂತ ಗುರುತಿಸುವಂತೆ ಮಾಡಿದೆ. ಇತ್ತೀಚೆಗೆ ಈಶಾನ್ಯ ಭಾರತದಲ್ಲೂ ಕಾಫಿ ಬೆಳೆಯಲಾಗುತ್ತಿದೆ' ಎಂದು ಹೇಳಿದ್ದಾರೆ.

ಕರ್ನಾಟಕದ ಚಿಕ್ಕಮಗಳೂರು, ಕೊಡಗು ಮತ್ತು ಹಾಸನ, ತಮಿಳುನಾಡಿನ ಪುಲ್ನಿ, ಶೆವರಾಯ್, ನೀಲಗಿರಿ ಮತ್ತು ಅಣ್ಣಾಮಲೈ, ಕೇರಳದ ವಯನಾಡ್, ತಿರುವಾಂಕೂರು ಮತ್ತು ಮಲಬಾರ್‌ನಲ್ಲಿ ಕಾಫಿ ಬೆಳೆಯಲಾಗುತ್ತಿದೆ ಎಂದಿದ್ದಾರೆ.

ಒಡಿಶಾದ ಕೊರಾ ಪುಟ್ ಕಾಫಿಯೂ ಜನಪ್ರಿಯತೆ ಪಡೆಯುತ್ತಿದೆ. ದೇಶದ ವಿವಿಧೆಡೆ ಬೆಳೆಯುವ ಕಾಫಿಯ ವೈವಿಧ್ಯ ನಿಜಕ್ಕೂ ಗಮನಾರ್ಹ ಎಂದು ಅವರು ಹೇಳಿದ್ದಾರೆ.

ಕೆಲವರು, ಕಾಫಿ ಕೃಷಿ ಮೇಲಿನ ಒಲವಿನ ಕಾರಣದಿಂದಾಗಿ ಖಾಸಗಿ ಕಂಪನಿಗಳಲ್ಲಿನ ತಮ್ಮ ಲಾಭದಾಯಕ ಉದ್ಯೋಗ ತೊರೆದು ಕಾಫಿ ಕೃಷಿಗೆ ಮುಂದಾಗಿ, ಯಶಸ್ವಿಯಾಗುತ್ತಿದ್ದಾರೆ. ಕಾಫಿ ಬೆಳೆಯಿಂದ ಹಲವಾರು ಮಹಿಳೆಯರ ಜೀವನವೂ ಹಸನಾಗಿದೆ ಎಂದು ಅವರು ಹೇಳಿದ್ದಾರೆ.

ದೇಶದ ಒಟ್ಟು ಕಾಫಿ ಉತ್ಪಾದನೆಯಲ್ಲಿ ಕರ್ನಾಟಕದ ಪಾಲು ಶೇ 70ರಷ್ಟಿದೆ. ನಂತರದ ಸ್ಥಾನದಲ್ಲಿ ಕೇರಳ ಮತ್ತು ತಮಿಳುನಾಡು ಇವೆ.

ಕೆರೆಗಳ ಪುನರುಜ್ಜೀವನ ಬೆಂಗಳೂರಿನ ಟೆಕಿಗೆ ಮೆಚ್ಚುಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೆರೆಗಳ ಪುನರುಜ್ಜೀವನಗೊಳಿಸುವ ಕೆಲಸ ಮಾಡುತ್ತಿರುವ ಬೆಂಗಳೂರಿನ ಐಟಿ ಉದ್ಯೋಗಿ ಕಪಿಲ್ ಶರ್ಮಾ ಅವರ ಕುರಿತು ಪ್ರಧಾನಿ ಮೋದಿ ಅವರು ಶ್ಲಾಘಿಸಿದ್ದಾರೆ. ಅವರ 'ಸೇಟ್ರೀಸ್' ಎಂಬ ಸಂಸ್ಥೆಯ ಬಗ್ಗೆಯೂ ಹೊಗಳಿಕೆಯ ಮಾತುಗಳನ್ನಾಡಿದ್ದಾರೆ.

ಕಪಿಲ್ ಶರ್ಮಾ

'ಎಂಜಿನಿಯರ್ ಕಪಿಲ್ ಶರ್ಮಾ ಅವರ ಬೆಂಗಳೂರಿನಲ್ಲಿ ಗಮನಾರ್ಹವಾಗಿರುವ ಕಾರ್ಯ ಸಾಧಿಸಿದ್ದಾರೆ. ಬೆಂಗಳೂರನ್ನು ಕೆರೆಗಳ ನಗರ ಎನ್ನಲಾಗುತ್ತದೆ. ಇಲ್ಲಿನ ಕೆರೆಗಳಿಗೆ ಮರುಹುಟ್ಟು ನೀಡುವ ಅಭಿಯಾನವನ್ನೇ ಕಪಿಲ್ ಅವರು ಆರಂಭಿಸಿದ್ದಾರೆ. ಕಪಿಲ್ ಅವರ ತಂಡವು ನಗರದ 40 ಬಾವಿಗಳು, 6 ಕೆರೆಗಳನ್ನು ಪುನರುಜ್ಜೀವನಗೊಳಿಸಿದ್ದಾರೆ. ಇದರಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ಈ ಅಭಿಯಾನದಲ್ಲಿ ಉದ್ಯಮಿಗಳನ್ನೂ ಸ್ಥಳೀಯರನ್ನೂ ಸೇರಿಸಿಕೊಂಡಿದ್ದಾರೆ' ಎಂದು ಪ್ರಧಾನಿ ಮೋದಿ ಹೇಳಿದರು.

ಶರ್ಮಾ ಅವರ 'ಸೇಟ್ರೀಸ್' ಎಂಬ ಸರ್ಕಾರೇತರ ಸಂಸ್ಥೆಯ ಕುರಿತೂ ಪ್ರಧಾನಿ ಅವರು ಪ್ರಸ್ತಾಪಿಸಿದರು. ತಾನು 50 ಲಕ್ಷ ಸಸಿಗಳನ್ನು ನೆಟ್ಟಿರುವುದಾಗಿ ಮತ್ತು ದೇಶದಾದ್ಯಂತ ಸುಮಾರು 50 ಕೆರೆಗಳನ್ನು ಪುನರುಜ್ಜೀವನಗೊಳಿಸಿರುವುದಾಗಿ ಈ ಸಂಸ್ಥೆ ಹೇಳಿಕೊಂಡಿದೆ.

ವಂದೇ ಮಾತರಂ ಗೀತೆಗೆ 150 ವರ್ಷ

- ಬಂಕಿಮ್ ಚಂದ್ರ ಚಟ್ಟೋಪಾಧ್ಯಾಯ ಅವರು ಬರೆದ 'ವಂದೇ ಮಾತರಂ' ಗೀತೆಗೆ 150 ವರ್ಷ ತುಂಬುತ್ತಿದೆ. ಈ ಗೀತೆಯು ದೇಶವನ್ನು ಅತ್ಯದ್ಭುತವಾಗಿ ಚಿತ್ರಿಸಿದೆ. ಈ ಗೀತೆಯ ಮೌಲ್ಯಗಳನ್ನು ನಾವು ಮುಂದುವರಿಸಿಕೊಂಡು ಹೋಗಬೇಕಾಗಿದೆ. ಇದಕ್ಕಾಗಿ ದೇಶದಾದ್ಯಂತ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ಪ್ರಧಾನಿ ಹೇಳಿದ್ದಾರೆ.
- ಬಿಎಸ್‌ಎಫ್ ಮತ್ತು ಸಿಆರ್‌ಪಿಎಫ್‌ನಲ್ಲಿ ಮುಧೋಳ ತಳಿಯ ಶ್ವಾನಗಳು ಹೆಚ್ಚಿನ ಸಂಖ್ಯೆಯಲ್ಲಿ ಬಳಕೆಯಾಗುತ್ತಿರುವುದರ ಬಗ್ಗೆ ಪ್ರಧಾನಿ ಸಂತಸ ವ್ಯಕ್ತಪಡಿಸಿದ್ದಾರೆ.
- ಆಪರೇಷನ್ ಸಿಂಧೂರದ ಯಶಸ್ಸು ಹಾಗೂ ನಕ್ಸಲರ ಭಯ ಕಡಿಮೆಯಾಗಿರುವುದರಿಂದ ಈ ಬಾರಿ ದೇಶದಲ್ಲಿ ಜನರು ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದಾರೆ ಎಂದು ಪ್ರಧಾನಿ ಹೇಳಿದ್ದಾರೆ.
- ನಮ್ಮ ಬುಡಕಟ್ಟು ಸಮುದಾಯಗಳಲ್ಲಿ ಭಗವಾನ್ ಬಿರ್ಸಾ ಮುಂಡಾ ಮತ್ತು ಕೋಮರಾಮ್ ಭೀಮ್ ಅವರಂತೆಯೇ ಹಲವಾರು ಶ್ರೇಷ್ಠ ಸಾಧಕರು ಆಗಿ ಹೋಗಿದ್ದಾರೆ. ಈ ಎಲ್ಲ ಬಗ್ಗೆಯೂ ನೀವು ಖಂಡಿತವಾಗಿಯೂ ಓದಲೇಬೇಕು ಎಂದು ನಾನು ಒತ್ತಾಯಿಸುತ್ತೇನೆ ಎಂದು ಪ್ರಧಾನಿ ಹೇಳಿದ್ದಾರೆ.

ಬಿಹಾರ: ಯಾವ ಪಕ್ಷದತ್ತ ಯಾರ ಒಲವು

ಪ್ರಜಾವಾಣಿ ವಾರ್ತೆ



ನವದೆಹಲಿ: ಲಾಲೂ ಪ್ರಸಾದ್ ಅವರ ಆರ್‌ಜೆಡಿಗೆ ಮುಸ್ಲಿಂ–ಯಾದವರು (ಶೇ 32) ಮತ ಬ್ಯಾಂಕ್. ವಿಕಾಸಶೀಲ್ ಇನ್ಸಾನ್ ಪಕ್ಷದ (ವಿಐಪಿ) ಮುಖ್ಯಸ್ಥ ಮುಕೇಶ್ ಸಹಾನಿ ಅವರನ್ನು ಇಂಡಿಯಾ ಮೈತ್ರಿಕೂಟದ ಉಪ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಬಿಂಬಿಸಲು ಒಪ್ಪುವ ಮೂಲಕ ತನ್ನ ಮತ ಬ್ಯಾಂಕ್ ನೆಲೆ ವಿಸ್ತರಿಸಲು ಮತ್ತು ಬಹುಜನ (ದಲಿತರು), ಆದಿವಾಸಿ (ಬುಡಕಟ್ಟು ಜನರು) ಮತ್ತು ಪಿಚ್ಛಾದಂತಹ (ಹಿಂದುಳಿದ, ವಿಶೇಷವಾಗಿ ಅತ್ಯಂತ ಹಿಂದುಳಿದ ವರ್ಗಗಳು) ಗುಂಪುಗಳನ್ನು ತಲುಪುವ ಪ್ರಯತ್ನ ನಡೆಸಿದೆ. ಅಧಿಕಾರದ ಚುಕ್ಕಾಣಿ ಹಿಡಿಯಲು ಇಂಡಿಯಾ ಕೂಟಕ್ಕೆ ನೆಲೆ ವಿಸ್ತರಿಸುವುದು ಅನಿವಾರ್ಯ.

ಎನ್‌ಡಿಎ: ಎನ್‌ಡಿಎ ಮೈತ್ರಿಕೂಟದ ಪ್ರಮುಖ ಪಕ್ಷವಾಗಿರುವ ಬಿಜೆಪಿ ರಾಜ್ಯದಲ್ಲಿ ಈವರೆಗೆ ಸ್ವತಂತ್ರವಾಗಿ ಅಧಿಕಾರದ ಚುಕ್ಕಾಣಿ ಹಿಡಿದಿಲ್ಲ. ಮಿತ್ರಪಕ್ಷಗಳ ಆಸರೆಯಿಂದಲೇ ಅಧಿಕಾರದ ಸುಖ ಅನುಭವಿಸಿದೆ. 20 ವರ್ಷಗಳಿಂದ ರಾಜ್ಯದ ಮುಖ್ಯಮಂತ್ರಿ ಆಗಿರುವ ನಿತೀಶ್ ಕುಮಾರ್ ಅವರಿಗೆ ಅತ್ಯಂತ ಹಿಂದುಳಿದ ವರ್ಗ (ಇಬಿಸಿ) ಹಾಗೂ ಮಹಿಳೆಯರೇ ಪ್ರಮುಖ ಮತ ಬ್ಯಾಂಕ್. ಒಬಿಸಿ ಪಟ್ಟಿಯಲ್ಲಿರುವ ಶೇ 13ರಷ್ಟಿರುವ ಯಾದವೇತರ ಜಾತಿಗಳು (ಕುರ್ಮಿ, ಬನಿಯಾ, ಕುಶ್ವಾಹ) ಜೆಡಿಯು ಜತೆಗೆ ಇವೆ. ಬಿಜೆಪಿಯು ಪ್ರಬಲ ಜಾತಿಗಳ ಮತ ನೆಚ್ಚಿಕೊಂಡಿದೆ. ಚಿರಾಗ್ ಪಾಸ್ವಾನ್ ಹಾಗೂ ಜಿತನ್ ರಾಮ್ ಮಾಂಝಿ ಮೂಲಕ ಮೈತ್ರಿಕೂಟವು ದಲಿತರ ಮತಗಳನ್ನು ಸೆಳೆಯುತ್ತಿದೆ.

ಬಿಹಾರದ ಜಾತಿ ರಾಜಕಾರಣ: ಏನು– ಎತ್ತ?



ವಕ್ಫ್ ಕಾಯ್ದೆ ರದ್ದತಿ: ತೇಜಸ್ವಿ ಯಾದವ್ ಭರವಸೆ

ಪಟ್ನಾ (ಪಿಟಿಐ): ಬಿಹಾರದಲ್ಲಿ 'ಇಂಡಿಯಾ' ಮೈತ್ರಿಕೂಟ ಅಧಿಕಾರಕ್ಕೆ ಬಂದಲ್ಲಿ ವಕ್ಫ್ (ತಿದ್ದುಪಡಿ) ಕಾಯ್ದೆಯನ್ನು ರದ್ದುಪಡಿಸಲಾಗುವುದು ಎಂದು ತೇಜಸ್ವಿ ಯಾದವ್ ಹೇಳಿದರು.

ಮುಸ್ಲಿಮರ ಸಂಖ್ಯೆ ಹೆಚ್ಚು ಇರುವ ಪ್ರದೇಶಗಳಾದ ಕಟಿಹಾರ, ಕಿಶನ್‌ಗಂಜ್, ಅರಾರಿಯಾ ಜಿಲ್ಲೆಗಳಲ್ಲಿ ಸರಣಿ ಬಹಿರಂಗ ಸಭೆಗಳಲ್ಲಿ ಅವರು ಮಾತನಾಡಿದರು.

'ನನ್ನ ತಂದೆ ಹಾಗೂ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಕೋಮುವಾದಿ ಶಕ್ತಿಗಳೊಂದಿಗೆ ಎಂದಿಗೂ ರಾಜಿ ಆಗಲಿಲ್ಲ. ಮುಖ್ಯಮಂತ್ರಿ ನಿತೀಶ್ ಕುಮಾರ್ ಇಂತಹ ಶಕ್ತಿಗಳನ್ನು ಬೆಂಬಲಿಸಿದರು. ಹೀಗಾಗಿಯೇ ಆರ್‌ಎಸ್‌ಎಸ್ ಹಾಗೂ ಅದರ ಅಂಗಸಂಸ್ಥೆಗಳು ಬಿಹಾರ ಹಾಗೂ ದೇಶದ ಇತರೆಡೆ ಕೋಮುದ್ವೇಷ ಹರಡುತ್ತಿವೆ' ಎಂದು ಟೀಕಿಸಿದರು.

ಒಂದು ವೇಳೆ ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬಂದಲ್ಲಿ, ಪಂಚಾಯಿತಿ ಪ್ರತಿನಿಧಿಗಳ ಮಾಸಿಕ ಭತ್ಯೆ, ಪಿಂಚಣಿ ಹಾಗೂ ವಿಮಾ ಮೊತ್ತ ಹೆಚ್ಚಿಸು ವುದಾಗಿ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಭಾನುವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪಂಚಾಯಿತಿ ಪ್ರತಿನಿಧಿಗಳ ವಿಮೆಯನ್ನು ₹50 ಲಕ್ಷಕ್ಕೆ ಹೆಚ್ಚಿಸಲಾಗುವುದು' ಎಂದರು.

ಟೊಳ್ಳು ಭರವಸೆ: ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರು ನೀಡಿರುವ ಭರವಸೆಗಳ ಕುರಿತು ಪ್ರತಿಕ್ರಿಯಿಸಿರುವ ಜೆಡಿಯು ವಕ್ತಾರ ನೀರಜ್ ಕುಮಾರ್, 'ಇವೆಲ್ಲ ಟೊಳ್ಳು ಭರವಸೆಗಳು ಎಂಬುದು ಬಿಹಾರ ಜನರಿಗೆ ಗೊತ್ತಿದೆ' ಎಂದು ಹೇಳಿದ್ದಾರೆ.

ಹಲ್ಕಾ ಡಾನ್ ಆದ ಪ್ರಮೋದ್

'ರತ್ನನ್‌ಪ್ರಪಂಚ' ಖ್ಯಾತಿಯ ನಟ ಪ್ರಮೋದ್ ನಟನೆಯ ಹೊಸ ಸಿನಿಮಾದ ಮುಹೂರ್ತ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆಯಿತು. 'ಹಲ್ಕಾ ಡಾನ್' ಆಗಿ ತೆರೆ ಮೇಲೆ ಬರಲು ಪ್ರಮೋದ್ ಸಜ್ಜಾಗಿದ್ದು, ಚಿತ್ರಕ್ಕೆ ನಟ ಸುದೀಪ್ ಕ್ಲ್ಯಾಪ್ ಮಾಡಿದರು. ನಟ ಶಿವರಾಜ್‌ಕುಮಾರ್ ಮೊದಲ ದೃಶ್ಯಕ್ಕೆ ಆ್ಯಕ್ಷನ್ ಕಟ್ ಹೇಳಿದರು. ನಿರ್ಮಾಪಕಿ ಗೀತಾ ಶಿವರಾಜ್‌ಕುಮಾರ್, ನಟ ದುನಿಯಾ ವಿಜಯ್ ಜೊತೆಯಾದರು.

ಕೆ.ಪಿ.ಶ್ರೀಕಾಂತ್

'ಟಗರು', 'ಸಲಗ' ಹಾಗೂ 'ಯುಐ' ಚಿತ್ರಗಳನ್ನು ನಿರ್ಮಿಸಿರುವ ಕೆ.ಪಿ.ಶ್ರೀಕಾಂತ್ ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಚಲ ಈ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ವೀನಸ್ ಎಂಟರ್‌ಟೈನರ್ ಬ್ಯಾನರ್ ಅಡಿಯಲ್ಲಿ ಮೂಡಿಬರುತ್ತಿರುವ ನಾಲ್ಕನೇ ಚಿತ್ರ ಇದಾಗಿದೆ. ಚಿತ್ರಕ್ಕೆ 'ಸಾಯಿ ಕುಮಾರ್ ಫ್ಯಾನ್' ಎಂಬ ಅಡಿಬರಹವಿದ್ದು, ನಟ ಸಾಯಿಕುಮಾರ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಪ್ರಮೋದ್ ನಾಯಕನಾಗಿ, ಅಮೃತಾ ಅಯ್ಯಂಗಾರ್ ನಾಯಕಿಯಾಗಿ ನಟಿಸಲಿದ್ದಾರೆ. ರಮೇಶ್ ಇಂದಿರಾ, ಜ್ಯೋತಿ ರೈ ತಾರಾಬಳಗದಲ್ಲಿದ್ದಾರೆ.

ಚಿತ್ರತಂಡಕ್ಕೆ ಶುಭಕೋರಿ ಮಾತನಾಡಿದ ದುನಿಯಾ ವಿಜಯ್, 'ಶ್ರೀಕಾಂತ್ ಅವರ ಮೇಲೆ ಪ್ರೀತಿ, ಕೋಪ ಎರಡೂ ಇದೆ. ನನಗೆ ಸಿನಿಮಾ ಮಾಡದೇ ಇದ್ದಾಗ ಕೋಪ, ಸಿನಿಮಾ ಮಾಡಿದಾಗ ಖುಷಿ ಇರುತ್ತದೆ. ನಾನು ಒಂದು ಹಂತದಿಂದ ದೊಡ್ಡ ಮಟ್ಟಕ್ಕೆ ಹೋಗಲು ಕಾರಣ ಶ್ರೀಕಾಂತ್ ಅವರ ಬ್ಯಾನರ್. ನನಗೆ ಮತ್ತೊಂದು ಜನ್ಮ ಕೊಟ್ಟ ಸಿನಿಮಾ 'ಸಲಗ'. ಗಾಂಧಿನಗರದಲ್ಲಿನ ರೇಸ್ ಕುದುರೆಗಳನ್ನು ಸರಿಯಾಗಿ ಗುರುತಿಸುವ ಸಾಮರ್ಥ್ಯ ಶ್ರೀಕಾಂತ್ ಅವರಿಗಿದೆ. 'ರತ್ನನ್‌ಪ್ರಪಂಚ'ದಲ್ಲಿ ಪ್ರಮೋದ್ ಅದ್ಭುತವಾಗಿ ನಟಿಸಿದ್ದರು' ಎಂದರು.

ಮುಹೂರ್ತದ ಸಂದರ್ಭದಲ್ಲೇ ಶಿವರಾಜ್‌ಕುಮಾರ್ ಹಾಗೂ ವಿಜಯ್ ಅವರ ಜೊತೆ ಸಿನಿಮಾ ಮಾಡುವುದಾಗಿ ನಿರ್ಮಾಪಕ ಶ್ರೀಕಾಂತ್ ಘೋಷಿಸಿದರು.

'ಶಿವರಾಜ್‌ಕುಮಾರ್ ಅವರ ಜೊತೆ ಸಿನಿಮಾ ಮಾಡಿದಾಗ ನನ್ನನ್ನೂ ಹಾಕಿಕೊಳ್ಳಿ' ಎಂದು ಶ್ರೀಕಾಂತ್ ಅವರಿಗೆ ಹೇಳಿದ ಪ್ರಮೋದ್, 'ನಾನು ಶಿವಣ್ಣ ಬಳಿ ಏಟು ತಿನ್ನಬೇಕು. ಅಂದರೆ ಅವರ ಜೊತೆ ನಟಿಸಬೇಕು. 'ಹಲ್ಕಾ ಡಾನ್'ಗೆ ನಿರ್ದೇಶಕರಾದ ಚಲ ಅವರು ಬರೆದ ಕಥೆ ಚೆನ್ನಾಗಿದೆ' ಎಂದರು.

ಕನ್ನಡ ಹಾಗೂ ತೆಲುಗಿನಲ್ಲಿ ಏಕಕಾಲಕ್ಕೆ ಈ ಸಿನಿಮಾ ನಿರ್ಮಾಣವಾಗಲಿದೆ. ವಿ. ಹರಿಕೃಷ್ಣ ಸಂಗೀತ, ಸತ್ಯಾ ಹೆಗಡೆ ಛಾಯಾಚಿತ್ರಗ್ರಹಣ ಚಿತ್ರಕ್ಕಿರಲಿದೆ.

ಚಿತ್ರಕ್ಕೆ ಕ್ಲ್ಯಾಪ್ ಮಾಡಿದ ಸುದೀಪ್. ಅಮೃತಾ ಅಯ್ಯಂಗಾರ್, ಪ್ರಮೋದ್, ಶಿವರಾಜ್‌ಕುಮಾರ್ ಇದ್ದಾರೆ.

ಡಾರ್ಕ್ ಕಾಮಿಡಿ ಜಾನರ್‌ನಲ್ಲಿ ಸಿನಿಮಾವಿದೆ. ಹೀರೊ ಹೆಸರೇ 'ಹಲ್ಕಾ ಡಾನ್' ಎಂದು. ನವೆಂಬರ್ 15ರಿಂದ ಶೂಟಿಂಗ್ ಆರಂಭಿಸಲಿದ್ದೇವೆ. ನಾನು ಸಾಯಿಕುಮಾರ್ ಅವರ ಫ್ಯಾನ್. ಹೀಗಾಗಿ ಅವರಿಗೇ ಈ ಸಿನಿಮಾವನ್ನು ಅರ್ಪಿಸುತ್ತಿದ್ದೇನೆ. 80–90ರ ದಶಕದ ಚಿತ್ರರಂಗದ ಹೈಲೈಟ್ಸ್ ಈ ಸಿನಿಮಾದಲ್ಲಿರಲಿದೆ.

ಚಲ, ನಿರ್ದೇಶಕ.

ಅಪ್ಪ–ಅಮ್ಮನ ಕನಸು ನನಸು

ಸಾಯಿಕುಮಾರ್

ಕಾರ್ಯಕ್ರಮದಲ್ಲಿ ಚಿತ್ರರಂಗದಲ್ಲಿ 50 ವರ್ಷ ಪೂರೈಸಿದ ಸಾಯಿಕುಮಾರ್ ಅವರನ್ನು ಚಿತ್ರತಂಡ ಸನ್ಮಾನಿಸಿತು. ಇದೇ ವೇಳೆ ಮಾತನಾಡಿದ ಸಾಯಿಕುಮಾರ್, '1975ನಲ್ಲಿ 'ದೇವುಡು ಚೇಸಿನ ಪೆಳ್ಳಿ' ಎಂಬ ನನ್ನ ಮೊದಲ ಸಿನಿಮಾ ತೆಲುಗಿನಲ್ಲಿ ತೆರೆಕಂಡಿತು. ಬಾಲನಟನಾಗಿ ಆ ಸಿನಿಮಾದಲ್ಲಿ ನಟಿಸಿದ್ದೆ. 2025ಕ್ಕೆ ಸಿನಿಮಾರಂಗಕ್ಕೆ ಕಾಲಿಟ್ಟು 50 ವರ್ಷ ಉರುಳಿದೆ. ಅಪ್ಪ–ಅಮ್ಮ ಹೀರೊ–ಹಿರೋಯಿನ್ ಆಗುವ ಕನಸು ಹೊತ್ತಿದ್ದರು. ಈ ಕನಸು ನಮ್ಮ ಮೂಲಕ ನನಸಾಗಿದೆ. ಸುದೀಪ್ ಅವರ ಜೊತೆ 'ಕೆಂಪೇಗೌಡ'ದಲ್ಲಿ ನಾನೇ ನಟಿಸಬೇಕಿತ್ತು. ನಾನೇ ಪೊಲೀಸ್ ಆಗಿ ನಟಿಸಿದ್ದೇನೆ ಹೀಗಾಗಿ ಸರಿಯಾಗುವುದಿಲ್ಲ ಎಂದಿದ್ದೆ. ಅದೃಷ್ಟ ಏನೆಂದರೆ ರವಿಶಂಕರ್‌ಗೆ ಈ ಸಿನಿಮಾ ಬಳಿಕ ಸಾಲು ಸಾಲು ಸಿನಿಮಾಗಳು ದೊರಕಿದವು. 1996ರಲ್ಲಿ 'ಪೊಲೀಸ್ ಸ್ಟೋರಿ' ತೆರೆಕಂಡಿತು. ಹೀರೊ ಆಗಿ ಕನ್ನಡದಲ್ಲೇ 54 ಸಿನಿಮಾಗಳನ್ನು ಮಾಡಿದೆ. ವರ್ಷಕ್ಕೆ ಸರಾಸರಿ ಏಳೆಂಟು ಸಿನಿಮಾಗಳನ್ನು ಮಾಡುತ್ತಿದ್ದೆ. 25–26 ದಿನಗಳಲ್ಲೇ ಸಿನಿಮಾಗಳನ್ನು ಪೂರ್ಣಗೊಳಿಸುತ್ತಿದ್ದ ಕಾಲವದು. ನನ್ನ ಡೈಲಾಗ್ಸ್‌ಗಳೇ ನನ್ನ ಕೈಹಿಡಿದವು. 'ಹಲ್ಕಾ ಡಾನ್' ಎಂಬ ಶೀರ್ಷಿಕೆ ಕೇಳಿ ಒಂದು ಕ್ಷಣ ಯೋಚಿಸಿದ್ದೆ. ಸಿನಿಮಾದ ಕಥೆ ಕೇಳಿದ ಬಳಿಕ ಪಾತ್ರ ಮಾಡಲು ಒಪ್ಪಿಕೊಂಡೆ' ಎಂದರು.

ಮಲೈಕಾ

2026ರ ಜ.23ಕ್ಕೆ 'ಕಲ್ಟ್' ರಿಲೀಸ್

'ಬನಾರಸ್' ಸಿನಿಮಾ ಮೂಲಕ ಚಿತ್ರರಂಗ ಪ್ರವೇಶಿಸಿದ್ದ ನಟ ಝೈದ್ ಖಾನ್ ನಟನೆಯ ಹೊಸ ಸಿನಿಮಾ 'ಕಲ್ಟ್'ನ ರಿಲೀಸ್ ದಿನಾಂಕ ಘೋಷಣೆಯಾಗಿದೆ.

'ಉಪಾಧ್ಯಕ್ಷ' ಸಿನಿಮಾ ಖ್ಯಾತಿಯ ಅನಿಲ್ ಕುಮಾರ್ ನಿರ್ದೇಶನದ ಈ ಸಿನಿಮಾ 2026ರ ಜ.23ರಂದು ತೆರೆಕಾಣಲಿದೆ. ಇತ್ತೀಚೆಗೆ ಕಿತ್ತೂರು ಉತ್ಸವದಲ್ಲಿ ಚಿತ್ರದ ಎರಡನೇ ಹಾಡು 'ಬ್ಲಡಿ ಲವ್' ಬಿಡುಗಡೆಯಾಯಿತು. ಚಿತ್ರದಲ್ಲಿ ನಾಯಕಿಯರಾಗಿ ರಚಿತಾ ರಾಮ್ ಮತ್ತು ಮಲೈಕಾ ಟಿ.ವಸುಪಾಲ್ ಅಭಿನಯಿಸಿದ್ದಾರೆ. 'ಬ್ಲಡಿ ಲವ್' ಹಾಡಿಗೆ ನಿರ್ದೇಶಕ ಅನಿಲ್ ಕುಮಾರ್ ಅವರೇ ಸಾಹಿತ್ಯ ಬರೆದಿದ್ದು, ಚಂದನ್ ಶೆಟ್ಟಿ ಹಾಡಿದ್ದಾರೆ. ಅರ್ಜುನ್ ಜನ್ಯ ಸಂಗೀತ ನೀಡಿದ್ದಾರೆ.

ಈಗಾಗಲೇ ಚಿತ್ರದ 'ಅಯ್ಯೋ ಶಿವನೇ' ಎಂಬ ಹಾಡು ಬಿಡುಗಡೆಯಾಗಿದ್ದು, ಇದರಲ್ಲಿ ಝೈದ್ ಹಾಗೂ ಮಲೈಕಾ ಹೆಜ್ಜೆ ಹಾಕಿದ್ದಾರೆ. ಪ್ರೀತಿ, ಆ್ಯಕ್ಷನ್, ಭಾವನಾತ್ಮಕ ಅಂಶಗಳುಳ್ಳ ಕಥೆಯೊಂದಿಗೆ ಅನಿಲ್ ಈ ಬಾರಿ ಬರಲಿದ್ದು, ಲೋಕಿ ಸಿನಿಮಾಸ್ ಲಾಂಛನದಲ್ಲಿ ಸಿನಿಮಾ ನಿರ್ಮಾಣಗೊಂಡಿದೆ. ಕೆ.ವಿ.ಎನ್ ಪ್ರೊಡಕ್ಷನ್ಸ್ ಸಿನಿಮಾವನ್ನು ಅರ್ಪಿಸುತ್ತಿದೆ. ಜೆ.ಎಸ್ ವಾಲಿ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ ಹಾಗೂ ರವಿವರ್ಮ ಸಾಹಸ ನಿರ್ದೇಶನ ಚಿತ್ರಕ್ಕಿದೆ.

'ಫಸ್ಟ್ ಸ್ಯಾಲರಿ' ಪೋಸ್ಟರ್ ಬಿಡುಗಡೆ

ಶ್ರೀ ರಾಘವೇಂದ್ರ ಚಿತ್ರವಾಣಿ ಸಂಸ್ಥೆಯನ್ನು ಮುನ್ನಡೆಸುತ್ತಿರುವ ಸುಧೀಂದ್ರ ವೆಂಕಟೇಶ್ ಇದೀಗ ನಿರ್ಮಾಪಕರಾಗಿದ್ದಾರೆ. ತಮ್ಮ ಪುತ್ರ ಪವನ್ ವೆಂಕಟೇಶ್ ನಿರ್ದೇಶನದ 'ಫಸ್ಟ್ ಸ್ಯಾಲರಿ' ಎಂಬ ಕಿರುಚಿತ್ರಕ್ಕೆ ಸುಧೀಂದ್ರ ವೆಂಕಟೇಶ್ ಬಂಡವಾಳ ಹೂಡಿದ್ದಾರೆ.

ಶ್ರೀ ರಾಘವೇಂದ್ರ ಚಿತ್ರವಾಣಿ ಸಂಸ್ಥೆಯ ಸ್ಥಾಪಕರಾದ ಡಿ.ವಿ ಸುಧೀಂದ್ರ ಅವರು 'ಒಲವಿನ ಉಡುಗೊರೆ', 'ಗಣೇಶನ ಮದುವೆ, 'ಗುಂಡನ ಮದುವೆ', 'ಪಟ್ಟಣಕ್ಕೆ ಬಂದ ಪುಟ್ಟ', 'ನಗು ನಗುತಾ ನಲಿ' ಚಿತ್ರಗಳನ್ನು ನಿರ್ಮಾಣ ಮಾಡಿದ್ದರು. 'ಫಸ್ಟ್ ಸ್ಯಾಲರಿ'ಗೆ ಕನಸುಗಳ ಹಾದಿ ಎನ್ನುವ ಅಡಿಬರಹವಿದ್ದು, ದೀಪಾವಳಿ ಸಂದರ್ಭದಲ್ಲಿ ಕಿರುಚಿತ್ರದ ಪೋಸ್ಟರ್ ಬಿಡುಗಡೆಯಾಗಿದೆ.

ಈಗಾಗಲೇ ಹಲವು ಕಿರುಚಿತ್ರಗಳನ್ನು ನಿರ್ದೇಶನ ಮಾಡಿದ ಅನುಭವ ಪವನ್‌ಗಿದೆ. ಈ ಕಿರುಚಿತ್ರದಲ್ಲಿ ಹರಿಣಿ ಶ್ರೀಕಾಂತ್ ಪ್ರಮುಖಪಾತ್ರದಲ್ಲಿ ಕಾಣಿಸಿಕೊಂಡಿದ್ದು ವಿಜಯ್ ಶಿವಕುಮಾರ್, ಯತಿರಾಜ್, ತ್ರಿಶೂಲ್, ಸ್ನೇಹಶ್ರೀ ಮತ್ತು ರಕ್ಷಿತ್ ತಾರಾಬಳಗದಲ್ಲಿದ್ದಾರೆ. ಶ್ರೀರಾಘವೇಂದ್ರ ಚಿತ್ರವಾಣಿ ಯೂಟ್ಯೂಬ್‌ನಲ್ಲೇ ಈ ಕಿರುಚಿತ್ರ ಬಿಡುಗಡೆಯಾಗಲಿದೆ.

'ಇದು ತಾಯಿ ಜೊತೆಗಿನ ಭಾವಾನತ್ಮಕ ಸಂಬಂಧದ ಕುರಿತ ಕಿರುಚಿತ್ರ. ಐದು ದಿನ ಬೆಂಗಳೂರಿನಲ್ಲಿ ಚಿತ್ರೀಕರಣ ಮಾಡಲಾಗಿದೆ. ಪೋಸ್ಟ್ ಪ್ರೊಡಕ್ಷನ್ ಕೆಲಸಕ್ಕೆ ಒಂದು ತಿಂಗಳು ಹಿಡಿದಿದೆ. ಕಿರುಚಿತ್ರದಲ್ಲಿ ಒಂದು ಹಾಡಿದ್ದು, ಡಿಐ ಸೇರಿದಂತೆ ಒಟ್ಟಾರೆ ಕಿರುಚಿತ್ರದ ತಯಾರಿಕೆಗೆ ಮೂರು ತಿಂಗಳು ಹಿಡಿದಿದೆ. ಕಿರುಚಿತ್ರವು 24 ನಿಮಿಷದ ಅವಧಿಯದ್ದಾಗಿದೆ' ಎಂದಿದ್ದಾರೆ ಪವನ್. ವಿಜಯ್ ಶಿವಕುಮಾರ್ ರಚನೆ, ರಿಚರ್ಡ್ ಡ್ಯಾನಿಯಲ್ ಛಾಯಾಚಿತ್ರಗ್ರಹಣದ ಜೊತೆಗೆ ಸಂಕಲನ ಮಾಡಿದ್ದು ವಿಜಯ್ ಹರಿತ್ಸ ಸಂಗೀತ ನೀಡಿದ್ದಾರೆ.

ಹರಿಣಿ, ಪವನ್ ವೆಂಕಟೇಶ್

ಟ್ರೋಫಿಯೊಂದಿಗೆ ಸಂಭ್ರಮಿಸಿದ ಬೆಂಗಳೂರು ಟಾರ್ಪಿಡೋಸ್ ಆಟಗಾರರು

ಬೆಂಗಳೂರು ಟಾರ್ಪಿಡೋಸ್ ಚಾಂಪಿಯನ್

ಹೈದರಾಬಾದ್ (ಪಿಟಿಐ): ಬೆಂಗಳೂರು ಟಾರ್ಪಿಡೋಸ್ ತಂಡವು ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಮುಂಬೈ ಮೀಟಿಯರ್ಸ್ ತಂಡವನ್ನು ಮಣಿಸಿ ಪ್ರೈಮ್ ವಾಲಿಬಾಲ್ ಲೀಗ್‌ನ ನಾಲ್ಕನೇ ಆವೃತ್ತಿಯ ಚಾಂಪಿಯನ್ ಆಯಿತು.

ಇಲ್ಲಿನ ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಟಾರ್ಪಿಡೋಸ್ ತಂಡವು 15–13, 16–4, 15–13ರಿಂದ ಮೀಟಿಯರ್ಸ್ ತಂಡವನ್ನು ಸೋಲಿಸಿತು.

ಟೂರ್ನಿಯುದ್ದಕ್ಕೂ ಉತ್ತಮ ಪ್ರದರ್ಶನ ತೋರಿದ್ದ ಎರಡೂ ತಂಡಗಳ ಆಟಗಾರರು ಫೈನಲ್‌ನಲ್ಲಿಯೂ ಪ್ರಬಲ ಪ್ರತಿರೋಧ ತೋರಿದರು. ಸೇತು ಅವರ ಸರ್ವ್‌ಗಳನ್ನು ನಿಭಾಯಿಸುವಲ್ಲಿ ಎಡವಿದ ಮೀಟಿಯರ್ಸ್ ತಂಡವು ಪಂದ್ಯವನ್ನು ಕೈಚೆಲ್ಲಿತು. ನಾಯಕ ಮ್ಯಾಟ್ ವೆಸ್ಟ್ ಅವರು ಚಾಣಾಕ್ಷತನದಿಂದ ಚೆಂಡನ್ನು ನಿಯಂತ್ರಿಸಿ, ಟಾರ್ಪಿಡೋಸ್ ತಂಡದ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು.

ಮಳೆ: ಭಾರತ–ಬಾಂಗ್ಲಾ ಪಂದ್ಯ ರದ್ದು

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

ನವಿ ಮುಂಬೈ (ಪಿಟಿಐ): ಆತಿಥೇಯ ಭಾರತ ಮತ್ತು ಬಾಂಗ್ಲಾದೇಶ ತಂಡಗಳ ನಡುವಣ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯ ಅಂತಿಮ ಲೀಗ್ ಪಂದ್ಯ ಭಾನುವಾರ ಮಳೆಯಿಂದಾಗಿ ಅಪೂರ್ಣಗೊಂಡಿತು. ಎರಡೂ ತಂಡಗಳು ತಲಾ ಒಂದು ಪಾಯಿಂಟ್ ಪಡೆದವು.

ಇದಕ್ಕೂ ಮೊದಲು, ಮಳೆಯಿಂದಾಗಿ ವಿಳಂಬವಾಗಿ ಆರಂಭವಾದ ಪಂದ್ಯದ ಇನಿಂಗ್ಸ್ ಅನ್ನು 27 ಓವರ್‌ಗಳಿಗೆ ನಿಗದಿ ಮಾಡಲಾಯಿತು. ರಾಧಾ ಯಾದವ್ (30ಕ್ಕೆ3) ಮತ್ತು ಶ್ರೀಚರಣಿ (23ಕ್ಕೆ2) ಅವರ ಸ್ಪಿನ್ ಮೋಡಿಯ ಮುಂದೆ ಬಾಂಗ್ಲಾ ತಂಡವು 9 ವಿಕೆಟ್‌ಗಳಿಗೆ 119 ರನ್ ಗಳಿಸಿತು. ಸುಲಭ ಗುರಿ ಬೆನ್ನಟ್ಟಿದ ಹರ್ಮನ್‌ಪ್ರೀತ್ ಕೌರ್ ಬಳಗವು, ಸ್ಮೃತಿ ಮಂದಾನ (ಔಟಾಗದೇ 35) ಹಾಗೂ ಅಮನ್ಜೋತ್ ಕೌರ್ (ಔಟಾಗದೇ 15) ಅವರ ಬಿರುಸಿನ ಆಟದ ನೆರವಿನಿಂದ 8.4 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 57 ರನ್‌ಗಳಿಸಿತ್ತು.

ಆದರೆ, ಮತ್ತೆ ಮಳೆ ಆರಂಭವಾಗಿ ಬಿಡುವಿಲ್ಲದೆ ಸುರಿದಿದ್ದರಿಂದ ಅಂಪೈರ್‌ಗಳು ಪಂದ್ಯ ರದ್ದುಗೊಳಿಸಿದರು. ಈಗಾಗಲೇ ಸೆಮಿಫೈನಲ್ ಪ್ರವೇಶಿಸಿರುವ ಭಾರತ ತಂಡಕ್ಕೆ ಈ ಪಂದ್ಯವು ಔಪಚಾರಿಕವಾಗಿತ್ತು.

ಈ ಮಧ್ಯೆ, ಆರಂಭಿಕ ಆಟಗಾರ್ತಿ ಪ್ರತೀಕಾ ರಾವಲ್ ಅವರು ಫೀಲ್ಡಿಂಗ್ ವೇಳೆ ಪಾದ ಮತ್ತು ಮೊಣಕಾಲಿಗೆ ಗಾಯ ಮಾಡಿಕೊಂಡಿದ್ದು, ಭಾರತ ತಂಡವನ್ನು ಚಿಂತೆಗೀಡು ಮಾಡಿದೆ.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 27 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 119 (ಶಮೀನ್ ಅಖ್ತರ್ 36, ಶೋಭನಾ ಮೊಸ್ತಾರಿ 26, ಶ್ರೀಚರಣಿ 23ಕ್ಕೆ2, ರಾಧಾ ಯಾದವ್ 30ಕ್ಕೆ3). ಭಾರತ: 8.4 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 57 (ಸ್ಮೃತಿ ಮಂದಾನ ಔಟಾಗದೇ 35, ಅಮನ್ಜೋತ್ ಕೌರ್ ಔಟಾಗದೇ 15). ಫಲಿತಾಂಶ: ಪಂದ್ಯ ರದ್ದು.

ಪ್ರೊ ಕಬಡ್ಡಿ : ತೆಲುಗು ಟೈಟನ್ಸ್‌ಗೆ ಮಣಿದ ಬೆಂಗಳೂರು ಬುಲ್ಸ್

ನವದೆಹಲಿ: ಬೆಂಗಳೂರು ಬುಲ್ಸ್ ತಂಡವು ಪ್ರೊ ಕಬಡ್ಡಿ ಟೂರ್ನಿಯಲ್ಲಿ ಭಾನುವಾರ ನಡೆದ ಮಿನಿ ಕ್ವಾಲಿಫೈಯರ್ ಪಂದ್ಯದಲ್ಲಿ ತೆಲುಗು ಟೈಟನ್ಸ್ ಎದುರು ಮಣಿಯಿತು.

ತ್ಯಾಗರಾಜ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟೈಟನ್ಸ್ ತಂಡವು 37–32ರಿಂದ ಬುಲ್ಸ್ ಬಳಗವನ್ನು ಮಣಿಸಿತು. ಬೆಂಗಳೂರು ತಂಡವು ಸೋಮವಾರ ಎಲಿಮಿನೇಟರ್ (2) ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ಎದುರು ಸೆಣಸಲಿದೆ. ಒಂದೊಮ್ಮೆ ಆ ಪಂದ್ಯದಲ್ಲಿ ಸೋತರೆ ಟೂರ್ನಿಯಿಂದ ಹೊರಬೀಳಲಿದೆ.

ಅಂಕಪಟ್ಟಿಯಲ್ಲಿ ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನ ಗಳಿಸಿದ್ದ ಬುಲ್ಸ್ ಹಾಗೂ ಟೈಟನ್ಸ್ ತಂಡಗಳು ಮಿನಿ ಕ್ವಾಲಿಫೈಯರ್ ನಲ್ಲಿ ಮುಖಾಮುಖಿಯಾದವು.

ಟೈಟನ್ಸ್ ತಂಡದ ವಿಜಯ್ ಮಲೀಕ್ 10 ಹಾಗೂ ಭರತ್ ಅವರು 12 ಅಂಕ ಗಳಿಸಿ ತಮ್ಮ ತಂಡದ ಗೆಲುವಿಗೆ ಕಾರಣರಾದರು.

ಬೆಂಗಳೂರು ತಂಡವೂ ದಿಟ್ಟ ಹೋರಾಟ ನಡೆಸಿತು. ಆಲ್‌ರೌಂಡರ್ ಅಲಿರೇಜಾ ಮಿರ್ಝಾನ್ 11 ಹಾಗೂ ಆಶಿಶ್ ಮಲಿಕ್ 5 ಅಂಕ ಗಳಿಸಿದರು.

ಪಂದ್ಯದ ಮೊದಲಾರ್ಧದಲ್ಲಿ ಬೆಂಗಳೂರು ತಂಡವು 14–16ರಿಂದ ಹಿನ್ನಡೆಯಲ್ಲಿತ್ತು. ಟೈಟನ್ಸ್ ತಂಡವು ವಿರಾಮದ ನಂತರವೂ ತನ್ನ ಹಿಡಿತ ಸಡಿಲಿಸಲಿಲ್ಲ. ಟೈಟನ್ಸ್ ಈ ಅವಧಿಯಲ್ಲಿ 21–18 ಮುನ್ನಡೆ ಪಡೆಯಿತು.

ಮಂಗಳೂರಿನಲ್ಲಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿ ಇಂದಿನಿಂದ

ಪ್ರಜಾವಾಣಿ ವಾರ್ತೆ

ಮಂಗಳೂರು: ಕಡಲ ನಗರಿಯು 'ಚೀಫ್ ಮಿನಿಸ್ಟರ್ಸ್ ಮಂಗಳೂರು ಇಂಡಿಯಾ ಇಂಟರ್‌ನ್ಯಾಷನಲ್ ಚಾಲೆಂಜ್ 2025' ಬಿಡಬ್ಲ್ಯುಎಫ್ ಬ್ಯಾಡ್ಮಿಂಟನ್ ಟೂರ್ನಿಗೆ ಸಜ್ಜಾಗಿದೆ.

ಭಾರತ ಬ್ಯಾಂಡ್ಮಿಂಟನ್ ಸಂಸ್ಥೆ, ರಾಜ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ) ಹಾಗೂ ದಕ್ಷಿಣ ಕನ್ನಡ ಬ್ಯಾಡ್ಮಿಂಟನ್ ಸಂಸ್ಥೆ ಆಶ್ರಯದಲ್ಲಿ ನಗರದ ಉರ್ವ ಒಳಾಂಗಣ ಕ್ರೀಡಾಂಗಣದಲ್ಲಿ ಸೋಮವಾರದಿಂದ ನವೆಂಬರ್ 2ರ ವರೆಗೆ ಟೂರ್ನಿ ನಡೆಯಲಿದೆ. ಪುರುಷರ ಸಿಂಗಲ್ಸ್, ಡಬಲ್ಸ್, ಮಹಿಳೆಯರ ಸಿಂಗಲ್ಸ್, ಡಬಲ್ಸ್ ಹಾಗೂ ಮಿಶ್ರ ಡಬಲ್ಸ್ ಹಣಾಹಣಿಗೆ ವೇದಿಕೆಯಾಗಲಿದೆ.

ಪುರುಷರ ಸಿಂಗಲ್ಸ್‌ನಲ್ಲಿ 112 ಆಟಗಾರರು, ಡಬಲ್ಸ್‌ನಲ್ಲಿ 51 ಜೋಡಿಗಳು, ಮಹಿಳೆಯರ ಸಿಂಗಲ್ಸ್‌ನಲ್ಲಿ 83 ಆಟಗಾರ್ತಿಯರು, ಮಹಿಳೆಯರ ಡಬಲ್ಸ್‌ನಲ್ಲಿ 36 ಜೋಡಿಗಳು ಹಾಗೂ ಮಿಶ್ರ ಡಬಲ್ಸ್‌ನಲ್ಲಿ 41 ಜೋಡಿಗಳು ತಮ್ಮ ಸಾಮರ್ಥ್ಯ ಪರೀಕ್ಷೆಗೆ ಇಳಿಯಲಿವೆ. ಒಟ್ಟು ₹21.95 ಲಕ್ಷ (25 ಸಾವಿರ ಅಮೆರಿಕದ ಡಾಲರ್) ಪ್ರಶಸ್ತಿ ಮೊತ್ತವಿದೆ.

ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಋತ್ವಿಕ್ ಸಂಜೀವಿ ಸತೀಶ್ ಕುಮಾರ್ (ವಿಶ್ವ ಕ್ರಮಾಂಕದಲ್ಲಿ 63ನೇ ಸ್ಥಾನ), ಮನರಾಜ್ ಸಿಂಗ್ (65), ಬಿ.ಎಂ. ರಾಹುಲ್ ಭಾರದ್ವಾಜ್ (95), ಮೇರಬಾ ಲುವಾಂಗ್ ಮೈಸ್ನಮ್, ಕೆನಡಾದ ಶೌರ್ಯ ಗುಲ್ಲಯ್ಯ (228), ಶ್ರೀಲಂಕಾದ ಅಹಿಂಸಾ ಹೆರಾತ್ (257) ಸೆಣಸಲಿದ್ದಾರೆ.

ಪುರುಷರ ಡಬಲ್ಸ್‌ನಲ್ಲಿ ಸಿಂಗಪುರದ ಎಂಗ್ ಕೀಟ್ ಎಸ್ಲೆ ಕೊ ಮತ್ತು ಜಾನ್ಸ್‌ಕೆ ಕ್ಯೂಬೊ ಜೋಡಿ (60ನೇ ರ್‍ಯಾಂಕ್), ಭಾರತದ ರೂಬನ್ ಕುಮಾರ್ ರೆತಿನಾ ಸಭಾಪತಿ ಮತ್ತು ವಿಷ್ಣುವರ್ಧನ್ ಗೌಡ ಪಂಜಾಳ (ಶ್ರೇಯಾಂಕರಹಿತ), ಅಮಾನ್ ಮಹಮ್ಮದ್ ಮತ್ತು ಡಿಂಕು ಸಿಂಗ್ ಕೊಂಟೊಜಾಮ್ (75) ಜೋಡಿಗಳು ಸಾಮರ್ಥ್ಯಪ್ರದರ್ಶನಕ್ಕೆ ಅಣಿಯಾಗಿವೆ.

ಮಿಶ್ರ ಡಬಲ್ಸ್‌ನಲ್ಲಿ ಭಾರತದ ಅಶಿತ್ ಸೂರ್ಯ ಮತ್ತು ಅಮೃತಾ ಪ್ರಮುತೇಶ್ (38), ಧ್ರುವ ರಾವತ್ ಮತ್ತು ಮನಿಷಾ ಕೆ. (89) ಥಾಯ್ಲೆಂಡ್‌ನ ಪೊಂಗ್ಸಾಕೋರ್ನ್ ಥೋಂಗ್‌ಖಾನ್ ಮತ್ತು ನನ್ನಪಾಸ್ ಸುಕ್ಕಲದ್ ಮೊದಲಾದ ಜೋಡಿಗಳು ಅಖಾಡಕ್ಕೆ ಇಳಿಯಲಿವೆ.

ಸ್ಮಾರ್ಟ್‌ಸಿಟಿ ಯೋಜನೆಯಡಿ ಒಟ್ಟು ₹39 ಕೋಟಿ ಮೊತ್ತದಲ್ಲಿ ಉರ್ವದಲ್ಲಿ ನಿರ್ಮಿಸಲಾದ ಜಾಗತಿಕ ದರ್ಜೆಯ ಬ್ಯಾಡ್ಮಿಂಟನ್ ಕ್ರೀಡಾಂಗಣದ ನೆಲ ಮಹಡಿಯ ಆರು ಅಂಕಣಗಳಲ್ಲಿ ಹಾಗೂ ಮೂರನೇ ಮಹಡಿಯ ಐದು ಅಂಕಣಗಳಲ್ಲಿ ಪಂದ್ಯಗಳು ನಡೆಯಲಿವೆ. ಈ ಕ್ರೀಡಾಂಗಣವು ಒಟ್ಟು 1300 ಮಂದಿ ಪಂದ್ಯ ವೀಕ್ಷಿಸುವ ವ್ಯವಸ್ಥೆ ಇದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಟೂರ್ನಿಗೆ ಸೋಮವಾರ ಚಾಲನೆ ನೀಡಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂದು ದಕ್ಷಿಣ ಕನ್ನಡ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಧ್ಯಕ್ಷ ಸಂತೋಷ್ ಕುಮಾರ್ ಶೆಟ್ಟಿ 'ಪ್ರಜಾವಾಣಿ'ಗೆ ತಿಳಿಸಿದರು.

ಟೂರ್ನಿಯ ಮಹತ್ವ

'ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ಆಯೋಜಿಸುತ್ತಿರುವ ಮಹತ್ವದ ಟೂರ್ನಿ ಇದಾಗಿದೆ. ಫೆಡರೇಷನ್‌ನ ಪ್ರಥಮ ಲೆವೆಲ್–ಮೂರನೇ ಶ್ರೇಣಿಯ ಟೂರ್ನಿ ಇದು. ಆಟಗಾರರಿಗೆ ಶ್ರೇಯಾಂಕ ಗಳಿಸಲು ಸಹಾಯಕವಾಗಲಿದೆ. ವಿವಿಧ ದೇಶಗಳ ಆಟಗಾರರು ಭಾಗವಹಿಸುವ ಈ ಟೂರ್ನಿ ಉದಯೋನ್ಮುಖ ಆಟಗಾರರಿಗೆ ಹುರುಪು ತುಂಬಲಿದೆ. ಮಂಗಳೂರಿನಲ್ಲಿ ಇಂತಹ ಟೂರ್ನಿಯನ್ನು ಆಯೋಜನೆಗೊಳ್ಳುತ್ತಿರುವುದು ಪ್ರದೇಶದ ಬ್ಯಾಡ್ಮಿಂಟನ್ ಆಟಗಾರರಿಗೆ ಉತ್ತೇಜನ ಸಿಗುವ ನಿರೀಕ್ಷೆ ಇದೆ' ಎಂದು ದಕ್ಷಿಣ ಕನ್ನಡ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಧ್ಯಕ್ಷ ಸಂತೋಷ್ ಕುಮಾರ್ ಶೆಟ್ಟಿ 'ಪ್ರಜಾವಾಣಿ'ಗೆ ತಿಳಿಸಿದರು.

ಸಿಡ್ನಿಗೆ ರೋಹಿತ್ ವಿದಾಯ

ಭಾರತ ತಂಡದ ಆರಂಭಿಕ ಬ್ಯಾಟರ್ ರೋಹಿತ್ ಶರ್ಮಾ ಅವರು ಸಿಡ್ನಿ ವಿಮಾನ ನಿಲ್ದಾಣದ ಪ್ರವೇಶದ್ವಾರದಲ್ಲಿ ತೆಗೆಸಿಕೊಂಡ ಚಿತ್ರವೊಂದನ್ನು ಭಾನುವಾರ ಫೇಸ್‌ಬುಕ್‌ನಲ್ಲಿ ಹಾಕಿದ್ದಾರೆ. 'ಕೊನೆಯ ಬಾರಿ, ಸಿಡ್ನಿಯಿಂದ ನಿರ್ಗಮಿಸುತ್ತಿರುವೆ' ಎಂದು ಬರೆದಿದ್ದಾರೆ. ಈ ಚಿತ್ರಕ್ಕೆ ಅಪಾರ ಸಂಖ್ಯೆಯ ಅಭಿಮಾನಿಗಳು ಪ್ರತಿಕ್ರಿಯಿಸಿದ್ದಾರೆ

ಎಮಿ, ಲಿನ್ಸೆ ಆಟ; ಇಂಗ್ಲೆಂಡ್ ಜಯಭೇರಿ

ವಿಶಾಖಪಟ್ಟಣಂ (ಪಿಟಿಐ): ಲಿನ್ಸೆ ಸ್ಮಿತ್ ಅಮೋಘ ಬೌಲಿಂಗ್ ಮತ್ತು ಎಮಿ ಜೋನ್ಸ್ ಅವರ ಅಬ್ಬರದ ಬ್ಯಾಟಿಂಗ್ ಬಲದಿಂದ ಇಂಗ್ಲೆಂಡ್ ತಂಡವು ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಲೀಗ್ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಎಸಿಎ–ವಿಡಿಸಿಎ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಇಂಗ್ಲೆಂಡ್ ತಂಡವು 8 ವಿಕೆಟ್‌ಗಳಿಂದ ನ್ಯೂಜಿಲೆಂಡ್ ಎದುರು ಜಯಿಸಿತು. ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ಇಂಗ್ಲೆಂಡ್ ಈಗಾಗಲೇ ಸೆಮಿಫೈನಲ್ ಪ್ರವೇಶಿಸಿದೆ.

ಟಾಸ್ ಗೆದ್ದ ನ್ಯೂಜಿಲೆಂಡ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಲಿನ್ಸೆ ಸ್ಮಿತ್ (30ಕ್ಕೆ3) ಮತ್ತು ನ್ಯಾಟ್ ಶಿವರ್ ಬ್ರಂಟ್ (31ಕ್ಕೆ2) ಅವರ ಬೌಲಿಂಗ್‌ನಿಂದಾಗಿ ನ್ಯೂಜಿಲೆಂಡ್ ತಂಡವು 38.2 ಓವರ್‌ಗಳಲ್ಲಿ 168 ರನ್ ಗಳಿಸಲಷ್ಟೇ ಶಕ್ತವಾಯಿತು. ಗುರಿ ಬೆನ್ನಟ್ಟಿದ ತಂಡವು ಕೇವಲ 29.2 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 172 ರನ್ ಗಳಿಸಿ ಸುಲಭ ಜಯಸಾಧಿಸಿತು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 38.2 ಓವರ್‌ಗಳಲ್ಲಿ 168 (ಜಾರ್ಜಿಯಾ ಪ್ಲಿಮರ್ 43, ಅಮೆಲಿಯಾ ಕೆರ್ 35, ಲಿನ್ಸೆ ಸ್ಮಿತ್ 30ಕ್ಕೆ3, ನ್ಯಾಟ್ ಶಿವರ್ ಬ್ರಂಟ್ 31ಕ್ಕೆ2, ಅಲಿಸ್ ಕ್ಯಾಪ್ಸಿ 34ಕ್ಕೆ2) ಇಂಗ್ಲೆಂಡ್: 29.2 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 172 (ಎಮಿ ಜೋನ್ಸ್ ಔಟಾಗದೇ 86, ಟ್ಯಾಮಿ ಬೀಮೌಂಟ್ 40, ಸೋಫಿ ಡಿವೈನ್ 20ಕ್ಕೆ1, ಲಿಯಾ ತಹುಹು 9ಕ್ಕೆ1) ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ 8 ವಿಕೆಟ್‌ಗಳ ಜಯ.

ದೀಕ್ಷಾ ಸುಧಾಕರ್ 'ಎಕ್ಸ್' ಚಿತ್ರ

ದೀಕ್ಷಾ, ಶೈನಾಗೆ ಕಿರೀಟ

ಚೆಂಗ್ಡು (ಪಿಟಿಐ): ಭಾರತದ ಉದಯೋನ್ಮುಖ ಬ್ಯಾಡ್ಮಿಂಟನ್ ಆಟಗಾರ್ತಿಯರಾದ ದೀಕ್ಷಾ ಸುಧಾಕರ್ ಹಾಗೂ ಶೈನಾ ಮಣಿಮುತ್ತು ಅವರು 17 ಮತ್ತು 15 ವರ್ಷದೊಳಗಿನವರ ಏಷ್ಯಾ ಚಾಂಪಿಯನ್‌ಷಿಪ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು. ಅದರೊಂದಿಗೆ, ಈ ಬಾರಿ ಎರಡು ಚಿನ್ನ, ಒಂದು ಬೆಳ್ಳಿ ಹಾಗೂ ಎರಡು ಕಂಚಿನ ಪದಕ ಗೆದ್ದ ಭಾರತವು ಚಾಂಪಿಯನ್‌ಷಿಪ್‌ನ ಇತಿಹಾಸದಲ್ಲಿಯೇ ಅತ್ಯುತ್ತಮ ಸಾಧನೆ ತೋರಿತು.

ಶೈನಾ

ಭಾನುವಾರ ನಡೆದ 17 ವರ್ಷದೊಳಗಿನವರ ಬಾಲಕಿಯರ ಸಿಂಗಲ್ಸ್ ಫೈನಲ್‌ನಲ್ಲಿ ದೀಕ್ಷಾ ಅವರು 21–16, 21–9ರಿಂದ ಸ್ವದೇಶದ ಲಕ್ಷ್ಯಾ ರಾಜೇಶ್ ವಿರುದ್ಧ ಗೆಲುವು ಸಾಧಿಸಿದರು. ಅದರೊಂದಿಗೆ ದೀಕ್ಷಾ ಅವರು ಈ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಭಾರತದ ಮೊದಲ ಆಟಗಾರ್ತಿ ಎಂಬ ಕೀರ್ತಿಗೂ ಭಾಜನರಾದರು.

15 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಸುತ್ತಿನಲ್ಲಿ ಶೈನಾ ಅವರು 21–14, 22–20ರಿಂದ ಜಪಾನ್‌ನ ಚಿಹಾರು ತೊಮಿಟಾ ಅವರನ್ನು ಮಣಿಸಿ ಪ್ರಶಸ್ತಿ ಮುಡಿಗೇರಿಸಿಕೊಂಡರು. 44 ನಿಮಿಷ ನಡೆದ ರೋಚಕ ಹಣಾಹಣಿಯಲ್ಲಿ ಭಾರತದ ಆಟಗಾರ್ತಿ ಮೇಲುಗೈ ಸಾಧಿಸುವಲ್ಲಿ ಯಶಸ್ವಿಯಾದರು.

ಭಾರತವು 2013ರಲ್ಲಿ ಎರಡು ಚಿನ್ನದ ಪದಕ ಗೆದ್ದಿದ್ದು ಈವರೆಗಿನ ಅತ್ಯುತ್ತಮ ಸಾಧನೆಯಾಗಿತ್ತು. 15 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಸಿರಿಲ್ ವರ್ಮಾ ಸ್ವರ್ಣ ಗೆದ್ದರೆ, 17 ವರ್ಷದೊಳಗಿನ ಬಾಲಕರ ಡಬಲ್ಸ್‌ನಲ್ಲಿ ಚಿರಾಗ್ ಶೆಟ್ಟಿ– ಎಂ.ಆರ್.ಅರ್ಜುನ್ ಜೋಡಿ ಚಾಂಪಿಯನ್ ಆಗಿತ್ತು.

ಪ್ರೀತಿಸ್ಮಿತಾ ವಿಶ್ವದಾಖಲೆ

ಪ್ರೀತಿಸ್ಮಿತಾ ಭೊಯಿ

ಮನಾಮಾ (ಬಹರೇನ್) (ಪಿಟಿಐ): ಭಾರತದ 16 ವರ್ಷ ವಯಸ್ಸಿನ ವೇಟ್‌ಲಿಫ್ಟರ್ ಪ್ರೀತಿಸ್ಮಿತಾ ಭೊಯಿ ಅವರು ಭಾನುವಾರ ಏಷ್ಯನ್ ಯೂತ್ ಗೇಮ್ಸ್‌ನಲ್ಲಿ 158 ಕೆ.ಜಿ. ಭಾರ (66 ಕೆ.ಜಿ. + 92 ಕೆ.ಜಿ.) ಎತ್ತಿ ಚಿನ್ನ ಗೆದ್ದರಲ್ಲದೇ, ಆ ಹಾದಿಯಲ್ಲಿ ಕ್ಲೀನ್ ಆ್ಯಂಡ್ ಜರ್ಕ್ ವಿಭಾಗದಲ್ಲಿ ನೂತನ ವಿಶ್ವ ದಾಖಲೆಯನ್ನು ಸ್ಥಾಪಿಸಿದರು.

44 ಕೆ.ಜಿ.ಯೊಳಗಿನ ಬಾಲಕಿಯರ ವಿಭಾಗದಲ್ಲಿ ಪ್ರೀತಿಸ್ಮಿತಾ ಅವರು ಸ್ನ್ಯಾಚ್‌ನಲ್ಲಿ 66 ಕೆ.ಜಿ. ಮತ್ತು ಕ್ಲೀನ್ ಮತ್ತು ಜರ್ಕ್‌ನಲ್ಲಿ 92 ಕೆ.ಜಿ. ಎತ್ತಿದರು. ಮೊದಲೆರಡು ಯತ್ನಗಳಲ್ಲಿ ಕ್ರಮವಾಗಿ 87 ಕೆ.ಜಿ. ಹಾಗೂ 90 ಕೆ.ಜಿ. ಭಾರ ಎತ್ತಿದ್ದ ಅವರು ಮೂರನೇ ಯತ್ನದಲ್ಲಿ ಈ ಸಾಧನೆ ಮಾಡಿದರು.

60 ಕೆ.ಜಿ.ಯೊಳಗಿನ ಬಾಲಕರ ಸ್ಪರ್ಧೆಯಲ್ಲಿ ಮಹಾರಾಜನ್ ಆರುಮುಗಪಾಂಡ್ಯನ್ ಅವರು ಒಟ್ಟು 256 ಕೆ.ಜಿ. (114 ಕೆ.ಜಿ. + 142 ಕೆ.ಜಿ.) ಭಾರ ಎತ್ತಿ, ಬೆಳ್ಳಿ ಪದಕಕ್ಕೆ ಕೊರಳೊಡ್ಡಿದರು.

ಚೀನಾದ ಶೆನ್ ಷುವಾನ್ಫಾ (261 ಕೆ.ಜಿ.) ಸ್ವರ್ಣದ ಪದಕ ತಮ್ಮದಾಗಿಸಿಕೊಂಡರು.

ಕೊಕ್ಕೊ: ಕರ್ನಾಟಕ ಚಾಂಪಿಯನ್

ಪ್ರಜಾವಾಣಿ ವಾರ್ತೆ

ದಾವಣಗೆರೆ: ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ದಕ್ಷಿಣ ಭಾರತ ಮಟ್ಟದ ಕೊಕ್ಕೊ ಚಾಂಪಿಯನ್‌ಷಿಪ್‌ನ ಮಹಿಳೆಯರ ವಿಭಾಗದಲ್ಲಿ ಕರ್ನಾಟಕ ಹಾಗೂ ಪುರುಷರ ವಿಭಾಗದಲ್ಲಿ ಕೇರಳ ತಂಡಗಳು ಗೆಲುವು ಸಾಧಿಸಿದವು.

3 ದಿನಗಳಿಂದ ನಡೆದ ಕೊಕ್ಕೊ ಚಾಂಪಿಯನ್‌ಷಿಪ್‌ನ ಫೈನಲ್ ಪಂದ್ಯಗಳು ಭಾನುವಾರ ರೋಚಕ ಕ್ಷಣಗಳಿಗೆ ಸಾಕ್ಷಿಯಾದವು. ರೌಂಡ್ ರಾಬಿನ್ ಮಾದರಿಯಲ್ಲಿ ನಡೆದ ಟೂರ್ನಿಯಲ್ಲಿ ಕರ್ನಾಟಕದ ಮಹಿಳಾ ತಂಡ 5 ಪಂದ್ಯಗಳಲ್ಲಿ ಜಯಶಾಲಿಯಾಗಿ ಚಾಂಪಿಯನ್ ಪಟ್ಟ ಗಿಟ್ಟಿಸಿಕೊಂಡಿತು. 4 ಪಂದ್ಯಗಳಲ್ಲಿ ಗೆಲುವು ಸಾಧಿಸಿದ್ದ ಕರ್ನಾಟಕ ಪುರುಷರ ತಂಡವು ಕೇರಳದ ಎದುರು ಸೋತು ರನ್ನರ್‌ಅಪ್ ಆಯಿತು.

ಫೈನಲ್ ಪಂದ್ಯದಲ್ಲಿ ಆರಂಭದಿಂದಲೂ ಹಿಡಿತ ಸಾಧಿಸಿದ ಕರ್ನಾಟಕ ಮಹಿಳಾ ತಂಡವು ಕೇರಳ ತಂಡವನ್ನು 36-10ರಿಂದ ಮಣಿಸಿತು. ಪುರುಷರ ವಿಭಾಗದಲ್ಲಿ ಕೇರಳ ತಂಡಕ್ಕೆ ಪೈಪೋಟಿ ಒಡ್ಡಿದ್ದ ಕರ್ನಾಟಕದ ಆಟಗಾರರು ಅಂತಿಮ ಹಂತದಲ್ಲಿ ಮುಗ್ಗರಿಸಿದರು. ಕೇರಳ ತಂಡವು ಕರ್ನಾಟಕವನ್ನು 30- 27ರಿಂದ ಮಣಿಸಿತು.

ಉತ್ತಮ ಪ್ರದರ್ಶನಕ್ಕಾಗಿ ಕರ್ನಾಟಕದ ಬಿ.ಚೈತ್ರಾ 'ಒನಕೆ ಓಬವ್ವ ಪ್ರಶಸ್ತಿ'ಗೆ ಹಾಗೂ ಕೇರಳದ ಬಿಚ್ಚು ಅವರು 'ವೀರ ಮದಕರಿ ನಾಯಕ' ಗೌರವಕ್ಕೆ ಪಾತ್ರರಾದರು.

ಆಂಧ್ರಪ್ರದೇಶದ ಕುಮಾರಿ, ತೆಲಂಗಾಣದ ಜಿ.ದಿನೇಶ್ ಉತ್ತಮ ಡಿಫೆಂಡರ್, ತಮಿಳುನಾಡಿನ ಜಯಶ್ರೀ, ಆಂಧ್ರಪ್ರದೇಶದ ಮಾರಿಶೆಟ್ಟಿ ಉತ್ತಮ ಅಟ್ಯಾಕರ್, ಕರ್ನಾಟಕ ದಿತ್ಯಾ ಪಾಟೀಲ್, ಕೇರಳದ ಕಾವ್ಯಾ ಕೃಷ್ಣ ಉತ್ತಮ ಆಲ್‌ರೌಂಡರ್ ಹಾಗೂ ತಮಿಳುನಾಡಿನ ಜೆ.ಅಲ್ಲೆನ್ಸ್, ಕರ್ನಾಟಕದ ಮಾನ್ಯಾ ಭರವಸೆಯ ಆಟಗಾರರಾಗಿ ಹೊರಹೊಮ್ಮಿದರು.

ಮಯೂರ
ನವೆಂಬರ್ 2025
ಕೊಂಡು ಓದಿ, ಓದಿಸಿ
ಮಯೂರ ಲಾಸ್ಯ-ವಿಶೇಷ
ಮಾತು ಕತೆ
'ಹೆಣ್ಣಿನ ಚಿಂತನೆ ಬದಲಾಗಿದೆ; ಸಮಾಜದ ಚಿಂತನೆ ಬದಲಾಗಿಲ್ಲ...'
ವೀಣಾ ಶಾಂತೇಶ್ವರ ಸಂದರ್ಶನ ಗೀತಾ ವಸಂತ
'ಅಂಬೇಡ್ಕರ್ ಬಗೆಗಿನ ಡಿಎಸ್‌ಎಸ್ ತಿಳಿವಳಿಕೆ ಸೀಮಿತವಾದುದು, ಸಮಗ್ರವಾದುದಲ್ಲ...'
ವಲೇರಿಯನ್ ರೊಡ್ರಿಗಸ್ ಸಂದರ್ಶನ ಶಶಿಕುಮಾರ್
'ವರ್ತಮಾನದ ಎಚ್ಚರದಲ್ಲಿಯೇ ಫ್ಯಾಂಟಸಿ ಸೃಷ್ಟಿಸಬೇಕು...'
ಕೆ. ಶಿವಲಿಂಗಪ್ಪ ಹಂದಿಹಾಳು ಸಂದರ್ಶನ ದಸ್ತಗೀರಸಾಬ್ ದಿನ್ನಿ


ನಂದಾದೀಪ
ಎಸ್.ಎಲ್. ಭೈರಪ್ಪ: ಹನಿ ಹನಿ ನೆನಪುಗಳು
ಕೃಷ್ಣಮೂರ್ತಿ ಹನೂರು
ಕಡೆಂಗೋಡ್ಲು ಶಂಕರಭಟ್ಟ ಅವರ ಇಂದಿನ ದೇವರು
ಎಸ್.ಆರ್. ವಿಜಯಶಂಕರ ವಿಶ್ಲೇಷಣೆ
ಹೊಸ ಮಾಲಿಕೆ
ಯುಗಸಂಧಿಕಾಲದ ಕಥೆಗಾರ
ಎಂ.ಆರ್. ದತ್ತಾತ್ರಿ
ನಕ್ಷತ್ರಪಟ
• ರಾಜಶೇಖರ ಕುಕ್ಕುಂದಾ
• ಸುನಂದಾ ಕಡಮೆ
• ಗುಂಡುರಾವ್ ದೇಸಾಯಿ
• ಜಿ.ವಿ. ಅರುಣ
ಕವಿಸಮಯ
• ಅಪರ್ಣಾ ಹೆಗಡೆ
ನನ್ನ ಓದು
• ಟಿ.ಎಸ್. ನಾಗರಾಜಶೆಟ್ಟಿ
• ರಾಧೇಶ ತೋಳ್ಪಾಡಿ
• ವಾಸುದೇವ ಶರ್ಮಾ
• ಲಲಿತಾ ಕೆ. ಹೊಸಪ್ಯಾಟಿ
• ತಮ್ಮಣ್ಣ ಬೀಗಾರ
ಕಥಾಕಾಲ
• ಪ್ರತಿಭಾ ನಂದಕುಮಾರ್
• ಚಂದ್ರಶೇಖರ ತಾಳ್ಯ
• ಮೊಗಳ್ಳಿ ಗಣೇಶ್
• ಕಾ.ತ. ಚಿಕ್ಕಣ್ಣ
• ಪ್ರೇಮಕುಮಾರ್ ಹರಿಯಬ್ಬೆ
• ಜಿ.ಎಸ್. ಸುಶೀಲಾದೇವಿ ಆರ್. ರಾವ್
ಅಂಕಣಗಳು
ಆರಿಫ್ ರಾಜಾ ಅವರ ಕಾವ್ಯಸಂಕದಲ್ಲಿ ಪ್ಯಾಲೆಸ್ಟೀನ್ ಕವಯಿತ್ರಿ ಇಮಾಮ್ ಸಂದರ್ಶನ
ಕಾಡಿಗೆ ಕಣ್ಣು
ಆ ಕಡ್ಡಿಗೆ ಜೀವ ಬರುವ ಹೊತ್ತು
ಕಲೀಮ್ ಉಲ್ಲಾ
ಚಂದಾದಾರರಾಗಲು ಸಂಪರ್ಕಿಸಿ
email: readerservice@deccanherald.co.in
Contact: 9606495259 / 9008366666
₹35
editormy@mayura.co.in
mayuraezine.com
/mayuramonthly
080-45557333/264

ಗೋವಾ ಬೌಲರ್‌ಗಳ ಕಾಡಿದ ಕರುಣ್

ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯ: ಮೊದಲ ಇನಿಂಗ್ಸ್‌ನಲ್ಲಿ ಕರ್ನಾಟಕ ಉತ್ತಮ ಮೊತ್ತ

• ಜಿ.ಶಿವಕುಮಾರ

ಶಿವಮೊಗ್ಗ: ಕರ್ನಾಟಕ ತಂಡದ ಉಪನಾಯಕ ಕರುಣ್ ನಾಯರ್ (ಔಟಾಗದೆ 174; 267ಎ, 4X14, 6X3) ತಮ್ಮ ನೆಚ್ಚಿನ ಅಂಗಳದಲ್ಲಿ ಭಾನುವಾರ ಅಚ್ಚಳಿಯದ ಹೆಜ್ಜೆಗುರುತು ಮೂಡಿಸಿದರು. ಸಂಕಷ್ಟದಲ್ಲೂ ಸೊಬಗಿನ ಇನಿಂಗ್ಸ್ ಕಟ್ಟಿ ಪ್ರೇಕ್ಷಕರ ಮನ ಗೆದ್ದರು. ತಾಳ್ಮೆಯಿಂದ ಆಡಿದರೆ ಎಂತಹ ಸವಾಲನ್ನಾದರೂ ಮೆಟ್ಟಿ ನಿಲ್ಲಬಹುದು ಎಂಬುದನ್ನು ಸಾಬೀತು ಮಾಡಿದರು.

ಇವರ ಏಕಾಂಗಿ ಹೋರಾಟದಿಂದಾಗಿ ಆತಿಥೇಯರು ಇಲ್ಲಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಗೋವಾ ವಿರುದ್ಧದ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 110.1 ಓವರ್‌ಗಳಲ್ಲಿ 371ರನ್ ಕಲೆಹಾಕಿದ್ದಾರೆ. ಪ್ರಥಮ ಇನಿಂಗ್ಸ್ ಶುರು ಮಾಡಿರುವ ಗೋವಾ ಮಳೆಯಿಂದಾಗಿ ಆಟ ಸ್ಥಗಿತಗೊಳ್ಳುವ ಮುನ್ನ 13 ಓವರ್‌ಗಳಲ್ಲಿ 1 ವಿಕೆಟ್‌ಗೆ 28 ರನ್ ಗಳಿಸಿದೆ.

ಮೊದಲ ದಿನವೇ (ಶನಿವಾರ) ಮೇಲುಗೈ ಸಾಧಿಸುವ ಗೋವಾ ತಂಡದ ಕನಸಿಗೆ ತಣ್ಣೀರೆರಚಿದ್ದ ಕರುಣ್, ಭಾನುವಾರವೂ ಕಲಾತ್ಮಕ ಆಟ ಆಡಿದರು. 69 ಓವರ್‌ಗಳಲ್ಲಿ 5 ವಿಕೆಟ್‌ಗೆ 222ರನ್‌ಗಳಿಂದ ಎರಡನೇ ದಿನದಾಟ ಮುಂದುವರಿಸಿದ ಮಯಂಕ್ ಅಗರವಾಲ್ ಬಳಗ ದಿನದ 9ನೇ ಓವರ್‌ನಲ್ಲಿ ಆಘಾತ ಅನುಭವಿಸಿತು. ಛಲದ ಆಟ ಆಡಿದ ಶ್ರೇಯಸ್ ಗೋಪಾಲ್ (57; 109ಎ, 4x6, 6x1) ಅರ್ಧಶತಕ ಗಳಿಸಿ ಔಟಾದರು. ಇನಿಂಗ್ಸ್‌ನ 78ನೇ ಓವರ್ ಬೌಲ್ ಮಾಡಿದ ವಿಜೇಶ್ ಪ್ರಭುದೇಸಾಯಿ ಎರಡನೇ ಎಸೆತದಲ್ಲಿ ಶ್ರೇಯಸ್ ವಿಕೆಟ್ ಉರುಳಿಸಿ, 117 ರನ್‌ಗಳ ಆರನೇ ವಿಕೆಟ್ ಜೊತೆಯಾಟ ಮುರಿದರು.

ನಂತರ ಕರುಣ್, 'ಬಾಲಂಗೋಚಿ'ಗಳ ಜತೆ ಸೇರಿ ಇನಿಂಗ್ಸ್ ಬೆಳೆಸಿದರು. 7ನೇ ವಿಕೆಟ್‌ಗೆ ಯಶೋವರ್ಧನ್ ಪರಂತಾಪ್ (14; 24ಎ, 4x2) ಜೊತೆ 26 ರನ್, 8ನೇ ವಿಕೆಟ್‌ಗೆ ವೈಶಾಖ ವಿಜಯಕುಮಾರ್ (31; 53ಎ, 4x4) ಜೊತೆ 99 ಎಸೆತಗಳಲ್ಲಿ 60 ರನ್ ದಾಖಲಿಸಿ ತಂಡದ ಮೊತ್ತವನ್ನು 300ರ ಗಡಿ ದಾಟಿಸಿದರು.

10ನೇ ವಿಕೆಟ್‌ಗೆ ವಿದ್ವತ್ ಕಾವೇರಪ್ಪ ಜೊತೆಗೂಡಿ ಕಲೆಹಾಕಿದ ಅಷ್ಟೂ ರನ್‌ಗಳು (29) ಕರುಣ್ ಬ್ಯಾಟ್‌ನಿಂದಲೇ ಸಿಡಿದವು. ಅರ್ಜುನ್ ತೆಂಡೂಲ್ಕರ್ ಮಾಡಿದ 105ನೇ ಓವರ್‌ನಲ್ಲಿ ಎರಡು ಸಿಕ್ಸರ್ ಮತ್ತು ಒಂದು ಬೌಂಡರಿ ಬಾರಿಸಿ ಪ್ರೇಕ್ಷಕರ ಸಿಳ್ಳೆ, ಚಪ್ಪಾಳೆ ಗಿಟ್ಟಿಸಿದರು. 111ನೇ ಓವರ್‌ನಲ್ಲಿ ವಿದ್ವತ್, ರನೌಟ್ ಆಗುತ್ತಿದ್ದಂತೆ ಕರ್ನಾಟಕದ ಇನಿಂಗ್ಸ್‌ಗೆ ತೆರೆಬಿತ್ತು.

ಆರಂಭದಲ್ಲೇ ಮೇಲುಗೈ: ಗೋವಾ ತಂಡದ ಆರಂಭ ಉತ್ತಮವಾಗಿರಲಿಲ್ಲ. ಇನಿಂಗ್ಸ್‌ನ ನಾಲ್ಕನೇ ಓವರ್‌ನ 5ನೇ ಎಸೆತದಲ್ಲಿ ಮಂಥನ್ ಖುತ್ಕರ್ ವಿಕೆಟ್ ಪಡೆದ ಅಭಿಲಾಷ್ ಶೆಟ್ಟಿ ಆತಿಥೇಯರಿಗೆ ಮೇಲುಗೈ ತಂದುಕೊಟ್ಟರು. ನಂತರ ಸುಯಶ್ ಎಸ್.ಪ್ರಭುದೇಸಾಯಿ ಮತ್ತು ಅಭಿನವ್ ತೇಜ್‌ರಾಣಾ ಎಚ್ಚರಿಕೆಯಿಂದ ಆಡಿದರು. ಮಧ್ಯಾಹ್ನ 2.40ರಿಂದ ಮಳೆ ಬಿರುಸಾಗಿ ಸುರಿದು ಮೈದಾನ ಒದ್ದೆಯಾಗಿದ್ದರಿಂದ ಕೊನೆಯ ಅವಧಿಯ ಆಟ ನಡೆಯಲಿಲ್ಲ.

ನವುಲೆಯಲ್ಲಿ ಕರುಣ್ ಎರಡನೇ ಶತಕ

ನವುಲೆಯ ಮೈದಾನದಲ್ಲಿ ಕರುಣ್ ಎರಡನೇ ಶತಕ ಸಿಡಿಸಿದರು. ಭಾನುವಾರ ಗಳಿಸಿದ 174 ರನ್ ಈ ಅಂಗಳದಲ್ಲಿ ಅವರ ವೈಯಕ್ತಿಕ ಗರಿಷ್ಠ ಮೊತ್ತವೂ ಆಯಿತು.

2017ರಲ್ಲಿ ಹೈದರಾಬಾದ್ ವಿರುದ್ಧದ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ಅವರು 134 ರನ್ ಬಾರಿಸಿದ್ದರು. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಕರುಣ್ ದಾಖಲಿಸಿದ 25ನೇ ಶತಕ ಇದಾಗಿದೆ.

ವೇಗಿಗಳಿಗೆ ನೆರವು

ನವುಲೆಯ ಮೈದಾನ ಮೊದಲ ಎರಡು ದಿನ ವೇಗಿಗಳಿಗೆ ಹೆಚ್ಚಿನ ನೆರವು ನೀಡಿದೆ. ಒಟ್ಟು 10 ವಿಕೆಟ್‌ಗಳಲ್ಲಿ 8 ವಿಕೆಟ್‌ಗಳು ವೇಗದ ಬೌಲರ್‌ಗಳ ಪಾಲಾಗಿವೆ.

ಗೋವಾದ ಅರ್ಜುನ್ ತೆಂಡೂಲ್ಕರ್ ಮತ್ತು ವಿ.ಕೌಶಿಕ್ ತಲಾ ಮೂರು, ವಿಜೇಶ್ ಪ್ರಭುದೇಸಾಯಿ ಮತ್ತು ಕರ್ನಾಟಕದ ಅಭಿಲಾಷ್ ಶೆಟ್ಟಿ ತಲಾ ಒಂದು ವಿಕೆಟ್ ಪಡೆದಿದ್ದಾರೆ.

ಗೋವಾ ವಿರುದ್ಧದ ಪಂದ್ಯದಲ್ಲಿ ಶತಕ ಸಿಡಿಸಿ ಸಂಭ್ರಮಿಸಿದ ಕರ್ನಾಟಕ ತಂಡದ ಕರುಣ್ ನಾಯರ್
ಚಿತ್ರ: ಕೃಷ್ಣ ಕುಮಾರ್ ಪಿ.ಎಸ್.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್

ಕರ್ನಾಟಕ: 110.1 ಓವರ್‌ಗಳಲ್ಲಿ 371 (ಶನಿವಾರ 69 ಓವರ್‌ಗಳಲ್ಲಿ 5 ವಿಕೆಟ್‌ಗೆ 222)

ಕರುಣ್ ನಾಯರ್ ಔಟಾಗದೆ 174 (267ಎ, 4X14, 6X3)
ಶ್ರೇಯಸ್ ಗೋಪಾಲ್ ಸಿ ಸ್ನೇಹಲ್ ಬಿ ವಿಜೇಶ್ 57 (109ಎ, 4X6, 6X1)
ಯಶೋವರ್ಧನ್ ಪರಂತಾಪ್ ಸಿ ವಿಜೇಶ್ ಬಿ ಕೌಶಿಕ್ 14 (24ಎ, 4X2)
ವೈಶಾಖ ಎಲ್‌ಬಿಡಬ್ಲ್ಯು ದರ್ಶನ್ 31 (53ಎ, 4X4)
ಅಭಿಲಾಷ್ ಶೆಟ್ಟಿ ಸಿ ಅಭಿನವ್ ಬಿ ದರ್ಶನ್ 02 (10ಎ)
ವಿದ್ವತ್ ಕಾವೇರಪ್ಪ ರನೌಟ್ 00 (9ಎ)
ಇತರೆ: 22 (ನೋಬಾಲ್ 6, ವೈಡ್ 2, ಬೈ 5, ಲೆಗ್ ಬೈ 9).
ವಿಕೆಟ್ ಪತನ: 6–245 (ಶ್ರೇಯಸ್; 77.2), 7–271 (ಯಶೋವರ್ಧನ್; 83.1), 8–331 (ವೈಶಾಖ; 99.2), 9–342 (ಅಭಿಲಾಷ್; 103.3), 10–371 (ವಿದ್ವತ್; 110.1).
ಬೌಲಿಂಗ್: ಅರ್ಜುನ್ ತೆಂಡೂಲ್ಕರ್ 29–6–100–3, ವಿ.ಕೌಶಿಕ್ 27.1–11–35–3, ವಿಜೇಶ್ ಪ್ರಭುದೇಸಾಯಿ 20–3–86–1, ದರ್ಶನ್ ಮಿಸಾಳ್ 18–0–74–2, ಮೋಹಿತ್ ರೆಡ್ಕರ್ 9–0–35–0, ಸುಯಶ್ ಎಸ್.ಪ್ರಭುದೇಸಾಯಿ 4–0–8–0, ಲಲಿತ್ ಯಾದವ್ 3–0–19–0.

ಗೋವಾ: 13 ಓವರ್‌ಗಳಲ್ಲಿ 1 ವಿಕೆಟ್‌ಗೆ 28

ಮಂಥನ್ ಖುತ್ಕರ್ ಸಿ ಶ್ರೀಜಿತ್ ಬಿ ಅಭಿಲಾಷ್ 9 (17ಎ, 4X1)
ಸುಯಶ್ ಬ್ಯಾಟಿಂಗ್ 11 (36ಎ, 4X1)
ಅಭಿನವ್ ತೇಜ್‌ರಾಣಾ ಬ್ಯಾಟಿಂಗ್ 8 (25ಎ, 4X1).
ವಿಕೆಟ್ ಪತನ: 1–9 (ಮಂಥನ್; 3.5).
ಬೌಲಿಂಗ್: ವಿದ್ವತ್ ಕಾವೇರಪ್ಪ 6–1–11–0, ಅಭಿಲಾಷ್ ಶೆಟ್ಟಿ 5–2–9–1, ಯಶೋವರ್ಧನ್ ಪರಂತಾಪ್ 1–0–3–0, ವೈಶಾಖ ವಿಜಯಕುಮಾರ್ 1–0–5–0.

ವಿಶ್ವ ಕುಸ್ತಿ: ಫೈನಲ್‌ಗೆ ಸುಜೀತ್

ನೋವಿಸಾದ್ (ಸರ್ಬಿಯಾ) (ಪಿಟಿಐ): ಭಾರತದ ಸುಜೀತ್ ಕಲ್ಕಲ್ ಅವರು 23 ವರ್ಷದೊಳಗಿನವರ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್ ನಲ್ಲಿ ಭಾನುವಾರ ಪ್ರಶಸ್ತಿ ಸುತ್ತು ಪ್ರವೇಶಿಸಿದರು.

ಪುರುಷರ 65 ಕೆ.ಜಿ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಛಾಪು ಮೂಡಿಸಿರುವ ಸುಜೀತ್ ಅವರು ತೀವ್ರ ಹಣಾಹಣಿಯಿಂದ ಕೂಡಿದ್ದ ಸೆಮಿಫೈನಲ್ ಪಂದ್ಯದಲ್ಲಿ 3–2ರಿಂದ ಜಪಾನ್‌ನ ಯೂಟೊ ನಿಶಿಯುಶಿ ವಿರುದ್ಧ ಗೆಲುವು ಸಾಧಿಸಿದರು. ಆರಂಭಿಕ ಹಿನ್ನಡೆಯಿಂದ (1–2) ಚೇತರಿಸಿಕೊಂಡು ಎದುರಾಳಿಯ ವಿರುದ್ಧ ಮೇಲುಗೈ ಸಾಧಿಸಿದರು.

ಸುಜೀತ್ ಅವರು ಇದಕ್ಕೂ ಮೊದಲು ನಡೆದ ಎಂಟರ ಘಟ್ಟದ ಪಂದ್ಯದಲ್ಲಿ ಬಷೀರ್ ಮಗೊಮೆಡೊವ್ ಅವರನ್ನು 4–2ರಿಂದ ಮಣಿಸಿದ್ದರು.

ಆದರೆ, ಶುಭಂ (61 ಕೆ.ಜಿ.) ಹಾಗೂ ವಿಕ್ಕಿ (97 ಕೆ.ಜಿ.) ಅವರು ಕ್ವಾರ್ಟರ್‌ಫೈನಲ್‌ನಲ್ಲಿ ಸೋಲುವುದರೊಂದಿಗೆ ಅಭಿಯಾನ ಮುಗಿಸಿದರು. 86 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿದ್ದ ಆಶಿಶ್ ಅವರೂ ಕ್ವಾಲಿಫಿಕೇಷನ್ ಸುತ್ತಿನಲ್ಲಿ ಪರಾಭವಗೊಂಡರು.

ಬ್ಯಾಸ್ಕೆಟ್‌ಬಾಲ್: ಬ್ಯಾಂಕ್ ಆಫ್ ಬರೋಡಾಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರವಿಂದ್ ಮತ್ತು ಹರೀಶ್ ಅವರ ಅಮೋಘ ಆಟದ ಬಲದಿಂದ ಬ್ಯಾಂಕ್ ಆಫ್ ಬರೋಡಾ ತಂಡವು ಇಲ್ಲಿ ನಡೆಯುತ್ತಿರುವ ಪ್ರೊ. ಎನ್.ಸಿ. ಪರಪ್ಪ ಸ್ಮಾರಕ ರಾಜ್ಯ 'ಎ'ಡಿವಿಷನ್ ಲೀಗ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಜಯಿಸಿತು.

ಭಾನುವಾರ ಎಂಎನ್‌ಕೆ ರಾವ್ ಪಾರ್ಕ್‌ನಲ್ಲಿ ನಡೆದ ಪಂದ್ಯದಲ್ಲಿ ಬ್ಯಾಂಕ್ ಆಫ್ ಬರೊಡಾ ತಂಡವು 91–77 (46–36) ರಿಂದ ಬೆಂಗಳೂರಿನ ಡಿವೈಇಎಸ್ (ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ) ತಂಡವನ್ನು ಸೋಲಿಸಿತು. ಬ್ಯಾಂಕ್ ತಂಡದ ಅರವಿಂದ್ ಮತ್ತು ಹರೀಶ್ ಕ್ರಮವಾಗಿ 25 ಹಾಗೂ 22 ಅಂಕ ಗಳಿಸಿದರು. ಡಿವೈಇಎಸ್ ತಂಡದ ಕುಶಾಲ್ ಹಾಗೂ ಆದರ್ಶ್ ತಲಾ 14 ಅಂಕ ಸಂಪಾದಿಸಿದರು.

ಇನ್ನೊಂದು ಪಂದ್ಯದಲ್ಲಿ ಎಂಎನ್‌ಕೆ ರಾವ್ ಪಾರ್ಕ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು 76–66ರಿಂದ ವಿವೇಕ್ಸ್ ಸ್ಪೋರ್ಟ್ಸ್ ಕ್ಲಬ್ ಎದುರು ಜಯಿಸಿತು. ಪಾರ್ಕ್ ತಂಡದ ಅಜಿನ್ (22) ಹಾಗೂ ವೆಂಕಟ್ (12) ಉತ್ತಮವಾಗಿ ಆಡಿದರು. ವಿವೇಕ್ಸ್ ತಂಡದ ಮುಕೇಶ್ (21) ಮತ್ತು ವಿನೋದ್ (14) ಉತ್ತಮವಾಗಿ ಆಡಿದರು.

ಮತ್ತೊಂದು ಪಂದ್ಯದಲ್ಲಿ ಎಸ್.ಬ್ಲ್ಯೂಸ್ ತಂಡವು 90–83ರಿಂದ ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ಎದುರು ಗೆದ್ದಿತು. ಬ್ಲ್ಯೂಸ್ ತಂಡದ ವೆಂಕಟ್ ಹಾಗೂ ಧ್ರುವ ತಲಾ 12 ಅಂಕ ಗಳಿಸಿದರು. ಬೀಗಲ್ಸ್ ತಂಡದ ಅಚಿಂತ್ಯ ಮತ್ತು ಪ್ರಥಮ್ ಕ್ರಮವಾಗಿ 25 ಹಾಗೂ 22 ಅಂಕ ಕಲೆಹಾಕಿದರು.

ಚೆಸ್: ಸಾಯಿ, ವಿಷ್ಣುದೇವ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಯಿ ಸಹಾರಾ ಜಿ. ಹಾಗೂ ವಿಷ್ಣುದೇವ್ ಪರಮೇಶ್ ಅವರು ಚಾಂಪಿಯನ್ಸ್ ಚೆಸ್ ಅಕಾಡೆಮಿ ಭಾನುವಾರ ಆಯೋಜಿಸಿದ್ದ ರ್‍ಯಾಪಿಡ್ ಚೆಸ್ ಟೂರ್ನಿಯಲ್ಲಿ ಕ್ರಮವಾಗಿ 16 ಮತ್ತು 10 ವರ್ಷದೊಳಗಿನವರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು.

16 ವರ್ಷದೊಳಗಿನವರ ವಿಭಾಗದಲ್ಲಿ ನಾಲ್ವರು ಸ್ಪರ್ಧಿಗಳು ತಲಾ 5 ಅಂಕ ಗಳಿಸಿದ್ದರಿಂದ ಟೈಬ್ರೇಕರ್ ಆಡಿಸಲಾಯಿತು.

ಟೈಬ್ರೇಕರ್‌ನಲ್ಲಿ ಸಾಯಿ ಅವರು ಜಯಶಾಲಿ ಆಗುವುದರೊಂದಿಗೆ ಪ್ರಶಸ್ತಿ ತಮ್ಮದಾಗಿಸಿಕೊಂಡರು.

6 ಸುತ್ತುಗಳಿಂದ ಒಟ್ಟು 5.5 ಅಂಕ ಸಂಪಾದಿಸಿದ್ದ ವಿಷ್ಣುದೇವ್ ಅವರು 10 ವರ್ಷದೊಳಗಿನವರ ವಿಭಾಗದಲ್ಲಿ ಚಾಂಪಿಯನ್ ಆದರು.